CC-O. In Public Domain. Digitized by eGangotri

ಗೀತಾತಾತ್ಪರ್ಯ ನಿರ್ಣಯ

ಲೇಖಕರು :
ಪಂಡಿತಪ್ರವರ ಶ್ರೀ ಕೃಷ್ಣ ಜೋಯಿಸ್

ಪ್ರಕಾಶಕರು :
ಶ್ರೀ ಶಾರದಾ ಟ್ರಸ್ಟ್,
4581, "ಗೋಮತಿ" ನರಸಿಂಹರಾಜ ಮೊಹಲ್ಲಾ,
ಮೈಸೂರು-570 004

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಗೀತಾತಾತ್ಪರ್ಯ ನಿರ್ಣಯ

ಲೇಖಕರು :

ಪಂಡಿತಪ್ರವರ ಶ್ರೀ ಕೃಷ್ಣ ಜೋಯಿಸ್

ಪ್ರಕಾಶಕರು :

ಶ್ರೀ ಶಾರದಾ ಟ್ರಸ್ಟ್,

4581, "ಗೋಮತಿ" ನರಸಿಂಹರಾಜ ಮೊಹಲ್ಲಾ,

ಮೈಸೂರು–570 007

Sri Vidyabharathi Book Centre, Sringeri

CC-O. In Public Domain. Digitized by eGangotri
ಗೀತಾತಾತ್ಪರ್ಯ ನಿರ್ಣಯ_ಪಂಡಿತಪ್ರವರ ಶ್ರೀ ಕೃಷ್ಣ ಜೋಯಿಸ್

© ಎಲ್ಲಾ ಹಕ್ಕುಗಳೂ ಪ್ರಕಾಶಕರದು

ಬೆಲೆ : 8-00 ರೂಪಾಯಿ

ಮುದ್ರಕರು ;
ಶ್ರೀ ಶಾರದ ಮುದ್ರಣ ಪ್ರಕಾಶನಾಲಯ (ಪ್ರೈ.) ಲಿ., ಮೈಸೂರು–570 004

Sri Vidyabharathi Book Centre, Sringeri

CC-O. In Public Domain. Digitized by eGangotri

॥ श्री शृङ्गेरी श्रीजगद्गुरुमहासंस्थानम् ॥

श्री
विद्या-
शंकर

श्रीमत्परमहंसपरिव्राजकाचार्यवर्य पदवाक्यप्रमाणपारावार-पारीण यमनियमासनप्राणायामप्रत्याहाराधारणाध्यानसमाध्य-ष्टाङ्गयोगानुष्ठाननिष्ठ तपश्चक्रवर्त्यनाद्यविच्छिन्न श्रीशङ्करा-चार्यगुरुपरम्पराप्राप्त षड्दर्शनस्थापनाचार्य व्याख्यान-सिंहासनाधीश्वर सकल निगमागमसारहृदय सांख्यत्रयप्रतिपादक वैदिकमार्गप्रवर्तक सर्वतन्त्रस्वतन्त्रादिराजधानीविद्यानगरमहा-राजधानीकर्णाटकसिंहासनप्रतिष्ठापनाचार्य श्रीमद्राजाधिराज-गुरुभूमण्डलाचार्य ऋष्यशृङ्गपुरवराधीश्वर तुङ्गभद्रतीरवासि श्रीमद्विद्याशङ्करपादपद्माराधक श्रीजगद्गुरु श्रीमदभिनव-विद्यातीर्थस्वामिगुरुकरकमलसञ्जात

॥ श्री जगद्गुरु शृङ्गेरी श्रीमद्भारतीतीर्थस्वामिभिः ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂದೇಶ

ನಿಖಿಲಾಸ್ತಿಕಸಮಾಜನೇಷು ನಾರಾಯಣಸ್ಮರಣಪೂರ್ವಕಂ ವಿರಚಿತಾ ಆಶಿಷಸ್ಸಮುಲ್ಲಸಂತು.

ಅಧ್ಯಾತ್ಮತತ್ತ್ವ ಪ್ರತಿಪಾದಕ ಗ್ರಂಥಗಳಲ್ಲಿ ಶ್ರೀಮದ್ಭಗವದ್ಗೀತೆಗೆ ವಿಶಿಷ್ಟವಾದ ಸ್ಥಾನವಿದೆ. ಕರ್ಮೋಪಾಸನಾ ಜ್ಞಾನ ಮಾರ್ಗಗಳನ್ನು ತಿಳಿಸತಕ್ಕದ್ದಾದರೂ ಸರ್ವಕರ್ಮ ಸನ್ಯಾಸಪೂರ್ವಕವಾದ ಆತ್ಮಜ್ಞಾನದಿಂದಲೇ ಮೋಕ್ಷ ಸಿದ್ಧಿಯಾಗುತ್ತದೆಂಬುದು ಭಗವದ್ಗೀತೆಯ ಪರಮ ತಾತ್ಪರ್ಯ. ಇದನ್ನು ಶ್ರೀಮಚ್ಛಂಕರ ಭಗವತ್ಪಾದಾಚಾರ್ಯರು ಗೀತಾ ಭಾಷ್ಯದಲ್ಲಿ ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ.

ಭಗವದ್ಗೀತೆಯನ್ನು ಪಾರಾಯಣ ಮಾಡುವುದು ಶ್ರೇಯಸ್ಸಾಧನ. ಅದರ ಅರ್ಥವನ್ನು ತಿಳಿದು ಅದರಂತೆ ಅನುಷ್ಠಿಸುವುದು ಇನ್ನೂ ಹೆಚ್ಚಿನ ಶ್ರೇಯಸ್ಸಿಗೆ ಕಾರಣವಾಗುತ್ತದೆ.

ಪಂಡಿತಪ್ರವರ ಶ್ರೀ ಕೃಷ್ಣ ಜೋಯಿಸರು ಗೀತಾತಾತ್ಪರ್ಯ ನಿರ್ಣಯ ಎಂಬ ಪುಸ್ತಕವನ್ನು ಕನ್ನಡದಲ್ಲಿ ಸುಲಭವಾದ ಶೈಲಿಯಲ್ಲಿ ಬರೆದಿದ್ದಾರೆ. ಅದನ್ನು ನೋಡಿ ನಾವು ಸಂತುಷ್ಟರಾಗಿದ್ದೇವೆ. ಪ್ರಾಚೀನಸಂಪ್ರದಾಯಾನುಸಾರವಾಗಿ ವೇದಾಂತ ಶಾಸ್ತ್ರವನ್ನು ಅಧ್ಯಯನ ಮಾಡಿ ಬಹಳ ವರ್ಷಗಳಿಂದ ಅದರ ಅಧ್ಯಾಪನೆ ಮಾಡುತ್ತಿರುವ ಶ್ರೀ ಜೋಯಿಸರ ಈ ಗ್ರಂಥವು ಅವರ ಮನನದ ಫಲಸ್ವರೂಪವೆಂದೇ ನಮ್ಮ ಆಶಯ. ಈ ಪುಸ್ತಕವು ಗೀತಾತಾತ್ಪರ್ಯ ಜಿಜ್ಞಾಸುಗಳಿಗೆ ಅತ್ಯಂತೋಪಕಾರಕವಾಗಿ ಬೆಳಗಲಿ ಎಂದು ಆಶೀರ್ವದಿಸುತ್ತಿದ್ದೇವೆ.

ಶೃಂಗೇರಿ
ಶ್ರೀಮುಖ ಶ್ರಾವಣ ಪೂರ್ಣಿಮಾ ಸೋಮವಾರ
ದಿನಾಂಕ 2-8-1993

ಇತಿ ನಾರಾಯಣಸ್ಮರಣಂ

ಶ್ರೀ

Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನುಡಿ

ಓಂ ನಮಃ ಪರಮಹಂಸಾಸ್ವಾದಿತ ಚರಣಕಮಲ ಸ್ಮೃತಚಿದಾನಂದಾಯ ಭಕ್ತ ಜನ ಮಾನಸರಾಜಹಂಸಾಯ ಶ್ರೀ ಕೃಷ್ಣಾಯ ವಾಸುದೇವಾಯ (ಓಂ ನಮೋ ಭಗವತೇ ವಾಸುದೇವಾಯ)

ಈ ಗೀತಾ ಶಾಸ್ತ್ರವು ಸ್ಥಿತ ಪ್ರಜ್ಞ, ಗುಣಾತೀತ ವಿಷ್ಣುಭಕ್ತಾಗ್ರೇಸರನೆಂಬುವ ಜೀವನ್ಮುಕ್ತನಿಗೋಸ್ಕರ ಉದ್ಭವಿಸಿಲ್ಲ. ಮುಕ್ತರು ಧನ್ಯರು. ಕೃತಕೃತ್ಯರು ಸಿದ್ಧ ಪುರುಷರು.

ಹಾಗಾದರೆ ಯಾರಿಗಾಗಿ ಉದಯಿಸಿದೆ ? ಎಂದರೆ, ಕೃತಾರ್ಥರಲ್ಲದ ಸಂಸಾರ ಬಂಧದಲ್ಲಿ ಅನಾದಿಕಾಲದಿಂದಲೂ ಸಿಕ್ಕಿಕೊಂಡು ನರಳುತ್ತಿರುವ ಅವಿದ್ಯಾವಂತರಾದ ಮಾನವ ವರ್ಗಕ್ಕಾಗಿ ಈ ಶಾಸ್ತ್ರವು ಆದರ ಉಪದೇಶವು ಅರ್ಜುನನ್ನು ನಿಮಿತ್ತ ಮಾಡಿಕೊಂಡು ಬಂದಿರುವುದು. ಆದರೂ ಸಕಲ ಮಾನವರಿಗೂ ಉಪಯುಕ್ತವಾಗಿದೆ. ಪ್ರಾಸಾದದ ಮೇಲೆ ಹೊತ್ತಿಸಿದೆ ದೀಪವು ಪ್ರಾಸಾದದ ಶೋಭೆಗಾಗಿಯೇ ಆದರೂ ರಸ್ತೆಯಲ್ಲಿ ನಡೆಯುವ ಜನರಿಗೂ ಉಪಯೋಗವಾಗುವಂತೆ, ಈ ಶಾಸ್ತ್ರವು ಸಕಲ ವೇದಾರ್ಥ ಸಾರಸಂಗ್ರಹ ರೂಪವೆಂದು ಭಗವತ್ಪಾದರು ಹೇಳಿದಂತೆ ಕಾಂಡತ್ರಯಾತ್ಮಕವು ಆಹುದು. ಕರ್ಮಕಾಂಡ, ಉಪಾಸನಾಕಾಂಡ, ಜ್ಞಾನಕಾಂಡವೆಂದು ವಿಭಜಿಸಲ್ಪಡುವ ವೇದದಂತೆಯೆ ಕರ್ಮಯೋಗ, ಧ್ಯಾನ (ಉಪಾಸನಾ)ಯೋಗ, ಜ್ಞಾನಯೋಗ ಈ ಮೂರು ಸಾಧನಗಳಿಂದ ಒಡಗೂಡಿರುವುದು. ಯದ್ಯಪಿ, ಲೋಕೇಸ್ಮಿನ್ ದ್ವಿವಿಧಾನಿಷ್ಠಾ ಪುರಾಪ್ರೋಕ್ತಾ ಮಯಾನಘ | ಜ್ಞಾನ ಯೋಗೇನ ಸಾಂಖ್ಯಾನಾಂ ಕರ್ಮ ಯೋಗೇನ ಯೋಗಿನಾಮ್ | ಎಂದು ಎರಡನೆಯದಾಗಿ ಭಗವಂತನು ಉಪದೇಶಿಸಿರುವುದು. ಆದರೂ ಕರ್ಮ ಮತ್ತು ಜ್ಞಾನಗಳ ನಡುವೆ ಧ್ಯಾನವನ್ನೂ (ಉಪಾಸನೆಯನ್ನು) ಹೇಳಿರುವುದರಿಂದ ಅದನ್ನೂ ಹೇಳಿದ ಹಾಗಾಯಿತು. ಧ್ಯಾನಯೋಗದ (ಮೆಟ್ಟಲನ್ನು) ಸೋಪಾನವನ್ನು ಮುಟ್ಟಲು ಮೊಟ್ಟ ಮೊದಲು ಮುಖ್ಯವಾಗಿ ಗೃಹಸ್ಥರು ಕರ್ಮವನ್ನು ಹಿಡಿಯಬೇಕು. ಧ್ಯಾನವು ಒಂದು ಮಾನಸಿಕ ಕ್ರಿಯೆ, ಕರ್ಮದಂತೆ, ಸತತವಾಗಿ ದೇವರನ್ನು ಬಿಡದೆ ಚಿಂತಿಸುವುದೇ ಧ್ಯಾನ (ಉಪಾಸನೆ). ಆದ್ದರಿಂದ ಇದನ್ನು ಪ್ರತ್ಯೇಕವಾಗಿ ಭಗವಂತ ಪರಿಗಣಿಸಲಿಲ್ಲ.

'ಆರುರುಕ್ಷೋರ್ಮುನೇರ್ಯೋಗಂ ಕರ್ಮಕಾರಣಮುಚ್ಯತೇ' ಎಂದಂತೆ ಯೋಗವೆಂಬ ಧ್ಯಾನ ಮಾರ್ಗವನ್ನು ಏರಲು ಬಯಸುವವನು, ನಿಷ್ಕಾಮ ಕರ್ಮವನ್ನೇ ಆಚರಿಸಬೇಕು. ಯೋಗರೂಢನಾದರೆ ಕರ್ಮಸಂನ್ಯಾಸ ಮಾಡಬೇಕಾಗುವುದು. ಹೀಗೆ ಕಾಂಡತ್ರಯಾತ್ಮಕವೆಂದು ಈ ಶಾಸ್ತ್ರವು ವೇದದಂತೆ ಇದೆ. ವೇದಚ್ಛಾಯೆಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುಸರಿಸಿದೆ. ಇದರಲ್ಲಿ ಭಕ್ತಿಯೋಗವನ್ನು ಪ್ರತ್ಯೇಕವಾಗಿ ಹೆಸರಿಸಿ ಗೀತೆಯಲ್ಲಿ ಹೇಳಿಲ್ಲ. ಆದರೂ "ಭಕ್ತ್ಯಾಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ವತಃ |" ಎಂದು ಉಪದೇಶಿಸಿದಂತೆ ಭಕ್ತಿಯೊಂದು ಜ್ಞಾನವನ್ನು ಪಡೆಯಲು ಮುಖ್ಯ ಸಾಧನವಾಗಿರುವುದು. ಸಗುಣೋಪಾಸನೆ ಮಾಡಿ ಸಗುಣ ಸಾಕ್ಷಾರ (ಪರಬ್ರಹ್ಮ) ಸಾಕ್ಷಾತ್ಕಾರಕ್ಕೂ ಸಾಧನವಾಗಿದೆ. ಅಲ್ಲದೆ ಮಂದಾಧಿಕಾರಿಗಳಿಗೆ ಹೇಳಿದ ಕರ್ಮಯೋಗ ಸಾಧನೆಗಳ ಭಕ್ತಿಯು ಇರಲೇಬೇಕು. ಭಕ್ತಿಯಿಲ್ಲದೆ ನಿಷ್ಕಾಮಕರ್ಮವನ್ನು ಮಾಡಿ ಭಗದರ್ಪಣೆ ಮಾಡಲು ಶಕ್ಯವಲ್ಲ.

ಭಕ್ತಿಯೆಂಬುದು ಭಗವಂತನಲ್ಲಿರುವ ಪ್ರೀತಿ ವಿಶೇಷವೇ. ಈ ಭಕ್ತಿಯನ್ನು 'ಮತ್ಕರ್ಮಾತ್ ಮತ್ಪರಮಃ ಮದ್‌ಭಕ್ತಃ ಸಂಗವರ್ಜಿತಃ ||' ಎಂದು ಕರ್ಮಿಗಳಿಗೂ ಹೇಳಿದೆ.

ಪ್ರಕೃತ ಮೇಲೆ ಹೇಳಿದಂತೆ ಕಾಂಡತ್ರಯಾತ್ಮಕವಾದ ಗೀತಾಶಾಸ್ತ್ರವು ಹದಿನೆಂಟು ಅಧ್ಯಾಯಗಳಿಂದ ಕೂಡಿದೆ. ಅದರಲ್ಲಿ ಮೊದಲಿನ ಆರು ಅಧ್ಯಾಯಗಳಲ್ಲಿ ಕರ್ಮಯೋಗವನ್ನು ಮುಖ್ಯವಾಗಿಯೂ, ಏಳನೆಯ ಅಧ್ಯಾಯದಿಂದ ಹನ್ನೆರಡನೆಯ ಅಧ್ಯಾಯಗಳಲ್ಲಿ ಉಪಾಸನೆಯೆಂಬ ಧ್ಯಾನಯೋಗವನ್ನು, ಹದಿಮೂರನೆ ಅಧ್ಯಾಯದಿಂದ ಜೀವೇಶ್ವರರ ಸ್ವರೂಪೈಕ್ಯವನ್ನು ಮುಖ್ಯವಾಗಿ ಹೇಳಿದೆ. ೧೮ನೆಯ ಅಧ್ಯಾಯದಲ್ಲಿ, ಹಿಂದಿನ ಸಕಲಾಧ್ಯಾಯಗಳ ಅರ್ಥವನ್ನು ಉಪಸಂಹರಿಸಲಾಗಿದೆ.

ಕರ್ಮನಿಷ್ಠೆ. ಜ್ಞಾನನಿಷ್ಠೆಗಳಲ್ಲಿ, ಮೊದಲಿನ ಆರು ಅಧ್ಯಾಯಗಳಲ್ಲಿ ಕರ್ಮನಿಷ್ಠೆಯನ್ನು, ಕೊನೆಯ ಆರು ಅಧ್ಯಾಯಗಳಲ್ಲಿ ಜ್ಞಾನ ನಿಷ್ಠೆಯನ್ನು ಹೇಳಿದ್ದು ಏತಕ್ಕೆಂದರೆ ಜ್ಞಾನ ಕರ್ಮ ಸಮುಚ್ಚಯವು ಎಂದಿಗೂ ಒಬ್ಬನಿಗೆ ಏಕಕಾಲದಲ್ಲಿ ಸಾಧಿಸಲಾಗದೆಂದೂ, ಅವುಗಳಿಗೆ ಪರಸ್ಪರ ವಿರೋಧವಿದೆಯೆಂದೂ ತಿಳಿದು ಪ್ರತ್ಯೇಕಿಸಿದೆ.

'ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಮ್' ಎಂದು ಭಗವಂತನೆ ವಿಭಜಿಸಿರುವನಷ್ಟೆ. ಆತ್ಮನಲ್ಲಿ ಕರ್ತೃತ್ವ ಭೋಕ್ತೃತ್ವ ಬುದ್ಧಿಯು ಇರುವಾಗಲೇ ಅವಿದ್ಯಾವಂತರಾದ ಮಾನವರಿಗೆ, ಅಧಿಕೃತ ಪುರುಷರಿಗೆ ಕರ್ಮಯೋಗವು ನಾನು ಕರ್ತನೂ ಅಲ್ಲ ; ಭೋಕ್ತೃವೂ ಅಲ್ಲ. ಒಟ್ಟಿನಲ್ಲಿ ಸಂಸಾರಿಯಾದವನಲ್ಲ. ಮತ್ತೇನೆಂದರೆ, ಸಂಸಾರ ಬಂಧವಿರದೆ ನಿತ್ಯಮುಕ್ತ, ನಿತ್ಯಶುದ್ಧ, ನಿತ್ಯಬುದ್ಧ, ಅಖಂಡ ಸಚ್ಚಿದಾನಂದ ಸ್ವರೂಪನಾದ ಆನಿರ್ಗುಣಪರಬ್ರಹ್ಮವೇ ತಾನೆಂದು ತಿಳಿಯುವ ಅನುಭವಾತ್ಮಕವಾದ ಜ್ಞಾನವು ಜ್ಞಾನಯೋಗ, ಇದು ಜ್ಞಾನಿಗಳಿಗೆ (ಜ್ಞಾನ ಸಾಧಕನಾದ ಸಂನ್ಯಾಸಿಗೂ) ಅಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಕ್ತಿನಿಷ್ಠೆಯೆಂಬುದು ಅನನ್ಯಭಕ್ತಿ ಕರ್ಮಮಿಶ್ರವಾಗಿಯೂ, ಜ್ಞಾನಮಿಶ್ರವಾಗಿಯೂ, ಮಿಶ್ರವಾಗದ ಶುದ್ಧ ಭಕ್ತಿಯಾಗಿಯೂ ಇರುವುದೆಂದು, ಮಧ್ಯಮ ೬ ಅಧ್ಯಾಯಗಳಲ್ಲಿ ಹೇಳಿದೆ. ಶುದ್ಧಭಕ್ತಿನಿಷ್ಠೆ, ಪ್ರಥಮ (೧-ರಿಂದ ೬) ದಲ್ಲಿ ಕರ್ಮದೊಂದಿಗೆ ಹೇಳಿದ್ದರಿಂದ ಕರ್ಮಮಿಶ್ರವಾಯಿತು. ಕೊನೆಯ ೬ ಅಧ್ಯಾಯಗಳಲ್ಲಿ ಜ್ಞಾನನಿಷ್ಠೆಯಿಂದ ಮಿಶ್ರವಾಗಿ ಜ್ಞಾನಮಿಶ್ರವಾಯಿತು. ಪ್ರಥಮ ಷಟ್ಕದಲ್ಲಿ ತ್ವಂ ಪದಾರ್ಥ ಶೋಧನೆಯು ಸ್ವಲ್ಪವಾಗಿ ನಡೆದಿದೆ (೨ ನೆ ಅಧ್ಯಾಯ). ತ್ವಂ ಪದಾರ್ಥ ಜೀವನು ನಿಜವಾಗಿ ಶುದ್ಧಾತ್ಮನೆಂದೂ, ೨ ನೆ ಆರರಲ್ಲಿ ತತ್‌ಪದಾರ್ಥವಾದ ಈಶ್ವರನನ್ನು ಭಗವದ್‌ಭಕ್ತಿನಿಷ್ಠೆಯ ವರ್ಣನೆಯ ನೆಪದಿಂದ ತಿಳಿಸಿದೆ. ಈ ರೀತಿಯಾಗಿ ತತ್ ಪದಾರ್ಥ ತ್ವಂ ಪದಾರ್ಥಗಳ ಶೋಧನೆಯಾದ ಮೇಲೆ ೧೩ ನೆ ಅಧ್ಯಾಯದಲ್ಲಿ ಶುದ್ಧ ಪ್ರತ್ಯಾತ್ಮನಿಗೂ ಪರಬ್ರಹ್ಮನಿಗೂ ಇರುವ ಐಕ್ಯವನ್ನೇ ಬೋಧಿಸಿದೆ.

ಪದಾರ್ಥಜ್ಞಾನಗಳಾದ 'ಮೇಲೆ ಮಹಾವಾಕ್ಯಾರ್ಥಜ್ಞಾನ'ವೆಂಬುದು ನಿಯಮ "ತತ್ತ್ವಮಸಿ" ಎಂದಂತೆ "ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ, ಸರ್ವಕ್ಷೇತ್ರೇಷು ಭಾರತ" ಎಂದು ಸಮಸ್ತ ಕ್ಷೇತ್ರವೆಂಬ ಶರೀರಗಳಲ್ಲೂ ಬ್ರಹ್ಮಾದಿ ಸ್ತಂಬ ಪರ್ಯಂತ ಪ್ರಾಣಿ ಶರೀರಗಳಲ್ಲೂ ಇರುವ ಜೀವನು ನಿಜವಾಗಿ ಸಂಸಾರಿಯಲ್ಲ. ಮತ್ತೇನು ? ಅವನು ಪರಮಾತ್ಮನೇ. ಅಖಂಡ ಶುದ್ಧಸಚ್ಚಿದಾನಂದರೂಪನೆ ಎಂದು ತಿಳಿ, ಹೀಗೆಂದು ಬೋಧಿಸಿದೆ.

ಈ ರೀತಿಯಾಗಿ, ಶ್ರೀಪರಮಹಂಸ ಪರಿವ್ರಾಜಕ ಮಧುಸೂದನಸರಸ್ವತಿಗಳು ಗೀತಾ ಅಭಿಪ್ರಾಯ ಸೂಕ್ಷ್ಮವಾಗಿರುವುದನ್ನು ಕಂಡು ಬೋಧಿಸಿರುವರು. ಇದು ಅವರ ಕೃತಿಯಾದ 'ಗೀತಾ ಗೂಢಾರ್ಥದೀಪಿಕೆ' ಯ ಆರಂಭದಲ್ಲಿರುವುದು.

ಈ ಗೀತಾ ಶಾಸ್ತ್ರದಲ್ಲಿ ನಿಷ್ಕಾಮಕರ್ಮಾನುಷ್ಠಾನವೇ ಮೋಕ್ಷಕ್ಕೆ ದಾರಿ, ಆದರಿಂದ ಚಿತ್ತ ಶುದ್ಧಿಯಾಗಿ ಕ್ರಮೇಣ ಜ್ಞಾನವು ಉಂಟಾಗಿ ಮೋಕ್ಷವಾಗುವದು. ನಿಷಿದ್ಧಕರ್ಮವನ್ನು ಕಾಮ್ಯಕರ್ಮವನ್ನು ಬಿಟ್ಟು ಈಶ್ವರ ಪ್ರೀತಿಯಾಗುವಂತೆ ತನ್ನ ತನ್ನ ವರ್ಣಾಶ್ರಮಧರ್ಮವನ್ನು ಆಚರಿಸಬೇಕು. ಆದರಲ್ಲೂ ಉತ್ಕೃಷ್ಟವಾದುದು ಜಪಯಜ್ಞ. ಇದರಿಂದ ಚಿತ್ತ ಶುದ್ಧಿ, ನಿತ್ಯಾನಿತ್ಯವಿವೇಕ, ದಮಾದಿಗುಣಗಳು, ಮೋಹ, ಇಚ್ಛೆ, ತೀವ್ರೇಚ್ಛೆಗಳು ಹುಟ್ಟುವವು. ಸರ್ವಕರ್ಮಸನ್ಯಾಸ ಮಾಡಿ ಬ್ರಹ್ಮವಿದ್ಯಾ ಗುರುವನ್ನು ಆಶ್ರಯಿಸಿ, ಗುರು ಉಪದೇಶಿಸಿದ ತತ್ತ್ವಾರ್ಥ ಶ್ರವಣ ಮಾಡಿ, ಮನನ, ನಿದಿಧ್ಯಾಸನಗಳನ್ನು ಮಾಡುತ್ತಾ ಇದ್ದರೆ ಇಂತಹ ಅಧಿಕಾರಿಗೆ ಬ್ರಹ್ಮಾತ್ಮಸ್ವರೂಪ ಜ್ಞಾನವು ಉಂಟಾಗಿ ಇಲ್ಲಿಯೆ ಮುಕ್ತಿಯಾಗುವದು.

'ಕಷಾಯೇ ಕರ್ಮಭಿಃ ಸರ್ವೇ ತತೋ ಜ್ಞಾನಂ ಪ್ರವರ್ತತೆ' ಎಂದು ಜ್ಞಾನವು ಅದ್ವಿತೀಯ ಬ್ರಹ್ಮಸಾಕ್ಷತ್ಕಾರವನ್ನು ಉಂಟುಮಾಡಿದರೆ ಇಹದಲ್ಲೆ ಮುಕ್ತಿ. ಸಂಸಾರ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೀಜವಾದ ಅಹಂ ಮಮ ಎಂಬ ಅವಿದ್ಯೆಯುನಾಶವಾಗಿ ಅಖಂಡ ಸಚ್ಚಿದಾನಂದ ಸ್ವರೂಪವಾದ ಪರಬ್ರಹ್ಮ ಪ್ರಾಪ್ತಿಯೆಂಬ ಮುಕ್ತಿಯು ಆಗುವುದು.

ಇದಕ್ಕಾಗಿಯೇ ಕರ್ಮಯೋಗ, ಧ್ಯಾನಯೋಗ, ಜ್ಞಾನಯೋಗಗಳನ್ನು ಆಯಾಯ ಅಧಿಕಾರಿಯ ಅರ್ಹತೆಯನ್ನು ನೋಡಿ ಬೋಧಿಸಿದೆ. ಇದರ ವಿವರಗಳನ್ನು ಗೀತಾ ತಾತ್ಪರ್ಯ ನಿರ್ಣಯದಲ್ಲಿ ಸವಿಸ್ತಾರವಾಗಿ ಬರೆದು ತಿಳಿಸಿದ್ದೇವೆ. ಭಗವದ್ಭಕ್ತರಾದ ಮಹಾಜನರು ಇದರ ಉಪಯೋಗವನ್ನು ಪಡೆದು ಭಗವಂತನ ಅನುಗ್ರಹಕ್ಕೆ ಪಾತ್ರರಾಗಲೆಂದು ಹಾರೈಸುತ್ತೇನೆ.

ಇಂತಿ ಆಸ್ತಿಕ ಮಹಾಜನರ
ವಿಶ್ವಾಸಿ
ಕೆ. ಕೃಷ್ಣಜೋಯ್ಸ
ಶಂಕರಮಠ

Sri Vidyabharathi Book Centre, Sringeri

CC-O. In Public Domain. Digitized by eGangotri

ಗೀತಾ ತಾತ್ಪರ್ಯ ನಿರ್ಣಯ

ಪ್ರಪನ್ನ ಪಾರಿಜಾತಾಯ ತೋತ್ರ ವೇತ್ರೈಕಪಾಣಯೇ ।
ಜ್ಞಾನಮುದ್ರಾಯ ಕೃಷ್ಣಾಯ ಗೀತಾಮೃತದುಹೇನಮಃ ॥

ವಸುದೇವಸುತಂ ದೇವಂ ಕಂಸಚಾಣೂರ ಮರ್ದನಮ್ ।
ದೇವಕೀ ಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಮ್ ॥

ವ್ಯಾಸಾಯ ವಿಷ್ಣುರೂಪಾಯ ವ್ಯಾಸರೂಪಾಯ ವಿಷ್ಣವೇ ।
ನಮೋ ವೈ ಬ್ರಹ್ಮನಿಧಯೇ ವಾಸಿಷ್ಠಾಯ ನಮೋ ನಮಃ ॥

ಶಂಕಾರೂಪೇಣ ಮಚ್ಚಿತ್ತಂ ಪಂಕೀಕೃತಮಭೂಧ್ಯಯಾ ।
ಕಿಂಕರೀ ಯಸ್ಯ ಸಾ ಮಾಯಾ ಶಂಕರಾಚಾರ್ಯಮಾಶ್ರಯೇ ॥

ಓಂ ನಮೋ ಬ್ರಹ್ಮಾದಿಭ್ಯೋ ಬ್ರಹ್ಮವಿದ್ಯಾಸಂಪ್ರದಾಯಕರ್ತೃಭ್ಯೋ ।
ವಂಶ ಋಷಿಭ್ಯೋ ನಮೋ ಮಹದ್ಭ್ಯೋ ನಮೋ ಗುರುಭ್ಯಃ ॥

ವಿಸ್ತಾರವಾದ ಈ ಜಗತ್ತನ್ನು ಭಗವಂತನು ಸೃಷ್ಟಿಮಾಡಿ, ಅದರ ಪರಿಪಾಲನೆ ಗೋಸ್ಕರ ಮರೀಚಿ ಮುಂತಾದ ಪ್ರಜಾಪತಿಗಳನ್ನು ಸೃಷ್ಟಿಸಿ, ಅವರಿಗೆ ಪ್ರವೃತ್ತಿ ಮಾರ್ಗಕ್ಕೆ ಸೇರಿದ ಧರ್ಮವನ್ನು ಉಪದೇಶಿಸಿದನು. ಹೀಗೆಯೇ ಸನಕ ಸನಂದವಾದಿ ಗಳನ್ನು ಸೃಷ್ಟಿಸಿ ನಿವೃತ್ತಿಮಾರ್ಗದ ಧರ್ಮವನ್ನು ಭೋಧಿಸಿದನು. "ಸಾಕ್ಷಾದಭ್ಯು **ದಯ ನಿಃಶ್ರೇಯಸ ಹೇತುಃ ಯಃ ಸಧರ್ಮಃ**"—ಎಂದು ಧರ್ಮದ ಲಕ್ಷಣವನ್ನು ಶ್ರೀ ಶಂಕರರು ಹೇಳುತ್ತಾರೆ. ಅಂದರೆ—ಮಾನವರಿಗೆ ನೇರವಾಗಿ ಮೋಕ್ಷಕ್ಕೆ ಸಾಧನ ವಾದುದು ಮತ್ತು ಪಶು, ಪುತ್ರಾದಿ ಅಭ್ಯುದಯಕ್ಕೆ ಸಾಧನವಾದುದು ಯಾವುದೋ ಅದು ಧರ್ಮ. ಇದರಲ್ಲಿ ಆತ್ಮತತ್ತ್ವಜ್ಞಾನವೇ ನೇರವಾಗಿ ಮೋಕ್ಷಕ್ಕೆ ಸಾಧನ, ಅದಕ್ಕೆ ಸಹಾಯಕವಾದ ವೈರಾಗ್ಯಾದಿಗಳು ಎಲ್ಲವೂ ನಿವೃತ್ತಿಮಾರ್ಗಕ್ಕೆ ಸೇರಿದ ಧರ್ಮ. ಗೃಹಸ್ಥರಿಗೆ ಇಹಲೋಕದ ಅಭ್ಯುದಯಕ್ಕೆ ಮತ್ತು ಸ್ವರ್ಗಾದಿ ಪರಲೋಕದ ಭೋಗಕ್ಕೆ ಸಾಧನವಾಗಿರುವ ಅಗ್ನಿಹೋತ್ರ ಮುಂತಾದ ಯಜ್ಞಗಳು, ದಾನ, ಧರ್ಮಗಳು— ಎಲ್ಲವೂ ಪ್ರವೃತ್ತಿ ಮಾರ್ಗಕ್ಕೆ ಸೇರಿದ ಧರ್ಮ.

ವೇದೋಕ್ತವಾದ ಧರ್ಮವೇ ಸನಾತನ ಧರ್ಮ. ನಮ್ಮ ಶ್ರೇಯಸ್ಸಿಗೆ ಅದೇ ಸಾಧನ. ವೇದ ವಿರುದ್ಧವಲ್ಲದ ಧರ್ಮವೂ ಶ್ರೇಯಸ್ಕರವೇ. ಈ ಧರ್ಮವು ವರ್ಣಾಶ್ರಮ ಗಳಿಗೆ ಸಂಬಂಧಿಸಿದುದು. "**ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇ ನರಃ**"—ತನ್ನ ತನ್ನ ಧರ್ಮದಲ್ಲಿ ಆಸಕ್ತಿಯಿರುವವನು ಜ್ಞಾನವನ್ನು ಹೊಂದಿ, ಆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮೂಲಕ ಮೋಕ್ಷವನ್ನು ಹೊಂದುವನು—ಎಂದು ಗೀತೆಯು ಸಾರಿ ಹೇಳಿದೆ. ಅದರಲ್ಲೂ—"ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ"—ಎಂದು ಭಗವಂತನು ಹೇಳಿರುವಂತೆ, ತನಗೆ ವಿಹಿತವಾಗಿರುವ ಧರ್ಮವೇ ಶ್ರೇಷ್ಠವಾದುದು; ಸ್ವಧರ್ಮಾಚರಣೆಯಲ್ಲಿ ನ್ಯೂನತೆ ಇದ್ದರೂ ಅದೇ ತನಗೆ ಶ್ರೇಯಸ್ಕರ. ಪರಕೀಯ ಧರ್ಮವನ್ನು ಎಷ್ಟೇ ಚೆನ್ನಾಗಿ ಆಚರಿಸಿದರೂ ಅದು ಶ್ರೇಯಸ್ಕರವಲ್ಲ. ಅದಕ್ಕಿಂತ ಸ್ವಧರ್ಮವೇ ಶ್ರೇಷ್ಠ. "ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್"—ಎಂದು ಗೀತೆಯು ಎಚ್ಚರಿಸಿದೆ; ಆಯಾಯ ಆಶ್ರಮ-ವರ್ಣದವರು ಇಂಥ ಧರ್ಮವನ್ನು ಬಹು ದೀರ್ಘ ಕಾಲದಿಂದ ಅನುಷ್ಠಾನ ಮಾಡುತ್ತಲಿದ್ದರೂ ರಾಗದ್ವೇಷಗಳು ಹೆಚ್ಚಾಗಿ, ಕಾಲಕ್ರಮದಲ್ಲಿ ಶಾಸ್ತ್ರೀಯ ವಿವೇಕವು ಕ್ಷಯವಾಗಿ, ತನ್ಮೂಲಕ ಜನರು ಅಧರ್ಮವನ್ನು ಹೆಚ್ಚಾಗಿ ಮಾಡುತ್ತಿರಲು ಧರ್ಮವು ಕ್ಷೀಣಿಸುತ್ತದೆ. ಇದು ಯುಗ ಯುಗಕ್ಕೂ ಹ್ರಾಸವಾಗುತ್ತಾ ಕಲಿಯುಗದಲ್ಲಿ ಮತ್ತಷ್ಟು ಕ್ಷಯಿಸುವುದೆಂದು ಪ್ರಾಜ್ಞರು ಹೇಳುತ್ತಾರೆ. ಹೀಗೆ ಯಾವಾಗ ಧರ್ಮವು ಗ್ಲಾನಿಯನ್ನು ಹೊಂದಿ, ಅಧರ್ಮವೇ ಹೆಚ್ಚಾದಾಗ ಭಗವಂತನು ಧರ್ಮೋದ್ಧಾರಕ್ಕಾಗಿ ಅವತರಿಸುವನು.

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥

—ಎಂದು ಭಗವಂತನೇ ಹೇಳಿರುತ್ತಾನೆ. ಪ್ರಕೃತ ಭಗವಾನ್ ವಿಷ್ಣುವೇ ಅಂಶತಃ ದೇವಕಿಯಲ್ಲಿ ವಸುದೇವನಿಂದ ಹುಟ್ಟಿದನು. ಪೂರ್ವದಿಕ್ಕಿನಲ್ಲಿ ಸೂರ್ಯನು ಹುಟ್ಟುವಂತೆಯೂ, ಮಥನದಿಂದ ಅರಣಿಯಲ್ಲಿ ಬೆಂಕಿಯು ಕಾಣಿಸಿಕೊಳ್ಳುವಂತೆಯೂ ವಿಷ್ಣುವಿನ ಅಂಶವಾಗಿ ಶ್ರೀ ಕೃಷ್ಣನು ಅವತರಿಸಿದನು. ಏತಕ್ಕಾಗಿ—ಅಂದರೆ, ಭೂಮಿಯಲ್ಲಿರುವ ಬ್ರಾಹ್ಮಣರ ರಕ್ಷಣೆಗಾಗಿ—

ಯಂ ದೇವಂ ದೇವಕೀ ದೇವೀ ವಸುದೇವಾದಜೀಜನತ್ ।
ಭೌಮಸ್ಯ ಬ್ರಾಹ್ಮಣೋ ಗುಪ್ತ್ಯೈ ದೀಪ್ತಮಗ್ನಿಮಿವಾರಣಿಃ ॥

ಎಂದು ಭೀಷ್ಮರು ಭಗವಂತನನ್ನು ಸ್ತುತಿಸುವಾಗ ಹೇಳಿರುತ್ತಾರೆ. ಶ್ರೀ ಶಂಕರರು ಇದನ್ನೇ ಪ್ರಮಾಣೀಕರಿಸಿ ತಮ್ಮ ಪೀಠಿಕೆಯಲ್ಲಿ ಹೇಳಿರುತ್ತಾರೆ.

ಅದೇನು ಬ್ರಾಹ್ಮಣರ ರಕ್ಷಣೆಗಾಗಿಯೇ ಜನಿಸಿದ್ದು ? ಬೇರೆ ಜನಾಂಗದ ರಕ್ಷಣೆಗೂ ಅಲ್ಲವೆ ? ಎಂದರೆ—ಅದಕ್ಕೆ ಉತ್ತರವಾಗಿ ಶ್ರೀ ಶಂಕರರು ಹೇಳುತ್ತಾರೆ—ಬ್ರಹ್ಮಣತ್ವಸ್ಯ ಹಿ ರಕ್ಷಣೇ ರಕ್ಷಿತಃ ಸ್ಯಾತ್ವೈದಿಕೋಧರ್ಮಃ ತದಧೀನತ್ವಾದ್ ವರ್ಣಾಶ್ರಮ ಧರ್ಮಾಣಾಮ್"—ಅಂದರೆ, ಬ್ರಾಹ್ಮಣನ ರಕ್ಷಣೆಯೆಂದರೆ ಬ್ರಾಹ್ಮಣ್ಯವನ್ನು ರಕ್ಷಿಸುವುದೆಂದರ್ಥ. ಬ್ರಾಹ್ಮಣನ ಬ್ರಾಹ್ಮಣ್ಯವನ್ನು ರಕ್ಷಿಸಿದರೆ ವೇದೋಕ್ತವಾದ ಎಲ್ಲಾ ಧರ್ಮವನ್ನೂ ರಕ್ಷಿಸಿದ ಹಾಗೆ ಆಗುವುದು. ಬ್ರಹ್ಮ, ಕ್ಷತ್ರ, ವೈಶ್ಯ ಶೂದ್ರರೆಂಬ ನಾಲ್ಕು

Sri Vidyabharathi Book Centre, Sringeri

CC-O. In Public Domain. Digitized by eGangotri

ವರ್ಣಗಳು, ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸಂನ್ಯಾಸವೆಂಬ ನಾಲ್ಕು ಆಶ್ರಮಗಳು, ಅವುಗಳ ಧರ್ಮಗಳು—ಇವುಗಳ ರಕ್ಷಣೆಯು ಬ್ರಾಹ್ಮಣ ಧರ್ಮದ ರಕ್ಷಣೆಯಿಂದಲೇ ಆಗುವುದು. **"ಸರ್ವೇಷಾಂ ಬ್ರಾಹ್ಮಣೋಗುರುಃ"**—ಎಂದು ಮನುಸ್ಮೃತಿಕಾರರು ಹೇಳಿರುವಂತೆ, ಗುರುಸ್ಥಾನದಲ್ಲಿರುವ ಬ್ರಾಹ್ಮಣನು ವೇದಾಧ್ಯಯನ, ಅಧ್ಯಾಪನ, ಮುಂತಾದುವನ್ನು ಆಚರಿಸಬೇಕು. ತಾನು ಕಲಿತರೆ, ಇತರ ವರ್ಣದವರೂ ಅವನಿಂದ ಕಲಿತು ಕರ್ತವ್ಯ ಧರ್ಮವನ್ನು ಆಚರಿಸಿ, ಆಚರಿಸುವ ಧರ್ಮದ ಮೂಲಕ ಎಲ್ಲರ ಧರ್ಮವೂ ಆಶ್ರಮಧರ್ಮವೂ ಸುರಕ್ಷಿತವಾಗುವುದೆಂದು ಈ ಭಾಷ್ಯವಚನದ ಅಭಿಪ್ರಾಯ.

ಆದ್ದರಿಂದ, ಬ್ರಾಹ್ಮಣ್ಯದ ರಕ್ಷಣೆಗಾಗಿ ಹಾಗೂ ಲೋಕಸ್ಥಿತಿಗೆ ಕಾರಣವಾದ ಧರ್ಮಸಂಸ್ಥಾಪನೆಗಾಗಿ ಭಗವಂತನು ಅವತರಿಸಿದನು.

ಭಗವಂತನು ಹೇಗೆ ಹುಟ್ಟುವನು ? ಜೀವರು ಹುಟ್ಟುವಂತೆಯೇ ?—ಎಂದರೆ—ಅಲ್ಲ. ಜೀವರು ಅಸ್ವತಂತ್ರರು. ತಮ್ಮ ತಮ್ಮ ಪಾಪಪುಣ್ಯಗಳಿಗೆ ಅನುಸಾರವಾಗಿ ಈಶ್ವರಾಧೀನರಾಗಿದ್ದು, ಈಶ್ವರನಿಂದ ನಿಯಮಿತ ವ್ಯವಸ್ಥೆಯಂತೆ ಕರ್ಮಾನುಸಾರವಾಗಿ ಜನಿಸುವರು. ಆದರೆ, ಭಗವಂತನು ಹಾಗಲ್ಲ. ಅವನು ಸ್ವತಂತ್ರ, ಸರ್ವಜ್ಞ, ಸರ್ವಶಕ್ತ. ನಿಜವಾಗಿ ಹುಟ್ಟು ಇಲ್ಲದವನು. ಆದರೂ ತನ್ನ ಅಧೀನವಾದ ಮಾಯಾಶಕ್ತಿಯ ವಶದಿಂದ, ಆಯಾಯ ಸಂದರ್ಭದಲ್ಲಿ ತನ್ನನ್ನು ತಾನೇ ರೂಪಾಂತರದಲ್ಲಿ ಸೃಷ್ಟಿಸಿಕೊಂಡು ತೋರುವನು, ನಿಜವಾಗಿ ಜೀವರಿಗಿರುವಂತೆ ಕರ್ಮಾಧೀನವಾದ ಹುಟ್ಟಲ್ಲ. **"ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್ । ಪ್ರಕೃತಿಂ ಸ್ವಾಮಧಿಷ್ಠಾ ಸಂಭವಾಮ್ಯಾತ್ಮಮಾಯಯಾ ॥ "**—ಎಂದು ಭಗವಂತನೇ ಉಪದೇಶಿಸಿರುವಂತೆ—**ಹುಟ್ಟಿದಂತೆ** ತಾನು ತೋರಿಬರುವನು. ಇದಕ್ಕೆ ಅವತಾರವೆಂದು ಹೆಸರು. ಇದು ಜೀವರಿಗೆ ಅನ್ವಯಿಸುವುದಿಲ್ಲ.

ಹೀಗೆ ಅವತರಿಸಿದ ಶ್ರೀಕೃಷ್ಣನು ಲೋಕಾನುಗ್ರಹಕ್ಕಾಗಿ ಅರ್ಜುನನನ್ನು ನೆಪ ಮಾಡಿಕೊಂಡು ಧರ್ಮವನ್ನು ಉಪದೇಶಿಸಿರುವನು. ಹೀಗೆ ಉಪದೇಶ ಮಾಡಿರುವ ಗೀತಾಶಾಸ್ತ್ರವು ಸಕಲ ವೇದಾರ್ಥಸಾರ ಸಂಗ್ರಹರೂಪವಾಗಿರುವುದು. ಸಕಲ ವೇದಾರ್ಥ ಯಾವುದು ? ಕರ್ಮಕಾಂಡದ ಮುಖ್ಯಾರ್ಥ—ಧರ್ಮ, ಉಪಾಸನಾವಾಕ್ಯಗಳ ಅರ್ಥ, ಉಪಾಸನೆ ಮತ್ತು ಉಪಾಸ್ಯವಾದ ದೇವತಾ ಮತ್ತು ಸಗುಣಸಾಕಾರ ಈಶ್ವರ; ಜ್ಞಾನ ಕಾಂಡದ ಮುಖ್ಯಾರ್ಥ—ಕೇವಲ ಪರಬ್ರಹ್ಮ. ಇವೇ ಸಕಲ ವೇದಾರ್ಥಗಳಸಾರ. ಇದನ್ನು ಗೀತಾಶಾಸ್ತ್ರವು ಸಂಕ್ಷೇಪವಾಗಿ ಹೇಳಿರುತ್ತದೆ.

ಗೀತಾಪಠನಕ್ಕೆ ಅಧಿಕಾರಿ ಯಾರು ? ಗೀತೆಯ ಕೊನೆಯಲ್ಲಿ ಹೇಳಿರುವಂತೆ, ಭಗವಂತನಲ್ಲಿ ಭಕ್ತಿ ಇರುವ ಎಲ್ಲರೂ ಅಧಿಕಾರಿಗಳೇ.

Sri Vidyabharathi Book Centre, Sringeri

CC-O. In Public Domain. Digitized by eGangotri

ಯ ಇಮಂ ಪರಮಂ ಗುಹ್ಯಂ ಮದ್ಭಕ್ತೇಷ್ವಭಿಧಾಸ್ಯತಿ ।
ಭಕ್ತಿಂಮಯಿ ಪರಾಂಕೃತ್ವಾ ಮಾಮೇವೈಷ್ಯತ್ಯಸಂಶಯಃ ॥

ಅಧ್ಯೇಷ್ಯತೇ ಚ ಯ ಇಮಂ ಧರ್ಮ್ಯಂ ಸಂವಾದಮಾವಯೋಃ
ಜ್ಞಾನಯಜ್ಞೇನ ತೇನಾಹಮಿಷ್ಟಸ್ಯಾಮಿತಿ ಮೇ ಮತಿಃ ॥

ಭಕ್ತರಲ್ಲದವರಿಗೂ, ಗುರುಶುಶ್ರೂಷೆ ಮಾಡದವರಿಗೂ, ಭಗವಂತನನ್ನು ದ್ವೇಷಿಸು ವವರಿಗೂ ಈ ಶಾಸ್ತ್ರವನ್ನು ಉಪದೇಶಿಸಬಾರದು. ಯಾವ ಗುಣವಿಲ್ಲದಿದ್ದರೂ ಭಕ್ತರಿಗೆ ಹೇಳಿಕೊಡಬಹುದೆಂದು ಹೇಳಿದೆ.

ಈ ಗೀತಾ ಶಾಸ್ತ್ರ ಹೇಳಿರುವ ಯೋಗಗಳು ಎರಡು—ಕರ್ಮಯೋಗ ಮತ್ತು ಜ್ಞಾನಯೋಗ ಎಂದು. ಮುಖ್ಯವಾಗಿ ಇವುಗಳನ್ನೇ ಭಗವಂತನು ಉಪದೇಶಿಸಿರುವುದು:

ಲೋಕೇಽಸ್ಮಿನ್ ದ್ವಿವಿಧಾನಿಷ್ಠಾ ಪುರಾಪ್ರೋಕ್ತಾಮಯಾನಘ ।
ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಮ್ ॥

ಎಂದು. ಇದಕ್ಕೆ ಅಂಗಕ್ಕೆ ಅಂಗವಾಗಿ ಭಕ್ತಿಯನ್ನು ಉಪದೇಶಿಸಿರುವನು. ಜ್ಞಾನ ಯೋಗಕ್ಕೆ ಅಂಗವಾಗಿ ಧ್ಯಾನವನ್ನು ಹೇಳಿರುವನು. "ಭಕ್ತ್ಯಾಮಾಮಭಿಜಾನಾತಿ **ಯಾವಾನ್ ಯಶ್ಚಾಸ್ಮಿತತ್ತ್ವತಃ ; ಭಕ್ತ್ಯಾಲಭ್ಯಸ್ತ್ವನನ್ಯಯಾ; ಮತ್ಕರ್ಮ ಕೃನ್ಮತ್ಪರಮೋ ಮದ್ಭಕ್ತಃ ಸಂಗವರ್ಜಿತಃ.** ಇತರ ಕೆಲವು ಆಚಾರ್ಯರು ಭಕ್ತಿ ಯೋಗವನ್ನೇ ಪ್ರಧಾನವಾಗಿ ಹೇಳಿರುವುದೆಂದು ಅಭಿಪ್ರಾಯಪಡುತ್ತಾರೆ. ಶ್ರೀ ಶಂಕರ ಭಗವತ್ಪಾದರು ಕರ್ಮ, ಧ್ಯಾನ, ಜ್ಞಾನ, ಈ ಮೂರಕ್ಕೂ ಭಕ್ತಿಯು ಅಂಗವೆಂದೇ ಹೇಳಿರುತ್ತಾರೆ. ಯೋಗವೆಂದರೆ ಸಾಧನವೆಂದರ್ಥ. ಕರ್ಮವು ಚಿತ್ತಶುದ್ಧಿಗೂ, ಆ ಮೂಲಕ ಜ್ಞಾನ ಉಂಟಾಗುವುದಕ್ಕೂ ಸಾಧನವೆಂದು ಉಪದೇಶಿಸಿರುವರು. ನಿಷ್ಕಾಮ ಕರ್ಮಯೋಗವು ಜ್ಞಾನಕ್ಕೆ ಸಾಧಕ. ಜ್ಞಾನವು ಸಾಕ್ಷಾತ್ತಾಗಿ ಮೋಕ್ಷಕ್ಕೆ ಸಾಧಕ **"ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂವಿಂದತಿ ಮಾನವಃ".** ಕರ್ಮಯೋಗಕ್ಕೆ ಅಜ್ಞಾನಿಯೂ ಅಧಿಕಾರಿ; ಅಂದರೆ—ಆತ್ಮೈಕತ್ವವನ್ನು ಅರಿಯದವನು ಹಾಗೂ ಧ್ಯಾನಯೋಗಕ್ಕೆ ಅಧಿಕಾರಿ. ಆದರೆ, ಕರ್ಮಸಂನ್ಯಾಸವು ಧ್ಯಾನನಿಷ್ಠೆಗೆ ಅವಶ್ಯ. ಧ್ಯಾನ ನಿಷ್ಠೆ ಬರುವ ಪರ್ಯಂತ ಕರ್ಮಯೋಗವನ್ನು ಅನುಸರಿಸಬೇಕೆಂದು ಗೀತೆಯಲ್ಲಿ ಹೇಳಿದೆ—

ಆರುರುಕ್ಷೋರ್ಮುನೇರ್ಯೋಗಂ ಕರ್ಮಕಾರಣಮುಚ್ಯತೇ ।
ಯೋಗಾರೂಢಸ್ಯ ತಸ್ಯೈವ ಶಮಃ ಕಾರಣಮುಚ್ಯತೇ ॥

ಇಲ್ಲಿ ಶಮ ಎಂದರೆ ಕರ್ಮಸಂನ್ಯಾಸ ಎಂದರ್ಥ. ಅಂದರೆ, ಸಕಲ ಲೌಕಿಕ ವೈದಿಕ ಕರ್ಮಗಳ ತ್ಯಾಗ. ಸಂನ್ಯಾಸ ಪೂರ್ವಕವಾದ ತತ್ತ್ವಜ್ಞಾನವೇ (ಸರ್ವತ್ರ ಬ್ರಹ್ಮಾತ್ಮೈಕ್ಯ ಜ್ಞಾನವೇ) ಮೋಕ್ಷಕ್ಕೆ ಕಾರಣ. ಅದೇ ಸಾತ್ವಿಕ ಜ್ಞಾನ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭೇದ ಜ್ಞಾನ ರಾಜಸ. ಅದು ಮೋಕ್ಷಕ್ಕೆ ನೇರ ಕಾರಣವಲ್ಲ. ಅದು ಮಿಥ್ಯಾ ದರ್ಶನವೇ ಸರಿ. ಮತ್ತು ಜ್ಞಾನವಿಲ್ಲದೆ ಕೇವಲ ಸಂನ್ಯಾಸದಿಂದ ಮೋಕ್ಷವು ಉಂಟಾಗ ಲಾರದು—"**ನ ಚ ಸಂನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ**". ಜ್ಞಾನವು ಅನುಭವಕ್ಕೆ ಬಂದನಂತರ ಕರ್ಮಯೋಗವು ತತ್ತ್ವಜ್ಞಾನಿಗೆ ಇರುವುದಿಲ್ಲ. ಅವನು ಅನುಷ್ಠಾನ ಮಾಡಬೇಕಾದ್ದಿಲ್ಲ. ಬಿಡುವುದರಿಂದ ಯಾವ ದೋಷವೂ ಇಲ್ಲ. ಅದರ ಅನುಷ್ಠಾನದಿಂದ ಸ್ವಂತಕ್ಕೆ ಯಾವ ಪ್ರಯೋಜನವೂ ಇಲ್ಲ—"**ನೈವ ತಸ್ಯ ಕೃತೇ ನಾರ್ಥೋ ನಾ ಕೃತೇನೇಹ ಕಶ್ಚನ**"—ಎಂದು ಗೀತೆ ತಿಳಿಸುತ್ತದೆ. ಆತ್ಮಜ್ಞಾನಿ ಯಾದವನು—"ನಾನು ಕರ್ತೃವೂ ಅಲ್ಲ, ಭೋಕ್ತೃವೂ ಅಲ್ಲ, ವರ್ಣಾಶ್ರಮಾದಿ ಭೇದಗಳಿಲ್ಲದವನು, ಶುದ್ಧವಾದ ಪರಬ್ರಹ್ಮನೇ ನಾನು" ಎಂಬ ಅನುಭವ ಹೊಂದಿರು ತ್ತಾನೆ. ಜ್ಞಾನಕರ್ಮಸಮುಚ್ಚಯವು ಸಮಪ್ರಧಾನವಾಗಿ ಎಂದಿಗೂ ಒಬ್ಬನಲ್ಲಿ ಸೇರುವು ದಿಲ್ಲ. ಹಕ್ಕಿಯು ಹಾರುವುದಕ್ಕೆ ಎರಡು ರೆಕ್ಕೆಗಳು ಹೇಗೋ ಹಾಗೆ ಸಮನಾಗಿದ್ದು ಮೋಕ್ಷಕ್ಕೆ ಕಾರಣವಲ್ಲ ಎಂದು ಸಿದ್ಧಾಂತ.

ಕದಾಚಿತ್, ಜನಕಾದಿಗಳಂತೆ, ತತ್ತ್ವಜ್ಞಾನಿಯು ಕರ್ಮಯೋಗದಲ್ಲಿ ಇದ್ದಂತೆ ಪ್ರಸಿದ್ಧವಾಗಿದ್ದರೆ, ಅದು ಲೋಕ ಸಂಗ್ರಹಕ್ಕಾಗಿ.

ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ ।
ಲೋಕಸಂಗ್ರಹ ಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ ॥

— ಇತ್ಯಾದಿ ಉದಾಹರಣೆಗಳಿಂದ ಈ ಅರ್ಥವು ಲಭಿಸುತ್ತದೆ. ಲೋಕಸಂಗ್ರಹವೆಂದರೆ— ಅಜ್ಞಾನಿಗಳು, ತತ್ತ್ವಜ್ಞಾನಿಯಂತೆ, ತಮ್ಮ ಸ್ವಕರ್ಮವನ್ನು ಬಿಟ್ಟು ಮಾರ್ಗತಪ್ಪಿ ನಡೆದಾಗ ಅದನ್ನು ವಿರೋಧಿಸುವುದೇ ಲೋಕಸಂಗ್ರಹ. ಅದಕ್ಕೋಸ್ಕರವಾಗಿ ಕೆಲವು ಜ್ಞಾನಿಗಳು ಜನಕಾದಿಗಳಂತೆ, ಕರ್ಮವನ್ನು ಬಿಡದೇ ಯಾವಜ್ಜೀವವಿದ್ದು ವಿದೇಹ ಕೈವಲ್ಯವನ್ನು ಪಡೆದಿರುತ್ತಾರೆ.

ಜ್ಞಾನೋತ್ತರ ಕಾಲದಲ್ಲಿ ತತ್ತ್ವಜ್ಞಾನಿಯು—"ಅಜ್ಞಾನಿಯಂತೆ, ನಾನು ಕರ್ಮವನ್ನು ವಾಸ್ತವವಾಗಿ ಮಾಡುತ್ತಿರುವೆ"—ಎಂದು ತಿಳಿಯುವುದಿಲ್ಲ.

ನೈವ ಕಿಂಚಿತ್ಕರೋಮೀತಿ ಯುಕ್ತೋ ಮನ್ಯೇತ ತತ್ತ್ವವಿತ್ ।
ಗುಣಾಗುಣೇಷು ವರ್ತಂತ ಇತಿ ಮತ್ವಾ ನ ಸಜ್ಜತೇ ॥

ಎಂದು ಗೀತೆಯು ಹೇಳಿರುತ್ತದೆ. ವಾಕ್-ಪಾಣಿ ಎಂಬ ಆಯಾಯ ಇಂದ್ರಿಯಗಳು ವಿಹಿತವಾದ ತಮ್ಮ ತಮ್ಮ ಕಾರ್ಯಗಳನ್ನು ಪೂರ್ವವಾಸನಾನುಸಾರ ಮಾಡುತ್ತವಷ್ಟೆ. ಹಾಗೆ ಮಾಡಿದರೂ ಆಸಕ್ತಿ ಇಲ್ಲದೆ, ನಿಜವಾದ ಕರ್ತೃತ್ವ ಬುದ್ಧಿಯೂ ಇಲ್ಲದೆ ಕೇವಲ ನಟನ ಮಾತ್ರವಾಗಿ ಆಚರಿಸಿದಂತೆ ಎಂದು ತಿಳಿಯಬೇಕು. ಹೀಗೆಯೇ, ಜ್ಞಾನವು ಲಬ್ಧ ವಾದ ಮೇಲೆ ನಡೆದ ಕೆಲವು ಆಚರಣೆಗಳು ಲೋಕಕಲ್ಯಾಣಕ್ಕಾಗಿಯೇ ಎಂಬುದು ಸುನಿಶ್ಚಿತ. ಉದಾಹರಣೆಗೆ—ಪ್ರತ್ಯಕ್ ದೃಷ್ಟಿಯಿದ್ದವರೂ, ಜ್ಞಾನಿಗಳೂ ಆದ

Sri Vidyabharathi Book Centre, Sringeri

CC-O. In Public Domain. Digitized by eGangotri

ವಸಿಷ್ಠರು. ಆದರೂ ದಶರಥಾದಿಗಳಿಗೆ ಪುರೋಹಿತರಾಗಿದ್ದರೆಂಬುದು ಇತಿಹಾಸ ಪ್ರಸಿದ್ಧವಾಗಿದೆ. ಹಾಗೂ, ಪಂಡಿತರು ಮತ್ತು ಪಾಮರರಿಗೂ ಜ್ಞಾನದ ಮೂಲಕ ಶ್ರೇಯಸ್ಸಾಗಲೆಂದು ವೇದವ್ಯಾಸರು ಮಹಾಭಾರತ, ಧರ್ಮಶಾಸ್ತ್ರ, ಬ್ರಹ್ಮಸೂತ್ರ ಮುಂತಾದುವನ್ನು ಬರೆದರು; ಮತ್ತು ಶುಕ ಮುನಿಗಳು ಭಾಗವತವನ್ನು ಪರೀಕ್ಷಿದ್ರಾಜನಿಗೆ ಬೋಧಿಸಿದರು. ನಾಲ್ಕು ವೇದಗಳ ಶಾಖೆಗಳನ್ನು ಕಲಿತ ಸುಮಂತು, ಜೈಮಿನಿ, ವೈಶಂಪಾಯನ ಮತ್ತು ಪೈಲ—ಎಂಬ ನಾಲ್ವರು ಶಿಷ್ಯರಿಗೆ ವೇದವ್ಯಾಸರು ಮೊದಲು ಬೋಧಿಸಿದರು. ಅವರಲ್ಲಿ ವೈಶಂಪಾಯನರಿಗೆ ಮಹಾಭಾರತವನ್ನು ಬೋಧಿಸಿದರು. ಶುಕರಿಗೆ ತತ್ತ್ವೋಪದೇಶವನ್ನು ಮಾಡಿದರು. ಈ ವ್ಯವಹಾರವೆಲ್ಲವೂ ಲೋಕಸಂಗ್ರಹಕ್ಕಾಗಿ ಮಾಡಿದುದು, ಶ್ರೀ ಶಂಕರ ಭಗವತ್ಪಾದರು ತತ್ತ್ವಜ್ಞಾನಿಗಳೇ ಆಗಿದ್ದರೂ ನಾಸ್ತಿಕ ಮತಗಳನ್ನು ನಿರಾಕರಿಸಿ, ಆಸ್ತಿಕ ಮತವನ್ನು ಉದ್ಧರಿಸಿದರು. ಕುಮಾರಿಲ ಭಟ್ಟರು ಕರ್ಮಕಾಂಡದ ಪ್ರವೃತ್ತಿ ಮಾರ್ಗವನ್ನು ಉದ್ಧರಿಸಿದರು. ಶ್ರೀ ಶಂಕರರು ಮಾತ್ರ ಜ್ಞಾನಕಾಂಡದ ನಿವೃತ್ತಿ ಮಾರ್ಗವನ್ನು ಉದ್ಧರಿಸಿದರು. ಆತ್ಮನ ಅಸ್ತಿತ್ವ, ಈಶ್ವರನ ಅಸ್ತಿತ್ವ, ಈ ಎಲ್ಲವನ್ನೂ ಶ್ರುತಿ, ಸ್ಮೃತಿ, ನ್ಯಾಯಗಳಿಂದ ಸಾಧಿಸಿ ಬೋಧಿಸಿರುತ್ತಾರೆ. ಷಣ್ಮತಗಳನ್ನು ವೈದಿಕಮತರೀತ್ಯಾ ಸ್ಥಿರಗೊಳಿಸಿ, ಭಕ್ತಿಯೋಗವನ್ನು, ಧ್ಯಾನಯೋಗವನ್ನು, ಅಧಿಕಾರಿಗಳಿಗೆ ತಕ್ಕಂತೆ ಪರಿಷ್ಕರಿಸಿದರು. ಎಲ್ಲ ಮತಗಳಲ್ಲಿಯೂ ಇರುವ ದೇವರೊಬ್ಬನೇ ಎಂಬ ವೈದಿಕ ಸಿದ್ಧಾಂತವನ್ನು ಸ್ಥಿರಪಡಿಸಿದರು. ಈ ಬಗೆಯ ಲೋಕಕಲ್ಯಾಣಕರವಾದ ಕಾರ್ಯಗಳು ಜೀವನ್ಮುಕ್ತರಾದ ಜ್ಞಾನಿಗಳಲ್ಲಿಯೂ ಕಂಡುಬರುತ್ತದೆ. ಇವರೆಲ್ಲರೂ ಸ್ವಪ್ರಯೋಜನಕ್ಕಾಗಿ ಯಾವ ಕಾರ್ಯವನ್ನೂ ಮಾಡಿಲ್ಲ; **ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹಕಶ್ಚನ**—ಎಂಬಂತೆ.

ಉಪನಿಷತ್ತಿನಂತೆ, ಈ ಗೀತಾಶಾಸ್ತ್ರದಲ್ಲಿಯೂ ಬ್ರಹ್ಮವಿದ್ಯೆ,—ಸಗುಣೋಪಾಸನೆ, ಮತ್ತು ಅಷ್ಟಾಂಗಯೋಗಗಳನ್ನು ಅಲ್ಲಲ್ಲಿ ಉಪದೇಶ ಮಾಡಿರುವುದರಿಂದ ಉಪನಿಷತ್ತೆಂದೂ, ಬ್ರಹ್ಮವಿದ್ಯೆಯೆಂದೂ, ಯೋಗಶಾಸ್ತ್ರವೆಂದೂ ಕರೆದಿರುವುದು ಅತ್ಯಂತ ಉಚಿತವಾಗಿದೆ. ಇದರಲ್ಲೇ ಉಪಾಸನೆಗೆ ಬೇಕಾದ ಸಗುಣಈಶ್ವರನ ಉಪಾಸನೆಯನ್ನು, 7ನೇ ಅಧ್ಯಾಯದಲ್ಲಿ ವಿಭಿನ್ನ ಉಪಾಸನೆಗಳನ್ನು—ಅಂದರೆ—ಶ್ರೀರಾಮ, ಪರಶುರಾಮ, ಸೂರ್ಯ, ಚಂದ್ರ ಮುಂತಾದ ಸ್ವರೂಪಗಳನ್ನು—ವಿರಾಟ್ ಸ್ವರೂಪವಾದ ವಿಶ್ವರೂಪ ಉಪಾಸನೆಯನ್ನು ಹೇಳಿರುವುದು. ಇದು ಮಧ್ಯಮ ವರ್ಗದ ಸಾಧಕನಿಗೆ ಚಿತ್ತೈಕಾಗ್ರತೆಯನ್ನು ಕೊಟ್ಟು ಜ್ಞಾನಕ್ಕೆ ಸಹಕರಿಸುವುದು. 13ನೇ ಅಧ್ಯಾಯದಲ್ಲಿ ಮುಖ್ಯಾಧಿಕಾರಿಯಾದ ಪರಮವಿರಕ್ತನಾದ ಸಂನ್ಯಾಸಿಗೆ ಬ್ರಹ್ಮಾತ್ಮೈಕ್ಯ ಜ್ಞಾನವನ್ನೂ ಅದರ ಸಾಧನಗಳನ್ನೂ ಬೋಧಿಸಿದೆ. ಹೀಗೆ ಸೋಪಾನ ಕ್ರಮದಿಂದ—ಕರ್ಮಯೋಗ, ಧ್ಯಾನಯೋಗ ಮತ್ತು ಭಕ್ತಿಯೋಗ—ಇವುಗಳನ್ನು ಕ್ರಮವಾಗಿ ಸಾಧಿಸುವವರಿಗೆ ಪರಮಪುರುಷಾರ್ಥ ಲಭಿಸುವುದೆಂದು ಗೀತೆಯ ಸಿದ್ಧಾಂತವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಗೀತೆಯು ಹುಟ್ಟಿದ ಕ್ರಮ

ಕೌರವರೂ, ಪಾಂಡವರೂ ಯುದ್ಧಕ್ಕೆ ಸಜ್ಜಾಗಿ ಅಕ್ಷೌಹಿಣೀ ಸೈನ್ಯವನ್ನು ಕುರುಕ್ಷೇತ್ರದ ರಣರಂಗದಲ್ಲಿ ಕ್ರಮಬದ್ಧವಾಗಿ ನಿಲ್ಲಿಸಿದ್ದರು. ಯುದ್ಧದಲ್ಲಿ ಮುಂದೇನಾಗುವುದೆಂದು ತಿಳಿಯಲು ಧೃತರಾಷ್ಟ್ರನಿಗೆ ದಿವ್ಯದೃಷ್ಟಿಯನ್ನು ಕೊಡಲು ವೇದವ್ಯಾಸರು ಬಂದರು. ಆದರೆ, ಧೃತರಾಷ್ಟ್ರನು ನೋಡಲಾರೆನೆಂದು ನಿರಾಕರಿಸಿದನು. ಅನಂತರ ಧೃತರಾಷ್ಟ್ರನಿಗೆ ಬಹಳ ಆಪ್ತನಾದ ಸಂಜಯನ ಮೂಲಕ ತಿಳಿಸಲು ವೇದವ್ಯಾಸರು ಅವನಿಗೆ ದಿವ್ಯದೃಷ್ಟಿಯನ್ನು ಅನುಗ್ರಹಿಸಿದರು. ಆ ನಂತರವೇ ಸಂಜಯನು ಧೃತರಾಷ್ಟ್ರನಿಗೆ ಆರಂಭದಿಂದ ನಡೆದ ಸಮಾಚಾರವನ್ನು ಹೇಳಲು ಉದ್ಯುಕ್ತನಾದನು. ಧೃತರಾಷ್ಟ್ರನು ಮೊದಲು ಹೀಗೆ ಪ್ರಶ್ನಿಸುತ್ತಾನೆ—

ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ ।
ಮಾಮಕಾಃ ಪಾಂಡವಾಶ್ಚೈವ ಕಿಮಕುರ್ವತ ಸಂಜಯ ॥

ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಸೇರಿದ್ದ ನನ್ನ ಮಕ್ಕಳು ಮತ್ತು ಪಾಂಡವರು ಏನು ಮಾಡಿದರು ? (ಯುದ್ಧ ಮಾಡಿದರೆ, ಬಿಟ್ಟರೇ ?) ಎಂದು ಕೇಳಿದನು. ಸಂಜಯನು ರಣರಂಗದಲ್ಲಿ ನಡೆದ ಕೃಷ್ಣಾರ್ಜುನ ಸಂವಾದವನ್ನು ಕುಳಿತ ಸ್ಥಳದಲ್ಲೇ ತಿಳಿದು ಉತ್ತರಿಸಿದನು.

ಜೀವ ಸ್ವರೂಪ (ಗೀತೆಯಲ್ಲಿ ವಿವರಿಸಿರುವಂತೆ)

ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ ।
ಮನಃಷಷ್ಠಾಣೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ॥

ಶರೀರಂ ಯದವಾಪ್ನೋತಿ ಯಚ್ಚಾಪ್ಯುತ್ಕ್ರಾಮತೀಶ್ವರಃ ।
ಗೃಹೀತ್ವೈತಾನಿ ಸಂಯಾತಿ ವಾಯುರ್ಗಂಧಾನಿವಾಶಯಾತ್ ॥

ಈ ಶ್ಲೋಕಗಳಲ್ಲಿ ಜೀವಸ್ವರೂಪವನ್ನು ಹೇಳಿದೆ. ಜೀವಾತ್ಮನು ನನ್ನ ಅಂಶ—ಅಂದರೆ ಪರಮಾತ್ಮನ ಅಂಶ ಎಂದು ಹೇಳಿದೆ. ಇವನೇ ಜೀವನಾಗಿರುವವನು. ಸನಾತನಃ— ಎಂದರೆ, ಅನಾದಿಯಾಗಿರುವನು. ಇಲ್ಲಿ ಪರಮಾತ್ಮನ ಅಂಶ ಎಂದರೆ ಭಾಗ ಎಂಬ ಅರ್ಥ ವಾಸ್ತವವಲ್ಲ; ಏಕೆಂದರೆ ಪರಮಾತ್ಮನನ್ನು ಅವಯವ ಶೂನ್ಯ, ವಿಭಾಗ ರಹಿತ, ಎಂದು ಮಾಂಡೂಕ್ಯ ಶ್ರುತಿಯು ತಿಳಿಸುತ್ತದೆ—"ನಿಷ್ಕಲಂ ನಿಷ್ಕ್ರಿಯಂ ಶಾನ್ತಂ..."। ಆದ್ದರಿಂದ ಘಟದ ಎಳೆಯಂತೆ ಅಂಶವೆಂದು ಅರ್ಥವಲ್ಲ ; ಒಂದು ವೇಳೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಗಾದರೆ, ಪಟದಂತೆ ಪರಮಾತ್ಮನನ್ನು ಸಾವಯವನೆನ್ನಬೇಕಾಗುತ್ತದೆ. ಸಾವಯವಕ್ಕೆ ಉತ್ಪತ್ತಿ; ಉತ್ಪನ್ನವಾದುದಕ್ಕೆ ವಿನಾಶ-ಇದು ಅನಿವಾರ್ಯವಾಗುತ್ತದೆ. ಆದ್ದರಿಂದ—"ಅಂಶ ಇವ"—ಅಂದರೆ, ಕಲ್ಪಿತ ಅಂಶಾಂಶಿ ಭಾವವುಳ್ಳದ್ದು ಎಂದು ಭಾಷ್ಯಕಾರರು ಹೇಳಿದ್ದಾರೆ. ಹೇಗೆಂದರೆ—ಮಹಾಕಾಶವು ಸರ್ವವ್ಯಾಪಕ; ಮಹಾಕಾಶದಲ್ಲಿ ಘಟಾಕಾಶ, ಕರಕಾಕಾಶ (ಕಮಂಡಲುವಿನ ಛಿದ್ರ), ಗವಾಕ್ಷಾಕಾಶ (ಕಿಟಕಿಯ ಛಿದ್ರಗಳು)—ಇವೆಲ್ಲವೂ ಉಪಾಧಿಯಿಂದ ಭಿನ್ನಭಿನ್ನವಾಗಿ ಕಾಣುವುದರಿಂದ, ಭಿನ್ನವೆಂದೂ, ಮಹಾಕಾಶದ ಅಂಶವೆಂದೂ ವ್ಯವಹಾರ ಮಾಡಲಾಗುವಂತೆ, ಪರಮಾತ್ಮನ ಅಂಶದಂತಿದ್ದು ಪರಿಚ್ಛಿನ್ನವಾದಂತೆ ಕಾಣುವ ಜೀವನನ್ನೇ ಇಲ್ಲಿ ಅಂಶ ಶಬ್ದದಿಂದ ಭಗವಂತನು ಹೇಳಿದ್ದಾನೆ.

ಪ್ರತಿಯೊಂದು ಜೀವಜಂತುವಿನ ಅಂತಃಕರಣವು ಪರಿಚ್ಛಿನ್ನವಾದುದು. ಘಟಾಕಾಶ ಕರಕಾಕಾಶದಂತೆ ಸಣ್ಣದು. ಅಲ್ಲದೆ, ದೊಡ್ಡ ಬೆಂಕಿಯಿಂದ ಹಾರಿ ಬರುವ ಕಿಡಿಗಳಂತೆ, ಪರಮಾತ್ಮನಿಂದ ಹೊರಬಂದ ಜೀವಿಗಳು ಸಣ್ಣದಾಗಿ ಕಾಣಿಸಿಕೊಳ್ಳುತ್ತವೆ. ಇದಕ್ಕೆ ಶ್ರುತಿಯೇ ಪ್ರಮಾಣ—"ಯಥಾಗ್ನೇರ್ಜ್ವಲತೋ ವಿಸ್ಫುಲಿಂಗಾಃ ವ್ಯುಚ್ಚಲಂತಿ"—ಜೀವರ ಅಂತಃಕರಣದಲ್ಲಿ ಮೊದಲು ಚೈತನ್ಯವು ಪ್ರತಿಬಿಂಬಿಸಿ ತೋರುವುದು. ದೈವನಿರ್ಮಾಣದಲ್ಲಿ ಅಂತಃಕರಣವು ಸ್ವಚ್ಛವಾಗಿರುವುದರಿಂದ, ಈ ಕೋರಿಕೆಯು "ಅಹಂ" ನಾನು, ಜೀವ, ಕರ್ತಾ, ಭೋಕ್ತಾ—ಇತ್ಯಾದಿ ರೂಪಗಳನ್ನು ಹೊಂದಿರುವುದು. ಈ ಆತ್ಮಕರ್ಮಾನುಸಾರ ಶರೀರವನ್ನು ಪಡೆದಾಗ ಅಂತಃಕರಣ, ಇಂದ್ರಿಯ ಇವುಗಳ ಮೂಲಕ ಶರೀರದಲ್ಲಿ ಆತ್ಮ ಚೈತನ್ಯವು ನಖ-ಶಿಖ ಪರ್ಯಂತ ವ್ಯಾಪಿಸಿ—"ಇದೇ ಆತ್ಮ" ಎಂದು ಹೇಳಿಸಿಕೊಳ್ಳುವುದು. ಒಟ್ಟಿನಲ್ಲಿ ಸ್ಥೂಲ-ಸೂಕ್ಷ್ಮ ಶರೀರವೆಂಬ ಪಂಜರಕ್ಕೆ ಸ್ವಾಮಿಯಾಗಿರುವ ಚೇತನವೇ ಜೀವ. ಕರ್ಮಾನುಸಾರವಾಗಿ ಲೋಕಾಂತರದಲ್ಲಿ ಸಂಚರಿಸುವುದು.

ಮನಃ ಷಷ್ಠಾನೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ ।
ಶರೀರಂ ಯದವಾಪ್ನೋತಿ ಯಚ್ಚಾಪ್ಯುತ್ಕ್ರಾಮತೀಶ್ವರಃ ॥
ಗೃಹೀತ್ವೈತಾನಿ ಸಂಯಾತಿ ವಾಯುರ್ಗಂಧಾನಿವಾಶಯಾತ್ ।

—ಶರೀರಸ್ವಾಮಿಯಾದ ಜೀವನ ಮನಸ್ಸು ಸೇರಿದ ಪಂಚ ಜ್ಞಾನೇಂದ್ರಿಯಗಳನ್ನು, ಶರೀರವನ್ನು ತೆಗೆದುಕೊಳ್ಳುವಾಗಲೂ ಅದನ್ನು ಬಿಡುವಾಗಲೂ ಆಯಾಯ ಸ್ಥಾನದಲ್ಲಿರುವವುಗಳನ್ನು ಎಳೆದುಕೊಳ್ಳುತ್ತಾನೆ—ಹೇಗೆಂದರೆ—ಗಾಳಿಯು ಹೂವಿನಲ್ಲಿರುವ ಪರಿಮಳವನ್ನು ರೇಣುಗಳೊಂದಿಗೆ ಎಳೆದುಕೊಂಡು ಹೋಗುವಂತೆ—ಎಂದು ಅರ್ಥ.

ಇದರ ಆಶಯವೇನೆಂದರೆ—ಸೂಕ್ಷ್ಮ ಶರೀರದ ಮೂಲಕ ಜೀವಾತ್ಮನು ಶರೀರವನ್ನು ತೆಗೆದುಕೊಳ್ಳುತ್ತಾನೆ ಹಾಗೂ ಬಿಡುತ್ತಾನೆ. ಸೂಕ್ಷ್ಮ ಶರೀರವೆಂದರೆ—ಪಂಚ ಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಪಂಚಪ್ರಾಣಗಳು, ಮನಸ್ಸು

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತು ಬುದ್ಧಿ—ಈ ಹದಿನೇಳು ಪದಾರ್ಥಗಳ ಸಮುದಾಯ. ಇದಕ್ಕೆ ಲಿಂಗ ಶರೀರ ವೆಂದೂ ಹೆಸರು! ಜೀವಾತ್ಮನು ಸ್ವತಃ ವ್ಯಾಪಕನಾಗಿರುವುದರಿಂದ ಸಂಚಾರವಿಲ್ಲದವನು. ಇಂತಹ ಲೋಕಾಂತರದಲ್ಲಿ ಸಂಚರಿಸುವನೆಂದರೆ ಸೂಕ್ಷ್ಮ ಶರೀರದ ಮೂಲಕವೇ ಎಂದರ್ಥ. ನೌಕೆಯು ಹೊರಟರೆ, ಅದರೊಳಗಿರುವ ಪ್ರಯಾಣಿಕರೂ ಹೊರಟಂತೆ, ಸಂಚರಿಸಿದಂತೆ ತೋರುತದೆ. ವಸ್ತುತಃ ಇಲ್ಲ. ನಾವೆಯು ಹೋಗುತ್ತಲಿದ್ದರೆ, ದಡ ದಲ್ಲಿರುವ ಗಿಡಮರಗಳು ಸಂಚರಿಸುತ್ತಿರುವಂತೆ ತೋರುತ್ತವೆ. ಪ್ರಕೃತ ಸೂಕ್ಷ್ಮಶರೀರ ಮತು ಅದಕ್ಕೆ ಆಧಾರವಾದ ಪಂಚಭೂತಸೂಕ್ಷ್ಮಗಳು. ಇವುಗಳು ಹೋದಲ್ಲಿ ಆತ್ಮನು ಸಂಚರಿಸುತ್ತಾನೆ. ಸೂಕ್ಷ್ಮ ಶರೀರವು ಪಂಚಭೂತಸೂಕ್ಷ್ಮಗಳೊಡನೆ ಸೇರಿದಾಗ, ಆ ಸ್ಥಳ ದಲ್ಲಿ ಸ್ಥೂಲ ಶರೀರವು ಕರ್ಮಾನುಸಾರ ಬರುತ್ತದೆ, ಹುಟ್ಟುತ್ತದೆ. ಪುಣ್ಯವೇ ಹೆಚ್ಚಾ ದರೆ, ದೇವಲೋಕದಲ್ಲಿ ದೇವತೆಯಾಗಿ ಹುಟ್ಟುವನು; ಪಾಪವು ಹೆಚ್ಚಾಗಿದ್ದರೆ ನರಕದಲ್ಲಿ ಅಥವಾ ಭೂತಪ್ರೇತ ಪಿಶಾಚಿಗಳ ಜನ್ಮವನ್ನೆತ್ತುವನು. ಪುಣ್ಯ-ಪಾಪಗಳೆರಡೂ ಸಮ ಸಮವಾಗಿದ್ದರೆ, ಮನುಷ್ಯ ಜನ್ಮವೆತ್ತುವನು. ಇದನ್ನೇ ಗೀತೆಯಲ್ಲಿ—

ಅನಿಷ್ಟಮಿಷ್ಟಂ ಮಿಶ್ರಂಚ ತ್ರಿವಿಧಂ ಕರ್ಮಣಃ ಫಲಂ ।
ಭವತ್ಯತ್ಯಾಗಿನಾಂ ಪ್ರೇತ್ಯ ನ ತು ಸಂನ್ಯಾಸಿನಾಂ ಕ್ವಚಿತ್ ॥—

ಎಂದು ಹೇಳಿದೆ. ಸಂನ್ಯಾಸಿಗಳಲ್ಲದ, ತ್ಯಾಗವಿಲ್ಲದ ಜನರಿಗೆ ಅವಶ್ಯವಾಗಿ ಮೇಲೆ ಹೇಳಿದ ಮೂರು ಜನ್ಮಗಳಲ್ಲೊಂದು ಕರ್ಮಾನುಸಾರ ಬರುವುದು. "ಊರ್ಧ್ವಂಗ ಚ್ಛಂತಿ ಸತ್ತ್ವಸ್ಥಾಃ"—ಎಂಬ ಪ್ರಸಂಗದಲ್ಲಿ ಮೇಲಿನ ವಿಚಾರವಿದೆ. ನಜಾಯತೇ ಮ್ರಿಯತೇ ವಾ ಕದಾಚಿತ್"—ಎಂದು ಹೇಳಿರುವಂತೆ ಆತ್ಮನಿಗೆ ನಿಜವಾಗಿ ಹುಟ್ಟು ಸಾವುಗಳಿಲ್ಲ. ಎರಡನೇ ಅಧ್ಯಾಯದಲ್ಲಿ—"ಅಶೋಚ್ಯಾನನ್ವಶೋಚಸ್ತ್ವಂ—"ಎಂಬ ಶ್ಲೋಕದಿಂದ ಪ್ರಾರಂಭಿಸಿ, ಆತ್ಮನ ಸ್ವರೂಪವನ್ನು ವಿವರವಾಗಿ ಹೇಳಲಾಗಿದೆ. ಶರೀರ ಬರುವುದೇ ಹುಟ್ಟು; ಜೀರ್ಣ ಶರೀರವನ್ನು ಬಿಡುವುದೇ ಮರಣ. ಇದನ್ನು—

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿಗೃಹ್ಣಾತಿ ನರೋಽಪರಾಣಿ।
ತಥಾ ಶರೀರಾಣಿ ವಿಹಾಯ ಜೀರ್ಣಾನಿ
ಅನ್ಯಾನಿ ಸಂಯಾತಿ ನವಾನಿ ದೇಹೀ ॥

ಎಂಬ ಶ್ಲೋಕದಲ್ಲಿ ವಿವರಿಸಲಾಗಿದೆ. ಈವರೆಗೆ ಹೇಳಿದಂತೆ ಪಂಚಇಂದ್ರಿಯಗಳು, ಮನಸ್ಸು, (ಹನ್ನೊಂದು ಇಂದ್ರಿಯಗಳನ್ನು) ಈ ಶರೀರವನ್ನು ಬಿಟ್ಟು ಹೋಗುವಾಗ ಎಳೆದುಕೊಳ್ಳುವನು. "ಶ್ರೋತ್ರಂ ಚಕ್ಷುಃ ಸ್ಪರ್ಶನಂಚರಸನಂ ಘ್ರಾಣಮೇವಚ !"—ಎಂಬುದರಲ್ಲಿ ವಿವರಿಸಲಾಗಿದೆ. ಇದರ ಕ್ರಮ ಹೇಗೆಂದರೆ-ಹೂವಿನಲ್ಲಿರುವ ಪರಿಮಳವನ್ನು ಬಹುದೂರವರೆಗೆ ಗಾಳಿಯು ಒಯ್ಯುವಂತೆ, ಅಂದರೆ ಕೇದಿಗೆ, ಸಂಪಿಗೆ ಮುಂತಾದ ಹೂಗಳಲ್ಲಿ ಗಂಧದ ಜೊತೆಗಿರುವ ಸೂಕ್ಷ್ಮವಾದ ಪರಾಗಗಳನ್ನು ಗಾಳಿಯು ಒಯ್ಯುವಂತೆ, ಉತ್ತಮಾಧಮಮಧ್ಯಮ ಸಂಸ್ಕಾರದಿಂದ ಕೂಡಿದ ಮನಸ್ಸೇ ಮೊದಲಾದ ಅಂಶಗಳ

Sri Vidyabharathi Book Centre, Sringeri

CC-O. In Public Domain. Digitized by eGangotri

ನ್ನೊಳಗೊಂಡ ಸೂಕ್ಷ್ಮಶರೀರವನ್ನು ಜೀವನು ಒಯ್ಯುತಾನೆ. ಇವುಗಳಲ್ಲಿ ಪ್ರಧಾನವಾಗಿ ಪ್ರಾಣ ; ಇದನ್ನನುಸರಿಸಿ ಇಂದ್ರಿಯಗಳು ಹೊರಡುತವೆ. ಲೋಕಾಂತರದಿಂದ ಇಹಕ್ಕೂ ಇದೇ ಕ್ರಮದಲ್ಲಿ ಸಂಚಾರ ಇಹಪರಗಳಲ್ಲಿ ಸಂಚರಿಸುವುದನ್ನು ಸಂಸಾರ ಪದದಿಂದ ಹೇಳ ಲಾಗುವುದು. "ಪುನರಪಿ ಜನನಂ ಪುನರಪಿ ಮರಣಂ ಪುನರಪಿ ಜನನೀ ಜಠರೇ ಶಯನಮ್"। -ಎಂದು ಭಜಗೋವಿಂದ ಪ್ರಕರಣದಲ್ಲಿ ಶ್ರೀ ಶಂಕರಭಗವತ್ಪಾದರು ಅಪ್ಪಣೆ ಕೊಡಿಸಿ ದ್ದಾರೆ.

ಸಂಸಾರದ ವರ್ಣನೆ—

ಅವಿದ್ಯಾ, ಕಾಮ, ಕರ್ಮ, ಪೂರ್ವಜನ್ಮದ ವಾಸನೆಗಳು ಎಲ್ಲ ಜೀವರಿಗೂ ಸಂಸಾರಕ್ಕೆ ಕಾರಣ. ಅವಿದ್ಯೆ-ಎಂದರೆ,ಪರಮಾತ್ಮ ಸ್ವರೂಪದ ಅಜ್ಞಾನ. ಅಜ್ಞಾನದಿಂದ ಅಧ್ಯಾಸ-ಅಂದರೆ "ಅಹಂ, ಮಮ" ಎಂದು ಉಂಟಾಗುವ ಭ್ರಾಂತಿಜ್ಞಾನ. ಇದು ಅನಾದಿ. ಜೀವ ನಿಗೆ (ಅಜ್ಞಾನಿಗೆ) ಕಾಮ (ರಾಗ-ವಿಹಿತಕರ್ಮಗಳಲ್ಲಿ, ನಿಷಿದ್ಧ ಕರ್ಮಗಳಲ್ಲಿ) ಹುಟ್ಟು ತ್ತದೆ. ಈ ಕಾಮದಿಂದಲೇ ಕರ್ಮಗಳು. ಅವುಗಳಿಂದ ಪಾಪ ಪುಣ್ಯಗಳು, ಇವುಗಳಿಂದ ಜನ್ಮ ಉಂಟಾಗುತದೆ. ಜನ್ಮ ಬಂದೊಡನೆ ಸುಖ-ದುಃಖಾನುಭವ (ಭೋಗ) ಉಂಟಾ ಗುತದೆ. ಈ ಭೋಗವು ಸ್ಥೂಲ ಶರೀರದಿಂದ ಆತ್ಮನಿಗೆ ಉಂಟಾಗುತ್ತದೆ. ಅದಕ್ಕೆ ಬೇಕಾದ ಉಪಕರಣವೇ ಸೂಕ್ಷ್ಮಶರೀರ (ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿ ಯಗಳು, ಐದು ಪ್ರಾಣಗಳು, ಬುದ್ಧಿ, ಮನಸ್ಸು- ಇವುಗಳ ಸಂಘಾತವನ್ನೇ ಸೂಕ್ಷ್ಮ ಶರೀರವೆಂದು ಹೇಳಲಾಗಿದೆ). ಸ್ಥೂಲ ಶರೀರವು ನಶಿಸಿ ಹೋಗುತ್ತಿದ್ದರೂ, ಸೂಕ್ಷ್ಮ ಶರೀ ರವು ಮೋಕ್ಷಪರ್ಯಂತ ಸ್ಥಿರವಾಗಿರುತದೆ. ದೇಹಬೀಜವಾಗಿರುವ ಪಂಚಭೂತ ಸೂಕ್ಷ್ಮ ಶರೀರಕ್ಕೆ ಆಧಾರ ; ಅಂದರೆ, ಪೂರ್ವಜನ್ಮದ ವಾಸನೆಗಳು, ಅವಿದ್ಯಾ, ಕಾಮ ಮತು ಕರ್ಮವೆಂದು ಸಿದ್ಧಾಂತ. ಕರ್ಮವು ಉತ ಮ ಮತು ಅಧಮ ಎಂದು-ಉತಮೋ ಪಾಸನೆ-ನೀಚೋಪಾಸನೆ-ಎಂದು ಎರಡು ಇರುವುವು. ಇದಕ್ಕೆ ಅನುಗುಣವಾಗಿ ಉತಮ ಮತು ಅಧಮ ಜನ್ಮಗಳು ಉಂಟಾಗು ತ ವೆ. ಇವು ಗೀತೆಯಲ್ಲಿ ಹೇಳಿರುವು ದಕ್ಕೆ ಪೂರಕವಾದ ಅಂಶಗಳು. ಇವುಗಳನ್ನು ಸೂತ್ರಭಾಷ್ಯ ಮತು ಉಪನಿಷದ್ಭಾಷ್ಯ ಗಳಲ್ಲಿ ವಿವರಿಸಿದ್ದಾರೆ. "ತಂ ವಿದ್ಯಾಕರ್ಮಣೀ ಸಮನ್ವಾರಭೇತೇ ಪೂರ್ವಪ್ರಜ್ಞಾ ಚ." ಜನ್ಮಾಂತರಗಳಲ್ಲಿ ಸಂಪಾದಿಸಿಕೊಂಡ ಸಂಸ್ಕೃತಿ-ಉತಮ ಸಂಸ್ಕೃತಿ, ವೇದಶಾಸ್ತ್ರಾಧ್ಯ ಯನ, ವಿಜ್ಞಾನ, ಗೀತ ನೃತ್ಯನಾಟ್ಯಾದಿ ಕಲೆಗಳು-ಇವುಗಳು, ಸಂಸ್ಕಾರಗಳೇ ಪೂರ್ವ ಪ್ರಜ್ಞೆ. ಅಧಮ ಸಂಸ್ಕೃತಿ-ವಂಚನೆ, ಕಳ್ಳತನ, ದ್ಯೂತ, ಪಾನ, ಮುಂತಾದ ಪೂರ್ವ ಜನ್ಮದ ಸಂಸ್ಕಾರಗಳೂ ಸಹ ಪೂರ್ವಪ್ರಜ್ಞೆ.

"ಶ್ರೋತ್ರಂ ಚಕ್ಷುಃ ಸ್ಪರ್ಶನಂ ಚ ರಸನಂ ಘ್ರಾಣಮೇವಚ ।
ಅಧಿಷ್ಠಾಯ ಮನಶ್ಚಾಯಂ ವಿಷಯಾನುಪ ಸೇವತೇ ॥"

ಮನಸ್ಸನ್ನು ಮುಖ್ಯವಾಗಿ ಅವಲಂಬಿಸಿ ಬಹಿರಿಂದ್ರಿಯದ್ವಾರಾ ಶಬ್ದ ಸ್ಪರ್ಶರೂಪರಸ ಗಂಧಗಳನ್ನು ನೇರವಾಗಿ ಅನುಭವಿಸುತ್ತಾನೆ.

(ಸಶೇಷ)

Sri Vidyabharathi Book Centre, Sringeri

CC-O. In Public Domain. Digitized by eGangotri

ಎಲ್ಲ ಭೋಗಗಳನ್ನು ಕರ್ಮಾನುಸಾರವೆಂದು ತಿಳಿಯಬೇಕು. ಪ್ರತಿಯೊಬ್ಬನ ಸಂಸ್ಕಾರವೂ ಅವಿದ್ಯಾಮೂಲಕವಾಗಿದ್ದು, ಆದರಿಂದ ಜನ್ಮ ಬಂದು, ಆಯಾಯ ಜನ್ಮಗಳಲ್ಲಿ ಸುಖ-ದುಃಖಗಳ ಭೋಗವು ಉಂಟಾಗುತ್ತಲೇ ಇರುವುದು.

ಜಾಗ್ರದ್ದಶೆಯಲ್ಲಿ ಬಹಿರಿಂದ್ರಿಯಗಳ ಮೂಲಕ ಆಗತಕ್ಕ ಭೋಗವು ಹೇಗೋ ಹಾಗೆಯೇ ಕೇವಲ ಅಂತರಿಂದ್ರಿಯದಿಂದ ವಾಸನಾರೂಪವಾದ ವಿಷಯಭೋಗವು ಸ್ವಪ್ನಾವಸ್ಥೆಯಲ್ಲಿ ಉಂಟಾಗುವುದು. ಸ್ವಪ್ನದಲ್ಲುಂಟಾಗುವ ಭೋಗಕ್ಕೆ ಕಾರಣವಾದ ಪಾಪಪುಣ್ಯಗಳಿಗೆ ಅವಕಾಶವಿದ್ದು, ಆಗಲೂ ಸುಖದುಃಖ ಭೋಗವುಂಟು. ಇದು ಸಂಸಾರದಲ್ಲಿ ಸೇರಿರುವುದು.

ಜಾಗ್ರತ್-ಸ್ವಪ್ನಾವಸ್ಥೆಗಳು ಕಳೆದಾಗ ಸುಷುಪ್ತ್ಯವಸ್ಥೆ ಪ್ರಾಪ್ತವಾಗುವುದು. ಇಲ್ಲಿ ಯಾವ ಇಂದ್ರಿಯವೃತ್ತಿ ಅಥವಾ ಮನೋವೃತ್ತಿ ಇರುವುದಿಲ್ಲ. ವಿಶೇಷ ವಿಜ್ಞಾನವು ಉಪರತವಾಗಿ, ನಿಂತುಹೋಗಿ, ಅಜ್ಞಾನವು ಆವರಿಸಿಕೊಂಡಿರುವ ಸ್ಥಿತಿ ಇದು. ಜೀವನು ಸ್ವಾಭಾವಿಕವಾಗಿ ಬ್ರಹ್ಮನೊಡನೆ ಏಕವಾಗಿರುತ್ತಾನೆ. ಆತ್ಮಸ್ವರೂಪಾನಂದವು ಅನುಭವಕ್ಕೆ ಬರುವುದು. ಆಗ ಸಂಸಾರ ದುಃಖವಿರುವುದಿಲ್ಲ. ಅಹಂ, ಮಮ, ಭ್ರಾಂತಿಜ್ಞಾನಗಳು ವ್ಯಕ್ತವಾಗುವುದಿಲ್ಲ. "ಆನಂದಮಯೋಹ್ಯಾನಂದ ಭುಕ್" ಎಂದು ಮಾಂಡೂಕ್ಯದಲ್ಲಿ ಹೇಳಿದಂತೆ-"ನಾನು ಈವರೆಗೂ ಸುಖವಾಗಿ ಮಲಗಿದ್ದೆ. ಏನೊಂದೂ ಅರಿಯಲಿಲ್ಲ''-ಎಂಬ ಅನುಭವವು ಎದ್ದಮೇಲೆ ಪರಾಮರ್ಶಿಸಲ್ಪಡುವುದು. ಈ ಸ್ಥಿತಿಯು ಹೆಚ್ಚು ಕಾಲವಿರುವುದಿಲ್ಲ. ಮೂರೂ ಅವಸ್ಥೆಗಳನ್ನೂ ಕಂಡ ಆತ್ಮ ಮಾತ್ರ ಸ್ಥಿರವೆಂಬುದು ನಿಶ್ಚಿತ.

ಗೀತೆಯಲ್ಲಿ ಹೇಳಿರುವಂತೆ ಸಂಸಾರ ವೃಕ್ಷದ ವರ್ಣನೆ-

ಹಿಂದೆ ಹೇಳಿದಂತೆ ಜೀವಾತ್ಮನು ಲೋಕಾಂತರಕ್ಕೆ ಸಂಚರಿಸುವಾಗ ಸೂಕ್ಷ್ಮಶರೀರದ ಮೂಲಕ ಸಂಚರಿಸುತ್ತಾನೆ. ಪುಣ್ಯ ಕರ್ಮಗಳನ್ನು ಮಾಡಿದ್ದರೆ ದಕ್ಷಿಣಾಯನ ಮಾರ್ಗವನ್ನು ಅವಲಂಬಿಸುವನು. ಈಶ್ವರನ ಉಪಾಸಕನಾಗಿದ್ದರೆ ಉತ್ತರಾಯಣ ಮಾರ್ಗವನ್ನು ಹಿಡಿಯುವನು.

ಶುಕ್ಲಕೃಷ್ಣೇ ಗತೀಹ್ಯೇತೇ ಜಗತಃ ಶಾಶ್ವತೇ ಮತೇ |
ಏಕಯಾ ಯಾತ್ಯನಾವೃತ್ತಿಂ ಅನ್ಯಯಾ ವರ್ತತೇ ಪುನಃ ||

ಅಗ್ನಿರ್ಜ್ಯೋತಿರಹಃ ಶುಕ್ಲಃ ಷಣ್ಮಾಸಾ ಉತ್ತರಾಯಣಮ್ |
ಧೂಮೋರಾತ್ರಿಸ್ತಥಾಕೃಷ್ಣಃ ಷಣ್ಮಾಸಾ ದಕ್ಷಿಣಾಯನಮ್ || -ಗೀತೆ

ಇಲ್ಲಿ ಹೇಳಿರುವಂತೆ-ಶುಕ್ಲಗತಿ, ಕೃಷ್ಣಗತಿ ಎಂದು ಎರಡು ಮಾರ್ಗಗಳು ಜಗತ್ತಿನಲ್ಲಿ ಇರುತ್ತವೆ. "ಶುಕ್ಲಗತಿ''-ಎಂದರೆ "ಅಗ್ನಿರ್ಜ್ಯೋತಿಃ"-ಎಂದು ಹೇಳಿದ ಮಾರ್ಗ. "ಕೃಷ್ಣಗತಿ"—ಎಂದರೆ ಧೂಮಾದಿಮಾರ್ಗ. ಶುಕ್ಲಗತಿಯೇ ಉತ್ತರಾದಿಮಾರ್ಗ. ಕೃಷ್ಣಗತಿಯೇ ದಕ್ಷಿಣಾಯನಮಾರ್ಗ, ಶುಕ್ಲಗತಿಯಿಂದ ಹೋದವನು ಪುನಃ ಜನ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಎತ್ತುವನು. ಉತ್ತರಾಯಣ ಮಾರ್ಗ ಎಂದರೆ ಮಾರ್ಗದರ್ಶಿಗಳಾದ ಧೂಮಾದಿ ದೇವತೆಗಳು, ಹಾಗೆಯೇ ಧೂಮಾದಿ ದೇವತೆಗಳು. ಮಾರ್ಗದರ್ಶಿಗಳನ್ನೇ ಮಾರ್ಗ ಎಂದು ಔಪಚಾರಿಕವಾಗಿ ಕರೆದಿದೆ, ರಾಜದರ್ಶನಕ್ಕೆ ಇವನೇ ಮಾರ್ಗ ಎಂದು ಹೇಳುವಂತೆ, ಈ ಶರೀರವನ್ನು ಬಿಟ್ಟು ಮತ್ತೊಂದು ಶರೀರವನ್ನು ತಲಪುವಾಗ ಜೀವರು ಮೂಢರಾಗಿರುತ್ತಾರೆ. ಇವರಿಗೆ ಮಾರ್ಗದರ್ಶಿಗಳು ಅತ್ಯಾವಶ್ಯಕ. ಅವರೇ ಉತ್ತರಾಯಣದ ಹಾಗೂ ದಕ್ಷಿಣಾಯನದ ಮಾರ್ಗದರ್ಶಿಗಳು. ಇವೆರಡರ ವಿಸ್ತಾರವಾದ ವಿವರಗಳನ್ನು ಉಪನಿಷತ್ತುಗಳಿಂದ ಅರಿಯಬೇಕು.

"ತದ್ಯ ಇತ್ಥಂ ವಿದುಃ ಯೇಚೇಮೇಽರಣ್ಯೇ ಶ್ರದ್ಧಾಂ ಸತ್ಯಮಿತ್ಯುಪಾಸತೇ ಅರ್ಚಿಷೋಽಹಃ, ಅಹ್ನ ಆಪೂರ್ಯಮಾಣಪಕ್ಷಂ, ಆಪೂರ್ಯಮಾಣ ಪಕ್ಷಾತ್ ಯಾನ್ ಷಡುದಙ್ಙೇತಿ ಮಾಸಾಂಸ್ತಾನ್, ಮಾಸೇಭ್ಯ ಸಂವತ್ಸರಂ, ಸಂವತ್ಸರಾದಾದಿತ್ಯಂ, ಆದಿತ್ಯಾಚ್ಚಂದ್ರಮಸಂ, ಚಂದ್ರಮಸೋ ವಿದ್ಯುತಂ, ವಿದ್ಯುತೋಽಮಾನವಃ ಪುರುಷಃ, ಸ ಏನಾನ್ ಬ್ರಹ್ಮಗಮಯತಿ"–ಇಲ್ಲಿ ಹೇಳಿದಂತೆ ಅರ್ಚಿರಾದಿ ಮಾರ್ಗದರ್ಶಿ ದೇವತೆಗಳು.

ಪಂಚಾಗ್ನಿ ವಿದ್ಯಾ ಉಪಾಸಕರೂ, ಅಹಂಗ್ರಹೋಪಾಸನೆ—"ಸೋಽಹಂ"— ಎಂದು ಈಶ್ವರೋಪಾಸನೆ ಮಾಡುವವರೂ ಈ ದೇಹವನ್ನು ಬಿಟ್ಟ ನಂತರ ನೇರವಾಗಿ ಅರ್ಚಿ (ಅಗ್ನಿ) ದೇವತೆಯ ಬಳಿಗೆ ಬರುತ್ತಾರೆ. ಅನಂತರ ಅಹರ್ದೇವತೆ, ಅನಂತರ ಶುಕ್ಲಪಕ್ಷದೇವತೆ, ಅನಂತರ ಅದರಿಂದ ಉತ್ತರಾಯಣದ ಮಾಘಾದಿ ಮಾಸದೇವತೆಗಳು ಆರು, ನಂತರ ಸಂವತ್ಸರ ದೇವತೆ, ಅನಂತರ ವಾಯುದೇವತೆ, ಅನಂತರ ಆದಿತ್ಯ, ಅನಂತರ ಚಂದ್ರದೇವತೆ, ಅಲ್ಲಿಂದ ವಿದ್ಯುದ್ದೇವತೆ, ಅಲ್ಲಿಂದ ವರುಣದೇವತೆ, ಇಂದ್ರ, ಪ್ರಜಾಪತಿ—ಈ ರೀತಿಯಾಗಿ ಹೇಳಿದ ಅಗ್ನಿ ಮುಂತಾದ ದೇವತೆಗಳು ಮಾರ್ಗಮೂಢರಾದ ಉಪಾಸಕರನ್ನು ಪ್ರಜಾಪತಿಪರ್ಯಂತ ಕ್ರಮವಾಗಿ ಮುಂದೆ ಮುಂದೆ ಸಾಗಿಸುವರು. ಅಲ್ಲಿಂದಾಚೆಗೆ ಅಮಾನವ ಪುರುಷನು ಬಂದು ಬ್ರಹ್ಮಲೋಕಕ್ಕೂ, ಲೋಕಾಭಿಮಾನಿ ಹಿರಣ್ಯಗರ್ಭನೆಂಬ ಅಧಿಪತಿಯ ಹತ್ತಿರಕ್ಕೆ ಕರೆದುಕೊಂಡು ಹೋಗುವನು.

"ಇಮಂ ಮಾನವಮಾವರ್ತಂ ನಾವರ್ತಂತೇ"—ಎಂದು ಪುನರಾವೃತ್ತಿಯಿಲ್ಲದೆ ಈ ಅರ್ಚಿರಾದಿ ಮಾರ್ಗವನ್ನು ಉಪಾಸಕರು ಹೊಂದುವರು. ತತ್ತ್ವಜ್ಞಾನದಿಂದಲೇ ಕಲ್ಪಾಂತದಲ್ಲಿ ಮುಕ್ತರಾಗುವರು. ಈ ಮಾರ್ಗವು ದೇವಯಾನಮಾರ್ಗ, ಉತ್ತರಾಯಣ ಮಾರ್ಗವೆಂದು ಪ್ರಸಿದ್ಧವಾಗಿದೆ.

ದಕ್ಷಿಣಾಯನ ಮಾರ್ಗವು ಕೇವಲ ಕರ್ಮಿಗಳಿಗೆ—

ಕೇವಲ ಕರ್ಮಾನುಷ್ಠಾನ (ವರ್ಣಾಶ್ರಮ ಧರ್ಮಾನುಷ್ಠಾನ) ಮಾಡುವವರು ಗೃಹಸ್ಥರು, ಈಶ್ವರೋಪಾಸನೆಯನ್ನೂ ಮಾಡದವರು. ಪಂಚಾಗ್ನಿವಿದ್ಯೆಯಿಲ್ಲದವರು ಆದ ಗೃಹಸ್ಥರೂ, ವಾನಪ್ರಸ್ಥರೂ ಸಹ (ಸನ್ಯಾಸಿಯಲ್ಲದವರು) ಶರೀರವನ್ನು ಬಿಟ್ಟ

Sri Vidyabharathi Book Centre, Sringeri

CC-O. In Public Domain. Digitized by eGangotri

ನಂತರ ಧೂಮಾದಿಮಾರ್ಗವನ್ನು (ದಕ್ಷಿಣಾಯನಮಾರ್ಗವನ್ನು) ಹಿಡಿದು ಪಿತೃ ಲೋಕಕ್ಕೆ (ಚಂದ್ರಲೋಕಕ್ಕೆ) ಹೋಗುವರು. "ತೇ ಧೂಮಮಭಿಸಂಭವಂತಿ"— ಇತ್ಯಾದಿ ಶ್ರುತಿಯಂತೆ, "ಧೂಮೋರಾತ್ರಿಸ್ತಥಾ ಕೃಷ್ಣಃ ಷಣ್ಮಾಸಾ ದಕ್ಷಿಣಾಯನಂ | ತತ್ರ ಚಾಂದ್ರಮಸಂಜ್ಯೋತಿಃ || ಗೀತಾ. ಶರೀರವನ್ನು ಬಿಟ್ಟ ಕರ್ಮಿಗಳು ಮೊದಲು ಧೂಮದೇವತೆಯನ್ನು ಅವಲಂಬಿಸುವರು. ಈ ದೇವತೆಯಿಂದ ರಾತ್ರಿದೇವತೆಯನ್ನು, ನಂತರ ರಾತ್ರಿದೇವತೆಯಿಂದ ಕೃಷ್ಣಪಕ್ಷದೇವತೆಯನ್ನು, ಈ ದೇವತೆಯ ಮೂಲಕ ಕರ್ಕಾಟಕ ಮಾಸದಿಂದ ಮಕರ ಸಂಕ್ರಾಂತಿಯಾಗುವ ಮಾಸ ಪರ್ಯಂತ ಇರುವ ದಕ್ಷಿಣಾಯನದ ಆರು ಮಾಸಗಳನ್ನು ಅಂದರೆ ಮಾಸದೇವತೆಗಳನ್ನು, ಅನಂತರ ಚಂದ್ರ ಲೋಕವನ್ನೂ ಸೇರುವರು. ಹೀಗೆಯೇ ಈ ಮಾರ್ಗದಿಂದ ಹೋಗಿರುವ ಚಂದ್ರ ಲೋಕದಲ್ಲಿ (ಪಿತೃಲೋಕದಲ್ಲಿ) ಪುಣ್ಯಾನುಸಾರವಾಗಿ ಪಿತೃದೇವತಾಶರೀರವನ್ನು ಹೊಂದಿ ದಿವ್ಯಭೋಗವನ್ನು ಅಂದರೆ ಸ್ವರ್ಗಲೋಕದ ಭೋಗವನ್ನು ಅನುಭವಿಸುವರು. ಅಲ್ಲಿ ಅನುಭವಿಸಿದ ನಂತರ, ಪುಣ್ಯವು ಕ್ಷಯಿಸಿದ ಕೂಡಲೆ ಮನುಷ್ಯಲೋಕಕ್ಕೆ ಬರುತ್ತಾರೆ.

"ತೇ ತಂ ಭುಕ್ತ್ವಾ ಸ್ವರ್ಗಲೋಕಂ ವಿಶಾಲಂ ಕ್ಷೀಣೇಪುಣ್ಯೇ
ಮರ್ತ್ಯಲೋಕಂ ವಿಶಂತಿ"—ಎಂದು ಶ್ರುತಿಯು ತಿಳಿಸುತ್ತದೆ.

ಈ ಮನುಷ್ಯ ಲೋಕಕ್ಕೆ ಬಂದು, ಪುಣ್ಯಶೇಷದಿಂದ ಇಲ್ಲಿ ಪುಣ್ಯಾತ್ಮರ ಮನೆಯಲ್ಲಿ ಹುಟ್ಟುತ್ತಾರೆ. ಸ್ವರ್ಗಲೋಕವಾಗಲೀ, ಅಥವಾ ಯಾವುದೇ ಲೋಕವಾಗಲೀ, ಕರ್ಮ ಅಥವಾ ಉಪಾಸನೆಯಿಂದ ಸಾಧಿಸಿಕೊಂಡ ಲೋಕವು ಅಶಾಶ್ವತ ಎಂದು ಗೀತೆಯಲ್ಲಿ ಹೇಳಿದೆ—"ಆ ಬ್ರಹ್ಮ ಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ"—ಎಂದು. ಬ್ರಹ್ಮಲೋಕ ಸಮೇತ ಎಲ್ಲಾ ಲೋಕಗಳೂ ಪುನರ್ಜನ್ಮವನ್ನೇ ಕೊಡುವುವು. ಆದ್ದರಿಂದ ಮುಕ್ತಿಯಾಗಬೇಕಾದರೆ ಜ್ಞಾನವನ್ನೇ ಹೊಂದಬೇಕು.

ಊರ್ಧ್ವಮೂಲೋಽಧಃಶಾಖಃ ಏಷೋಽಶ್ವತ್ಥಃಸನಾತನಃ |
ಛಂದಾಂಸಿಯಸ್ಯಪರ್ಣಾನಿ ಯಸ್ತಂವೇದ ಸವೇದವಿತ್ ||

ಸಂಸಾರವೆಂಬ ಈ ಅಶ್ವತ್ಥವೃಕ್ಷಕ್ಕೆ ಆತ್ಮಸ್ವರೂಪ ಅಜ್ಞಾನವೇ ಬೀಜ. ದೇಹಾತ್ಮ ಬುದ್ಧಿಯೇ ಅಂಕುರ, ರಾಗ (ಕಾಮ) ಚಿಗುರು, ಕರ್ಮವೇ ನೀರು, ಶರೀರವೇ ಸ್ಕಂಧ (ಮರದ ಕಾಂಡ), ಪಂಚಪ್ರಾಣಗಳೇ ಶಾಖೆಗಳು—ಸ್ಕಂಧದಿಂದ ಹೊರಡುವ ಶಾಖೆಗಳು, ಇಂದ್ರಿಯಗಳ ಸಮುದಾಯವೇ ಅಗ್ರಗಳು; ಶಬ್ದ ಸ್ಪರ್ಶರೂಪರಸಗಂಧಗಳೆಂಬ ವಿಷಯಗಳೇ ಹೂಗಳು, ಸುಖ—ದುಃಖಗಳೇ ಹಣ್ಣುಗಳು, ಇವು ನಾನಾ ಕರ್ಮಗಳಿಂದ ಬರುವುವು; ಇದರಲ್ಲಿ ಕುಳಿತು ಈ ಹಣ್ಣುಗಳನ್ನು ತಿನ್ನುವ ಪಕ್ಷಿಯು ಜೀವಾತ್ಮನು. ಇದನ್ನು ವಿವೇಕಚೂಡಾಮಣಿಯಲ್ಲಿ ವಿವರಿಸಲಾಗಿದೆ.

ಈ ಸಂಸಾರವೃಕ್ಷಕ್ಕೆ ಮೇಲೆ ಬೇರು ಇರುವುದು. ಕಾಲಕ್ಕೂ ಸೂಕ್ಷ್ಮ ಮತ್ತು ಜಗತ್ತಿಗೆ ಮೂಲಕಾರಣ, ಮತ್ತು ನಿತ್ಯ. ಅಜ್ಞಾತವಾದ ಪ್ರತ್ಯಗಾತ್ಮನೇ ಮೂಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇದು ಎಲ್ಲದಕ್ಕೂ ದೊಡ್ಡದು. ನಿರತಿಶಯ ಮಹತ್ವವುಳ್ಳದ್ದು ಪರಬ್ರಹ್ಮ. ಅವ್ಯಕ್ತ-ಅವ್ಯಾಕೃತವೆಂಬ ಮಾಯಾಶಕ್ತಿಯುಕ್ತವಾಗಿದ್ದು ಸೃಷ್ಟಿಗೆ ಮೂಲವಾಗುವುದು. ಈ ವೃಕ್ಷಕ್ಕೆ ಅಶ್ವತ್ಥ ಎಂದು ಹೆಸರು. ಏಕೆಂದರೆ—"ನ ಶ್ವೋಽಪಿತಿಷ್ಠತೀತಿ ಅಶ್ವತ್ಥಃ"—ಅಂದರೆ—ಇದು ನಾಳೆ ಇರುವುದಿಲ್ಲ. ಈ ಅಶ್ವತ್ಥ ವೃಕ್ಷವು ಕ್ಷಣ ಕ್ಷಣಕ್ಕೂ ಬದಲಾಯಿಸಿ, ನಾಶವಾಗುವುದು. ಸಂಸಾರ ಮಾಯೆಯು ಅನಾದಿಕಾಲದಿಂದ ಬಂದಿರುವುದರಿಂದ, ನಾಶವಾಗದಂತೆ ಇರುವುದು. ಮಹತ್, ಅಹಂಕಾರ, ತನ್ಮಾತ್ರೆಗಳು, ಕೆಳಗಿರುವ ಶಾಖೆಗಳುಳ್ಳದ್ದು ಈ ವೃಕ್ಷ, ವೇದಗಳೇ ಎಲೆಗಳು, ಈ ಸಂಸಾರ ವೃಕ್ಷವನ್ನು ರಕ್ಷಿಸುವುದಕ್ಕೆ ಅನುಕೂಲವಾದ್ದರಿಂದ ಪರ್ಣಗಳೆಂದು ಉಕ್ತವಾಗಿದೆ. ಈ ಸಂಸಾರವೃಕ್ಷವನ್ನು ಸಮೂಲವಾಗಿ ಯಾರು ತಿಳಿಯುವರೋ ಅವರೇ ವೇದವನ್ನು ಅರ್ಥತಃ ತಿಳಿದವರೆಂದು ಗೀತಾರ್ಥವು—ಅಂದರೆ ಸಂಸಾರಕ್ಕೆ ಪರಮ ಮೂಲಪರಬ್ರಹ್ಮ, ಅದೊಂದನ್ನು ತಿಳಿದರೆ, ಅವನು ವೇದದ ಪರಮತಾತ್ಪರ್ಯವಿರುವ ತತ್ತ್ವವನ್ನು ತಿಳಿದಂತಾಗುವುದೆಂದರ್ಥ.

ಈ ಸಂಸಾರ ವೃಕ್ಷಕ್ಕೆ ನಿಜವಾದ ಸ್ವರೂಪ ಸತ್ಯತ್ವವಿಲ್ಲ. ಪದೇ ಪದೇ ಹುಟ್ಟುತ್ತಾ ನಾಶವಾಗುವುದಕ್ಕೆ ಪರಮಾರ್ಥ ಸ್ವರೂಪವಿಲ್ಲ. ಬುಡ ಯಾವುದು ಕೊನೆ ಯಾವುದು, ಎಲ್ಲಿಗೆ ನಿಲ್ಲುತ್ತದೆಂಬುದು ವಿಚಾರಹೀನರಿಗೆ ಗೊತ್ತಾಗುವುದಿಲ್ಲ. ಹಾಗೆ ವಿದುರಾಶ್ವತ್ಥದಂತೆ ರೂಢಮೂಲವಾಗಿದೆ. ಆದರೂ ಕೆಲವು ಯೋಗಿಗಳು ಸರ್ವಸಂಗ ಸನ್ಯಾಸ ಮಾಡಿ, ಜ್ಞಾನಪೂರ್ವಕ ದೃಢವಾದ ಅಸಂಗಶಸ್ತ್ರದಿಂದ ಮೂಲಾಜ್ಞಾನ ಸಮೇತ ಕತ್ತರಿಸಿ, ಪರಮಮೂಲವಾದ ವಿಷ್ಣುವಿನ ಪದವಿಯನ್ನು ಹುಡುಕಿ ಸೇರುವರು.

ನರೂಪಮಸ್ಯೇಹ ತಥೋಪಲಭ್ಯತೇ ನಾಂತೋನಚಾದಿಃ ನ ಚ ಸಂಪ್ರತಿಷ್ಠಾ ।
ತತಃ ಪರಂ ತತ್ ಪರಿಮಾರ್ಗಿತವ್ಯಂ ಯಸ್ಮಿನ್‌ಗತಾ ನ ನಿವರ್ತಂತಿ ಭೂಯಃ ॥
ತಮೇಚಾದ್ಯಂ ಪುರುಷಂ ಪ್ರಪದ್ಯೇ ಯತಃಪ್ರವೃತ್ತಿಃ ಪ್ರಸೃತಾ ಪುರಾಣೀ ॥

—ಎಂದು ಗೀತೆಯಲ್ಲಿ (೧೫—೩-೪) ಹೇಳಿದೆ. ಎಲ್ಲಿ ಹೋಗಿ ಸೇರುವರೋ ಅಲ್ಲಿಂದ ಪುನಃ ಸಂಸಾರಮಂಡಲಕ್ಕೆ ಬರುವುದಿಲ್ಲ, ಹುಟ್ಟುವುದಿಲ್ಲ. ಅವನೇ ಆದಿಪುರುಷ. ಅವನಿಂದ ಜಗತ್ತಿನ ಪ್ರವೃತ್ತಿಯು ಉಂಟಾದದ್ದು. ಅದೇ ಪರಂಜ್ಯೋತಿ, ಸ್ವಯಂ ಪ್ರಕಾಶವಸ್ತು. ಅದನ್ನು ಸೂರ್ಯ ಚಂದ್ರರೂ, ಅಗ್ನಿ—ಈ ಯಾವ ಜ್ಯೋತಿಯೂ ಬೆಳಗಲಾರದು. ಯಾವುದರಲ್ಲಿ ಸೇರಿಕೊಂಡ ಜನರು ವಾಪಸ್ಸು ಬರುವುದಿಲ್ಲವೋ ಅದೇ ಪರಮಾತ್ಮ ಸ್ಥಾನ, ಶಾಶ್ವತ ಸ್ಥಾನತೆಗೀ-೧೫,= ೬, (४,)...

ಜೀವೇಶ್ವರ ಭೇದಜ್ಞಾನದ ಉಪಯೋಗ

ಜೀವೇಶ್ವರ ಭೇದಬುದ್ಧಿಯಿರುವಾಗಲೇ ಅಜ್ಞಾನಿಗಳು ಕರ್ಮಾನುಷ್ಠಾನಮಾಡಿ, ಅದರಿಂದ ಈಶ್ವರಾರ್ಪಣಮಾಡಿ ಪ್ರಸನ್ನಗೊಳಿಸಬೇಕು-"**ಸ್ವಕರ್ಮಣಾ ತಮಭ್ಯರ್ಚ್ಯ**

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿದ್ಧಿಂ ವಿದಂತಿ ಮಾನವಃ"–ತನಗೆ ಹೇಳಿದ ವರ್ಣಾಶ್ರಮ ಧರ್ಮವನ್ನು ಯಾವ ಫಲವನ್ನೂ ಅಪೇಕ್ಷಿಸದೆ ಅನುಷ್ಠಾನ ಮಾಡುತ್ತ, ಅದರಿಂದ ಚಿತ್ತ ಶುದ್ಧಿಯನ್ನು ಹೊಂದಿ ಪರಮವಿರಕ್ತನಾಗಿ ಕ್ರಮೇಣ ತತ್ವಜ್ಞಾನವನ್ನು ಹೊಂದುವನು. ಅದರಿಂದ ಮುಕ್ತನಾಗುವನು. ಸಂಧ್ಯಾನುಷ್ಠಾನ, ಜಪ, ಪೂಜೆ, ಅಗ್ನಿಹೋತ್ರ, ವೇದಾಧ್ಯಯನ, ಮುಂತಾದ ವಿಹಿತಕರ್ಮಗಳಿಂದ ಭಗವಂತನನ್ನು ಆರಾಧಿಸಲು ಈಶ್ವರ ಸ್ವರೂಪವನ್ನು ತಿಳಿಯಬೇಕು. ಅದರಂತೆಯೇ ಧ್ಯಾನವನ್ನು ಮಾಡುವುದಕ್ಕೂ ಈಶ್ವರನ ಸ್ವರೂಪವನ್ನು ತಿಳಿಯಬೇಕು.

ಭಗವದರ್ಪಣೆಯನ್ನು ಗೀತೆಯು ಬೋಧಿಸಿದೆ—

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿದದಾಸಿ ಯತ್ ।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವಮದರ್ಪಣಮ್ ॥

ಯಾವುದೇ ಒಂದು ಶಾಸ್ತ್ರೋಕ್ತವಾದ ಕರ್ಮವನ್ನಾಗಲಿ, ಹೋಮವನ್ನಾಗಲೀ, ತಪಸ್ಸನ್ನಾಗಲೀ ಮಾಡಿದರೆ, ಅದನ್ನು ನೀನು ನನಗೆ ಅರ್ಪಣೆಮಾಡು ; ಭಗವಂತನ ಪ್ರೀತಿಗಾಗಿ ಮಾಡು ಎಂದು ಹೇಳಿದೆ.

ಈಶ್ವರನೊಡನೆ ಏಕತ್ವಬುದ್ಧಿಯಿಂದಾಗಲೀ, ಭಿನ್ನತ್ವಬುದ್ಧಿಯಿಂದಾಗಲಿ, ಯೋಗ್ಯತಾನುಸಾರವಾಗಿ ಉಪಾಸನೆಗಳನ್ನು ಮಾಡಬಹುದು–ಎಂದು ಗೀತೆಯು ಸ್ಪಷ್ಟಪಡಿಸುತ್ತದೆ.

ಜ್ಞಾನಯಜ್ಞೇನ ಚಾಪ್ಯನ್ಯೇ ಯಜನ್ತೋ ಮಾಮುಪಾಸತೇ ।
ಏಕತ್ವೇನ ಪೃಥಕ್ತ್ವೇನ ಬಹುಧಾ ವಿಶ್ವತೋ ಮುಖಮ್ ॥

ಗೀತೆಯಲ್ಲಿ –"ಏಕಮೇವ ಪರಂ ಬ್ರಹ್ಮ"–ಎಂಬ ಪರಮಾರ್ಥದರ್ಶರೂಪವಾದ ಜ್ಞಾನವು ಯಾವುದೋ ಅದೇ ಭಗವಂತನ ವಿಷಯದಲ್ಲಿ ತಿಳಿಯುವ ಯಜ್ಞ. ಕೆಲವರು ಏಕರೂಪದಿಂದ ಬ್ರಹ್ಮೋಪಾಸನೆಯನ್ನು ಮಾಡುವಂತೆ, ಪೃಥಕ್ತ್ವೇನ, ಆದಿತ್ಯ, ಚಂದ್ರ, ಮುಂತಾದ ರೂಪದಲ್ಲಿ ಆ ವಿಷ್ಣುವೇ ಇರುವನೆಂದು ಕೆಲವರು ಉಪಾಸನೆ ಮಾಡುತ್ತಾರೆ. ಇನ್ನು ಕೆಲವರು ಆ ಭಗವಂತನೇ ವಿಶ್ವರೂಪವೆಂದು ತಿಳಿದು ಉಪಾಸನೆ ಮಾಡುತ್ತಾರೆ.

ಅ ೯–೧೩.ರಲ್ಲಿ ದೈವೀಪ್ರಕೃತಿಯನ್ನು ಅವಲಂಬಿಸಿದರು. ಅಂದರೆ ಶಮ, ದಮ, ಶ್ರದ್ಧಾ, ದಯಾ, ಮೈತ್ರೀ, ಮುದಿತಾ–ಎಂಬ ಸ್ವಭಾವವುಳ್ಳವರು ಕ್ಷುದ್ರಮನಸ್ಸಿನಲ್ಲಿದ್ದ ಮಹಾತ್ಮರು ಬೇರೆ ಕಡೆ ಚಿತ್ತವನ್ನು ಇಡದೆ ಭಗವಂತನನ್ನು ಧ್ಯಾನಿಸುತ್ತಾರೆ ಎಂದು ಹೇಳಲಾಗಿದೆ. ಹೇಗೆಂದರೆ–

ಸತತಂ ಕೀರ್ತಿಯಂತೋ ಮಾಂ ಯತಂತಶ್ಚ ದೃಢವ್ರತಾಃ ।
ನಮಸ್ಯಂತಶ್ಚ ಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ ॥

ಅ-೬–೧೪

Sri Vidyabharathi Book Centre, Sringeri

CC-O. In Public Domain. Digitized by eGangotri

ಸರ್ವದಾ ಪರಮಾತ್ಮ ಸ್ವರೂಪನಾದ ಶ್ರೀಕೃಷ್ಣನ ನಾಮಸಂಕೀರ್ತನ ಮಾಡುತ್ತಾ ನಮಸ್ಕಾರಗಳನ್ನು ಮಾಡುತ್ತಾ ದೃಢವ್ರತರಾಗಿದ್ದು ಧ್ಯಾನಿಸುವರು, ಸೇವಿಸುವರು. ಅವರಲ್ಲೇ ಹಿಂದೆ ಹೇಳಿದಂತೆ ಏಕತ್ವೇನ ಪೃಥಕ್ತ್ವೇನ ಏಕರೂಪವಾಗಿಯೂ-ಭಿನ್ನರೂಪ ವಾಗಿಯೂ, ವಿಶ್ವರೂಪನಾಗಿಯೂ ಯಾವುದ್ದಾರೊಂದು ರೂಪವನ್ನು ಉಪಾಸನೆ ಮಾಡುವರು. "ಲೋಕೋಭಿನ್ನರುಚಿಃ" ಎಂಬಂತೆ ಈ ಜಗತ್ತಿನಲ್ಲಿ ಪೂರ್ವಜನ್ಮದ ವಾಸನಾನುಸಾರವಾಗಿ ಉಪಾಸನೆಮಾಡುತ್ತಾರೆ.

ನಾನಾ ರೀತಿಯಲ್ಲಿ ಪರಮೇಶ್ವರನನ್ನು ಉಪಾಸನೆ ಮಾಡಿದರೂ ಭಗವಂತನನ್ನೇ ಉಪಾಸನೆ ಮಾಡಿದಂತೆ ಆಗುವುದು. ಅದು ಹೇಗೆಂದರೆ, ೧೬, ೧೭, ೧೮, ೧೯ರ ವರೆಗಿನ ಶ್ಲೋಕಗಳಲ್ಲಿ ಯಜ್ಞ, ಶ್ರೌತಸ್ಮಾರ್ತ ಕರ್ಮಗಳು, ಋಗ್ವೇದಾದಿಮಂತ್ರಗಳು, ಹವ್ಯಕವ್ಯಗಳು, ಮುಂತಾದ ರೂಪದಲ್ಲೂ, ಆದಿತ್ಯಾದಿ ದೇವತಾರೂಪದಲ್ಲೂ ಪರ ಮಾತ್ಮನೇ ಇರುವನೆಂದು ನಿಜಾರ್ಥ. ಆದುದರಿಂದ ಯಾವ ರೀತಿಯಲ್ಲಿ ಪೂಜಿಸಿದರೂ ವಿಷ್ಣುವನ್ನೇ ಪೂಜಿಸಿದಂತಾಗುವುದು. ಈಶ್ವರನ ಸ್ವರೂಪವನ್ನು ತಿಳಿದವರು ಯಾವ ಫಲವನ್ನೂ ಅಪೇಕ್ಷಿಸದೇ ಪೂಜಿಸುವರು, ಸೇವಿಸುವರು. ಹಾಗೆಯೇ ನಿಷ್ಕಾಮರಾದ (ವಿರಕ್ತರಾದ) ಸಮ್ಯಗ್ದರ್ಶಿಗಳು "ಏಕಮೇವ ಪರಂ ಬ್ರಹ್ಮತತ್ತ್ವಂ"-ಎಂದು ತಿಳಿದವರು ಮಾತ್ರ ಅನನ್ಯಚಿಂತೆಯಿಂದ ಭಜಿಸುವರೆಂದು ಉಪದೇಶಿಸಿದ್ದಾನೆ.

ಅನನ್ಯಾಶ್ಚಿಂತಯಂತೋ ಮಾಂ ಯೇಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ ॥

ಅ-೯-೨೨

ನಾರಾಯಣನನ್ನು ಬಿಟ್ಟು ಬೇರೊಬ್ಬ ದೇವನನ್ನು ಚಿಂತಿಸದೇ ಏಕತ್ವೇನ ಚಿಂತಿಸುವ ಯತಿಗಳ ಯೋಗಕ್ಷೇಮವನ್ನು ಭಗವಂತನೇ ವಹಿಸುವನೆಂದು ಹೇಳಿದೆ. ಇಲ್ಲದ್ದನ್ನು ಒದಗಿಸುವುದೇ ಯೋಗ. ಕ್ಷೇಮ ಎಂದರೆ ಇರುವುದನ್ನು ರಕ್ಷಿಸುವುದು. ಇದರಿಂದ ತನ್ನನ್ನು ಮರೆತು ಸತತವಾಗಿ ನಾರಾಯಣನನ್ನೇ ಚಿಂತಿಸುವ ಯೋಗಿಗಳಿಗೆ ಅಶನ, ವಸನ, ವಸತಿ, ವಿಚಾರವೆಲ್ಲವನ್ನೂ ಭಗವಂತನೇ ವಹಿಸುತ್ತಾನೆಂದು ಹೇಳಿರುವುದರಿಂದ ಅಶನವಸನಾದಿಗಳಿಗೆ ಎಂದಿಗೂ ಚ್ಯುತಿಯಿರದೆಂದು ನಂಬಬಹುದು. "ಜ್ಞಾನೀತ್ವಾತ್ಮೈವಮೇ ಮತಮ್"-ಎಂದಂತೆ, ಇಂತಹ ಜ್ಞಾನಿಭಕ್ತರು ಪರಮಾತ್ಮನ ಸ್ವರೂಪರು. ಅತ್ಯಂತ ಪ್ರಿಯಭಕ್ತರು. ಇಂತಹ ಉಪಾಸಕರಿಗೆ ಬರುವ ಫಲ ಜ್ಞಾನ, ಮುಕ್ತಿ.

ಭಕ್ತರು ನಾಲ್ಕು ವಿಧ

ಚತುರ್ವಿಧಾ ಭಜಂತೇ ಮಾಂ ನರಾಃ ಸುಕೃತಿನೋಽರ್ಜುನ ।
ಆರ್ತೋಜಿಜ್ಞಾಸುರರ್ಥಾರ್ಥೀ ಜ್ಞಾನೀಚ ಭರತರ್ಷಭ ॥

ಕಷ್ಟಕ್ಕೊಳಗಾದವನು, ಆರ್ತ, ತತ್ವಜಿಜ್ಞಾಸು, ಸಂಪತ್ತು-ಪಶುಪುತ್ರಾದಿಗಳನ್ನು ಅಪೇಕ್ಷಿಸುವವನು ಅರ್ಥಾರ್ಥೀ, ತತ್ವಜ್ಞಾನಿಯೇ ಜ್ಞಾನಿ, ಈ ನಾಲ್ಕು ಜನ ಪುಣ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ವಂತರು ಭಗವಂತನನ್ನು ಭಜಿಸುವರು. ಗಜೇಂದ್ರ ಮೋಕ್ಷದಲ್ಲಿ ಹೇಳಿದಂತೆ ಆಪತ್ತಿಗೆ ಒಳಗಾದವನು ಗಜೇಂದ್ರ. ಮೊಸಳೆ ಬಾಯಿಗೆ ಕಾಲು ಸಿಕ್ಕಿಕೊಂಡು ಒದ್ದಾಡಿದವನು. ಭಗವಂತನನ್ನು ಸ್ತೋತ್ರ ಮಾಡಿದುದರಿಂದ ಕಷ್ಟಪರಿಹಾರ ಮಾಡಿಕೊಂಡನು. ಇವನಂತೆ, ದ್ರೌಪದಿ, ಕುಂತಿಯೂ ಸಹ ಆರ್ತಭಕ್ತರು. ಜೂಜಾಟದ ಸಂದರ್ಭದಲ್ಲಿ, ದುಶ್ಶಾಸನನು ದ್ರೌಪದಿಯನ್ನು ಎಳೆದು ತಂದು ಸಭಾಮಧ್ಯದಲ್ಲಿ ಸೀರೆ ಎಳೆಯುವಾಗ ಶ್ರೀಕೃಷ್ಣನನ್ನು ಮೊರೆಹೊಕ್ಕಳು. ಭಗವಂತನು, ಎಳೆದ ಹಾಗೂ ಗಂಗಾಪ್ರವಾಹ ದಂತೆ ಸೀರೆಯು ಧಾರೆಯಾಗಿ ಬರುವಂತೆ ಮಾಡಿ ದ್ರೌಪದಿಯು ಮಾನಭಂಗಕ್ಕೆ ಒಳ ಗಾಗದಂತೆ ರಕ್ಷಿಸಿದನು. ಅರಗಿನ ಮನೆಗೆ ಬೆಂಕಿಯಿಟ್ಟಾಗ ಕುಂತಿಯನ್ನೂ ಪಂಚ ಪಾಂಡವರನ್ನೂ ರಕ್ಷಿಸಿದನು. ಹೀಗೆಯೇ ಪಂಚಪಾಂಡವರ ಶತ್ರುಗಳನ್ನು ನಾಶ ಗೊಳಿಸಲು ಅನುವಾಗಿ ಪ್ರೇರೇಪಿಸುತ್ತಾ ಕೌರವ ನಾಶದಿಂದ ಬಂದ ಧಾರ್ಮಿಕ ಕೀರ್ತಿ ಯೊಂದಿಗೆ ಪಾಂಡವರನ್ನು ಬದುಕಿಸಿದನು. ಈ ರೀತಿಯ ಅನೇಕ ಆಪತ್ತುಗಳಿಂದ ಪಾರಾಗಲು ಶ್ರೀಕೃಷ್ಣನೇ ಕಾರಣವೆಂದು ಕುಂತಿಯು ಹೇಳುವಳು. ಸಂಪತ್ತನ್ನು ಅಪೇಕ್ಷಿಸುವ ಭಕ್ತನು ಅರ್ಥಾರ್ಥಿಯು. ಕುಚೇಲನು ಪರಮಭಕ್ತಿಯಿಂದ ಶ್ರೀಕೃಷ್ಣನಿಗೆ ಒಂದು ಮುಷ್ಟಿ-ಅವಲಕ್ಕಿಯನ್ನು ಕೊಟ್ಟು ತೃಪ್ತಿಪಡಿಸಿದ್ದಕ್ಕೆ, ಭಕ್ತವತ್ಸಲನಾದ ಶ್ರೀಕೃಷ್ಣನು ಕುಚೇಲನ ಮನೆಯು ಸಂಪತ್ತಿನಿಂದ ವೈಕುಂಠಲೋಕದಂತೆ ವಿರಾಜಿಸು ವಂತೆ ಮಾಡಿದನು. ಅರ್ಜುನನಂತೆ ಉದ್ಧವನು ತತ್ವಜಿಜ್ಞಾಸು ಭಕ್ತ, ಜ್ಞಾನಿ ಭಕ್ತನು ಸರ್ವಶ್ರೇಷ್ಠನೆಂದೂ, ಪರಮಾತ್ಮನೇ ಎಂದೂ ಭಗವಂತನು ಹೇಳಿದ್ದಾನೆ. **ಜ್ಞಾನೀ ತ್ವಾತ್ಮೈವ ಮೇ ಮತಮ್**-ವಸಿಷ್ಠ, ವಾಮದೇವ, ಶುಕ, ನಾರದ, ಜನಕ, ಯಾಜ್ಞವಲ್ಕ್ಯ ಮುಂತಾದವರು.

ಪರಬ್ರಹ್ಮ ಸ್ವರೂಪ :

ಪರಬ್ರಹ್ಮವನ್ನು ಗೀತೆಯಲ್ಲಿ ಅಲ್ಲಲ್ಲಿ ಹೇಳಿರುವುದುಂಟು. ಅದು ನಿರ್ಗುಣ, ನಿರಾಕಾರ, ಸಚ್ಚಿದಾನಂದರೂಪ.

ಪರಂ ಬ್ರಹ್ಮ ಪರಂಧಾಮ ಪವಿತ್ರಂ ಪರಮಂ ಭವಾನ್ ।
ಪುರುಷಂ ಶಾಶ್ವತಂ ದಿವ್ಯಮಾದಿದೇವಮಜಂ ವಿಭುಮ್ ॥

ಯೇತ್ವಕ್ಷರಮನಿರ್ದೇಶ್ಯಮವ್ಯಕ್ತಂ ಪರ್ಯುಪಾಸತೇ ।
ಸರ್ವತ್ರಗಮಚಿಂತ್ಯಂಚ ಕೂಟಸ್ಥಮಚಲಂ ಧ್ರುವಮ್ ॥

(ಅ ೧೨-೩)

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ನಿರ್ಗುಣ ಬ್ರಹ್ಮವನ್ನೇ ಪರಮಾತ್ಮ, ಪರಮಪುರುಷ, ಪುರುಷೋತ್ತಮ ಇತ್ಯಾದಿ ಶಬ್ದಗಳಿಂದಲೂ ಗೀತೆಯಲ್ಲಿ ಕರೆಯಲಾಗಿದೆ—

ಉಪದ್ರಷ್ಟಾಽನುಮಂತಾಚ ಭರ್ತಾ ಭೋಕ್ತಾ ಮಹೇಶ್ವರಃ ।
ಪರಮಾತ್ಮೇತಿ ಚಾಪ್ಯುಕ್ತೋ ದೇಹೇಽಸ್ಮಿನ್ಮಧುಸೂದನ ॥

ಅನಾದಿತ್ವಾನ್ನಿರ್ಗುಣತ್ವಾತ್ ಪರಮಾತ್ಮಾಽಯಮವ್ಯಯಃ ।
ಶರೀರಸ್ಥೋಽಪಿ ಕೌಂತೇಯ ನಕರೋತಿ ನ ಲಿಪ್ಯತೇ ॥

ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥

ನಿರ್ಗುಣ— ಏನೊಂದೂ ಗುಣವಿಲ್ಲದ್ದು. ಗುಣಗಳೆಂದರೆ—ಸತ್ವರಜಸ್ಸು ತಮೋಗುಣಗಳು ಈ ಮೂರು ಗುಣಗಳೂ ಒಂದೇ ಸಮನಾಗಿದ್ದ ಒಂದು ತತ್ತ್ವವು ಮೂರು ದಾರಗಳಿಂದ ಹೆಣೆದ ಹಗ್ಗದಂತಿರುವುದು. ಇದು ಪ್ರಪಂಚಕ್ಕೆ ಸೇರಿದ ಮೂಲ ಶಕ್ತಿ. ಇದರ ಪರಿಣಾಮವೇ ಸುಖ ದುಃಖ ಮೋಹಗಳು. ಜೀವಜಂತುಗಳಿಗೆ, ಆಗುತ್ತಿರುವವು. ಈ ಮೂಲ ಶಕ್ತಿಯನ್ನು ಮೀರಿದ ತತ್ತ್ವವೇ ಪರಬ್ರಹ್ಮ, ಅವ್ಯಕ್ತ, ಅಚಿಂತ್ಯ· ವಾಚಾಮಗೋಚರ, ನಿರ್ವಿಕಾರ, ಸರ್ವವ್ಯಾಪಕ. ಇದಕ್ಕಿಂತಲೂ ಉತ್ಕೃಷ್ಟವಾದುದು ಮತ್ತೊಂದಿಲ್ಲ—"ಪುರುಷಾನ್ನ ಪರಂ ಕಿಂಚಿತ್ ಸಾ ಕಾಷ್ಠಾ ಸಾ ಪರಾಗತಿಃ" ಉಪನಿಷತ್ತಿನಲ್ಲೂ—"ಪರಂ ಚಾಪರಂ ಚ ಬ್ರಹ್ಮ ಯದೋಂಕಾರಃ"—ಎಂದು ಶುದ್ಧ ಬ್ರಹ್ಮವನ್ನೇ ಪರಬ್ರಹ್ಮವೆಂದು ಹೇಳಿದೆ. ಆದರೆ ನಿರ್ಗುಣವನ್ನು ನೇರವಾಗಿ ಉಪಾಸನೆ ಮಾಡುವುದು ಶಕ್ಯವಿಲ್ಲ. ಅದಕ್ಕಾಗಿ ಸಗುಣ, ಸೋಪಾಧಿಕ, ಸರ್ವಜ್ಞ, ಸರ್ವಶಕ್ತಿಯುಕ್ತವಾದ ಅಪರ ಬ್ರಹ್ಮವನ್ನೂ ಸಗುಣ ಈಶ್ವರ ಎಂದು ಹೇಳುತ್ತಾ, ಈ ಮೂಲಕವಾಗಿ ಆ ತತ್ತ್ವವನ್ನು ಭಗವಂತನು ಬೋಧಿಸಿರುವನು. ಈತನೇ ಅಂತರ್ಯಾಮಿ. ಒಂದು ವ್ಯವಸ್ಥಿತವಾದ ಪ್ರವೃತ್ತಿಯನ್ನುಂಟು ಮಾಡಲು ಪ್ರೇರಕವಾಗಿರುವನು. ಆಧಿದೈವಿಕ, ಆಧಿಭೌತಿಕ, ಆಧ್ಯಾತ್ಮಿಕ ಎಂದು ಹೇಳಲಾಗುವ ಎಲ್ಲಾ ಸ್ಥಳಗಳಲ್ಲಿಯೂ ಒಳಗೆ ಇದ್ದು ನಿಯಮಿಸುವನು. ಆದ್ದರಿಂದ ಜಗತ್ತಿನ ನಿಯಾಮಕನೂ ಇವನೇ, ಬೇರೆ ಯಾರೂ ಇಲ್ಲ.

ಸೂರ್ಯ, ಚಂದ್ರ, ಅಗ್ನಿ, ನಕ್ಷತ್ರ, ವಾಯು ಮುಂತಾದ ಆಧಿದೈವಿಕ ವಸ್ತುಗಳಲ್ಲಿ ಅಂತರ್ಯಾಮಿ ಇರುವನು. ಪೃಥಿವೀ, ಜಲ, ತೇಜಸ್ಸು, ವಾಯು, ಆಕಾಶವೆಂಬ ಪಂಚಮಹಾಭೂತಗಳಲ್ಲೂ, ಆಧ್ಯಾತ್ಮಿಕವಾದ ಶರೀರದ ಒಳಗಿನ ಚಕ್ಷು, ಶ್ರೋತ್ರ, ಜಿಹ್ವಾ, ತ್ವಕ್, ಘ್ರಾಣವೆಂಬ ಜ್ಞಾನೇಂದ್ರಿಯ, ವಾಕ್, ಪಾಣಿ, ಪಾದ ಪಾಯು ಉಪಸ್ಥವೆಂಬ ಕರ್ಮೇಂದ್ರಿಯಗಳಲ್ಲೂ ಈತನು ಇದ್ದು ನಿಯಮಿತವಾದ ಕಾರ್ಯವನ್ನು ಮಾಡಿಸುವನು.

Sri Vidyabharathi Book Centre, Sringeri

CC-O. In Public Domain. Digitized by eGangotri

(5)

ಹೀಗೆಯೇ ಆಧಿದೈವಿಕರೆಂಬ ಬ್ರಹ್ಮಾದಿದೇವತೆಗಳಲ್ಲೂ ಮನುಷ್ಯರಲ್ಲೂ (ಸ್ಥಾವರ ಪ್ರಾಣಿಗಳಲ್ಲೂ) ಕ್ರಿಮಿಕೀಟಾದಿಗಳಲ್ಲೂ ನೆಲಸಿರುವನು. (ಇದರ ವಿಸ್ತಾರವಾದ ವಿವರಣೆಯು ಅಂತರ್ಯಾಮಿ ಬ್ರಾಹ್ಮಣದಲ್ಲಿದೆ). ಈಶ್ವರನನ್ನು "ಸೋऽಹಂ"— ಎಂದು ಉಪಾಸನೆ ಮಾಡುವವರಿಗೂ, ಭೇದಬುದ್ಧಿಯಿಂದ ಸೂರ್ಯ ಚಂದ್ರಾದಿ ದೇವತಾಭೇದದಿಂದ ಉಪಾಸನೆ ಮಾಡುವವರಿಗೂ ಈಶ್ವರನೇ ಜ್ಞಾನವನ್ನು ಕೊಟ್ಟು ಉದ್ಧರಿಸುವನು. "**ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರ ಸಾಗರಾತ್**"—ಎಂದು ಅ. ೧೨ ರಲ್ಲಿ ಉಪದೇಶಿಸಿರುವನು. ಈಶ್ವರನೇ ಕರ್ಮಯೋಗಿಗಳಿಗೂ ಉಪಾಸಕರಿಗೂ ಇಷ್ಟಾರ್ಥವನ್ನು ಕೊಡುವನು. ಈಶ್ವರನ ಮೂರ್ತಿಯನ್ನು ಆರಾಧಿಸುವವರಿಗೆ ಸಂಸಾರಮಂಡಲದಲ್ಲಿ ಸಿಗುವ ಸಂಪತ್ತು, ಅದರ ಭೋಗವನ್ನು ಕೊಡುವನು. "**ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಂ ಇಚ್ಛತಿ । ತಸ್ಯ ತಸ್ಯಾಚಲಾಂ ಶ್ರದ್ಧಾಂ ತಾಮೇವ ವಿದಧಾಮ್ಯಹಂ ॥ ಸ ತಯಾ ಶ್ರದ್ಧಯಾ ಯುಕ್ತಃ ತಸ್ಯಾರಾಧನಮೀಹತೇ । ಲಭತೇ ಚ ತತಃ ಕಾಮಾನ್ ಮಯೈವ ವಿಹಿತಾನ್ ಹಿತಾನ್ ॥**" ಎಂದು ಉಪದೇಶಿಸಿರುವನು. ತಾನೇ ಲಯ ಸ್ಥಾನವೆಂದು ಹೇಳಿರುವನು—

ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ ॥

ನನ್ನನ್ನು ಬಿಟ್ಟು ಬೇರೆ ಯಾವುದೂ ಜಗತ್ತಿಗೆ ಕಾರಣವಲ್ಲ; ನಾನೇ ಕಾರಣವೆಂದು ಸ್ಪಷ್ಟವಾಗಿ ಹೇಳಿದ್ದರಿಂದ ಜೀವರಾಗಲೀ, ಪರಮಾಣುಗಳಾಗಲಿ, ಸ್ವತಂತ್ರ ಪ್ರಕೃತಿಯಾಗಲಿ, ಜಗತ್ತಿಗೆ ಕಾರಣವಲ್ಲವೆಂಬುದನ್ನು ಭಗವಂತನು ಸ್ಪಷ್ಟವಾಗಿ ಉಪದೇಶಿಸಿದ್ದಾನೆ. "**ಪ್ರಕೃತಿಶ್ಚ ಪ್ರತಿಜ್ಞಾ ದೃಷ್ಟಾಂತಾನುಪರೋಧಾತ್**"—ಎಂದು ಬ್ರಹ್ಮಸೂತ್ರಕಾರರು ಬ್ರಹ್ಮವೇ ಉಪಾದಾನಕಾರಣವೆಂದು ಹಾಗೂ ನಿಮಿತ್ತ ಕಾರಣವೆಂದು ವೇದಾಂತ ಸಿದ್ಧಾಂತವನ್ನು ಪ್ರತಿಪಾದಿಸಿರುವುದನ್ನು ಇಲ್ಲಿ ಸ್ಮರಿಸಬಹುದು. ಕುಂಬಾರನಂತೆ ಕೇವಲ ನಿಮಿತ್ತಕಾರಣವಲ್ಲ; ಜಗತ್ತೆಲ್ಲವೂ ತನ್ನಲ್ಲಿ ನಿಂತಿವೆ; ಹೇಗೆ ದಾರದಲ್ಲಿ ಮಣಿಗಳು ಒಂದಕ್ಕೊಂದು ಸೇರಿಕೊಂಡು ನಿಂತಿರುತ್ತವೆಯೋ ಹಾಗೆ—"**ಮಯಿ ಸರ್ವಮಿದಂಸೂತ್ರೇಮಣಿಗಣಾ ಇವ**". ಪರಮಾತ್ಮನ ಸತ್ತಾಸ್ಫೂರ್ತಿಗಳಿಂದಲೇ ಈ ಜಗತ್ತು ಅಸ್ತಿತ್ವವನ್ನು ಹೊಂದಿ ತೋರುತ್ತಿರುವುದು.

ಇಂತಹ ಈಶ್ವರನು ತನ್ನ ಉಪಾಧಿಗಳಾದ ಪರಾಪರಾಪ್ರಕೃತಿ ಶಕ್ತಿಯುಳ್ಳವನಾಗಿದ್ದು, ಸಮಸ್ತ ಪ್ರಾಣಿಗಳನ್ನು ಯಂತ್ರಗಳ ಮೇಲೆ ಕೂರಿಸಿದ ಬೊಂಬೆಗಳನ್ನು ಸುತ್ತಿಸುವಂತೆ, ದೇಹವೆಂಬ ಪಂಜರದ ಯಂತ್ರಗಳ ಮೇಲೆ ಅಭಿಮಾನದಿಂದ ಹತ್ತಿ ಕುಳಿತಿರುವ ಜೀವರನ್ನು ಕರ್ಮಾನುಸಾರವಾಗಿ ಇಹಲೋಕ-ಪರಲೋಕಗಳಲ್ಲಿ ಸುತ್ತಿಸುತ್ತಾ ಇರುವನು. ಈಶ್ವರನು ಸಮಸ್ತ ಪ್ರಾಣಿಗಳ ಹೃದಯದಲ್ಲೇ ಇದ್ದು

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಯಾಶಕ್ತಿ ಮೂಲಕ ಇಹಪರಗಳಿಗೆ ಒಯ್ಯುತ್ತಾ ನಡೆಸುತ್ತಿರುವನೆಂದು ಭಾವಾರ್ಥವು—ಇದನ್ನೇ ಗೀತೆಯಲ್ಲಿ—

ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿಮಾಯಯಾ ॥

ಎಂದು ಉಪದೇಶಿಸಿರುವನು.

ಈಶ್ವರನ ಸ್ವರೂಪ

ಅಜ್ಞಾನ ದೆಸೆಯಲ್ಲಿ ಜೀವೇಶ್ವರಭೇದವನ್ನು ಒಪ್ಪಿದ್ದಾರೆ ಶಂಕರರು. ಇದನ್ನು ಉದಾಹರಿಸಿರುವರು—

ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ।
ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿಮಾಯಯಾ ॥

ಸಾಧಕನು ಈಶ್ವರನ ಸ್ವರೂಪವನ್ನು ಅವಶ್ಯ ತಿಳಿಯಬೇಕೆಂದು ಭಗವಂತನು ೭ನೇ ಅಧ್ಯಾಯದಲ್ಲಿ ಈಶ್ವರನ ಸ್ವರೂಪವನ್ನು ಹೇಳಿದ್ದಾನೆ. ಪರಾಪರಾ ಪ್ರಕೃತಿಯ ಮೂಲಕ ಜಗತ್ತಿನ ಸೃಷ್ಟಿ-ಸ್ಥಿತಿ ಲಯಗಳನ್ನು ಮಾಡುವ ಪರಬ್ರಹ್ಮನೇ ಈಶ್ವರ ಎಂದು ಹೇಳಲ್ಪಡುವುದು. ಮೂಲಭೂತವಾದ ಪರಬ್ರಹ್ಮನಿಗೂ ಅಪರಬ್ರಹ್ಮವೆಂಬ ಈಶ್ವರನಿಗೂ ಅತ್ಯಂತ ಭೇದವಿಲ್ಲ—

ಭೂಮಿರಾಪೋಽನಲೋ ವಾಯುಃ ಖಂ ಮನೋಬುದ್ಧಿರೇವಚ ।
ಅಹಂಕಾರ ಇತೀಯಂ ಮೇ ಭಿನ್ನಾ ಪ್ರಕೃತಿರಷ್ಟಧಾ ॥
ಅಪರೇಯಮಿತಸ್ತ್ವನ್ಯಾಂ ಪ್ರಕೃತಿಂ ವಿದ್ಧಿ ಮೇ ಪರಾಮ್ ।
ಜೀವಭೂತಾಂ ಮಹಾಬಾಹೋ ಯಯೇದಂಧಾರ್ಯತೇ ಜಗತ್ ॥

ಪಂಚಭೂತಗಳು, ಮನಸ್ಸು, ಬುದ್ಧಿ, ಅಹಂಕಾರ ಎಂದು ಮುಖ್ಯವಾಗಿ ಪರಿಣಾಮ ಹೊಂದುವ ಮೂಲಪ್ರಕೃತಿಯೇ ಅಪರಾಕೃತಿಯು. ಯಾವುದರಿಂದ ಜಗತ್ತು ಜೀವಂತ ವಾಗಿ ಧರಿಸಲ್ಪಟ್ಟಿದೆಯೋ ಆ ಪ್ರಕೃತಿಯು ಜೀವರೂಪವಾದದ್ದು, ಅಂದರೆ ಚೇತನ ರೂಪವಾದದ್ದು. ಈ ಎರಡು ಪ್ರಕೃತಿಗಳ ಮೂಲಕವೇ ಈಶ್ವರನು ಜಡಜೀವರಿಂದ ಕೂಡಿದ ಜಗತ್ತನ್ನು ಸೃಷ್ಟಿಸುವನು. ಈತನೇ ಈಶ್ವರ, ಸೃಷ್ಟಿಕರ್ತನು ಮತ್ತು ಮಣ್ಣು ಕುಡಿಕೆ-ಮಡಿಕೆ ಮುಂತಾದುವುಗಳಿಗೆ ಉಪಾದಾನಕಾರಣವಾಗುವಂತೆ, ಈತನೇ ಉಪಾದಾನ ಕಾರಣ. ಈ ಎರಡು ಪ್ರಕೃತಿಗಳು ದ್ವಾರ ಕಾರಣಗಳು.

ಏತದ್ಯೋನೀನಿ ಭೂತಾನಿ ಸರ್ವಾಣೀತ್ಯುಪಧಾರಯ ।
ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಳಯಸ್ತಥಾ ॥

ಈ ಎರಡು ಪ್ರಕೃತಿಗಳು ಯೋನಿ-ಉಪಾದಾನ ನಿಮಿತ್ತವಾಗಿದ್ದು ಈ ಮೂಲಕ ಸಮಸ್ತ ಚೇತನ—ಅಚೇತನಗಳೆಂಬ ಕಾರ್ಯಗಳು ಹುಟ್ಟಿಕೊಂಡಿವೆ. ನಾನು—

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಮಾತ್ಮನು. ಇದರಿಂದಲೇ ಜಗತ್ತಿಗೆ ಸೃಷ್ಟಿಕರ್ತ ಮತ್ತು ಉಪಾದಾನ ಎಂದೂ, ನಾನೇ ಸಂಹಾರಕರ್ತನೆಂದೂ ಆಗಿರುತ್ತೇನೆ—ಈ ರೀತಿ ಗೀತಾರ್ಥವು. ಇದರಿಂದ ಈಶ್ವರನ ಸ್ವರೂಪವು ಹೇಳಿದಂತೆ ಆಗುತ್ತದೆ.

ಗೀತೆಯಲ್ಲಿ ಬರುವ ಪರಬ್ರಹ್ಮ ಸ್ವರೂಪ—

ಪರಂ ಬ್ರಹ್ಮ ಪರಂಧಾಮು ಪವಿತ್ರಂ ಪರಮಂ ಭವಾನ್ ।
ಪುರುಷಂ ಶಾಶ್ವತಂ ದಿವ್ಯಂ ಆದಿ ದೇವಮುಜಮ್ ॥

(ಅ= ೧೦—ಶ್ಲೋ—೧೨)

"ಏತದ್ವೈ ಸತ್ಯಕಾಮ ಪರಂಚಾಪರಂ ಚ ಬ್ರಹ್ಮಯದೋಂಕಾರಃ"—
ಎಂಬುದಾಗಿ ಪ್ರಶ್ನೋಪನಿಷತ್ತು ತಿಳಿಸುತ್ತದೆ. ಇದರಲ್ಲಿ ಪರಬ್ರಹ್ಮ, ಅಪರಬ್ರಹ್ಮ ಎಂದು ಎರಡಾಗಿ ವ್ಯವಹೃತವಾಗಿರುವುದು.

ಪರಬ್ರಹ್ಮವೆಂದರೆ—

ಪರಿಪೂರ್ಣಮನಾದ್ಯಂತಮಪ್ರಮೇಯಮವಿಕ್ರಿಯಮ್ ।
ಏಕಮೇವಾದ್ವಿತೀಯಂ ಬ್ರಹ್ಮ ನೇಹ ನಾನಾಸ್ತಿಕಿಂಚನ ॥

ಸದ್ಘನಂ ಚಿದ್ಘನಂ ನಿತ್ಯಮಾನಂದಘನಮಕ್ರಿಯಮ್ ।
ಏಕಮೇವಾದ್ವಯಂ ಬ್ರಹ್ಮ ನೇಹ ನಾನಾಸ್ತಿಕಿಂಚನ ॥

ಪ್ರತ್ಯಗೇಕರಸಂ ಪೂರ್ಣಮನಂತಂ ಸರ್ವತೋಮುಖಮ್ ।
ಏಕಮೇವಾದ್ವಯಂ ಬ್ರಹ್ಮ ನೇಹ ನಾನಾಸ್ತಿಕಿಂಚನ ॥

ಅಹೇಯಮನುಪಾದೇಯಮನಾದೇಯಮನಾಶ್ರಯಮ್ ।
ಏಕಮೇವಾದ್ವಿತೀಯಂ ಬ್ರಹ್ಮ ನೇಹ ನಾನಾಸ್ತಿಕಿಂಚನ ॥

ನಿರ್ಗುಣಂ ನಿಷ್ಕಲಂ ಸೂಕ್ಷ್ಮಂ ನಿರ್ವಿಕಲ್ಪಂ ನಿರಂಜನಮ್ ।
ಏಕಮೇವಾದ್ವಿತೀಯಂ ಬ್ರಹ್ಮ ನೇಹ ನಾನಾಸ್ತಿಕಿಂಚನ ॥

ಅನಿರೂಪ್ಯ ಸ್ವರೂಪಂ ಯನ್ಮನೋವಾಚಾಮಗೋಚರಮ್ ।
ಏಕಮೇವಾದ್ವಿತೀಯಂ ಬ್ರಹ್ಮ ನೇಹ ನಾನಾಸ್ತಿ ಕಿಂಚನ ॥

ಸತ್ಸಮೃದ್ಧಂ ಸ್ವತಃ ಸಿದ್ಧಂ ಶುದ್ಧಂ ಬುದ್ಧಮನೀದೃಶಮ್ ।
ಏಕಮೇವಾದ್ವಿತೀಯಂ ಬ್ರಹ್ಮ ನೇಹ ನಾನಾಸ್ತಿಕಿಂಚನ ॥

ವಿವೇಕಚೂಡಾಮಣಿ—464—470.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಶ್ಲೋಕಗಳಲ್ಲಿ ವರ್ಣಿಸಿರುವ ಸ್ವರೂಪವೇ ಪರಬ್ರಹ್ಮ ಸ್ವರೂಪ—(ಸೂ. ಭಾ.-೪ ಯಾವುದರಲ್ಲಿ ಅವಿದ್ಯೆಯಿಂದ ಕಲ್ಪಿಸಿಕೊಂಡ ನಾಮರೂಪ ಮುಂತಾದ ವಿಶೇಷಗಳು ಅಸ್ಥೂಲಾದಿ ಪದಗಳಿಂದ ಇಲ್ಲವೆಂದು ನಿರಾಕರಿಸಲಾಗಿರುವುದೋ ಅದೇ ಪರಬ್ರಹ್ಮ. ಯಾವ ಪರಬ್ರಹ್ಮವನ್ನು ನಾಮರೂಪ ಮುಂತಾದ ವಿಶೇಷಗಳಿಂದ ಕೂಡಿರುವಂತೆ ಉಪಾಸನೆಗಾಗಿ ಶ್ರುತಿಗಳು ಉಪದೇಶಿಸಿರುವವೋ, ಉಪಾ : ಮನೋಮಯಃ ಪ್ರಾಣ ಶರೀರಃ ಭಾರೂಪಃ ಸತ್ಯಕಾಮಃ ಸತ್ಯಸಂಕಲ್ಪಃ, ಇತ್ಯಾದಿ ಪದಗಳಿಂದ ಮನೋ ಮಯತ್ವಾದಿ ಸತ್ಯಕಾಮ ಸತ್ಯಸಂಕಲ್ಪಾದಿ ಗುಣಗಳಿಂದ ಕೂಡಿಯೇ ಬ್ರಹ್ಮವನ್ನು ಉಪಾಸನೆಗಾಗಿ ಉಪದೇಶಿಸಿದೆ. ಆದ್ದರಿಂದ ಈ ಸಗುಣಬ್ರಹ್ಮವೇ ಅಪರಬ್ರಹ್ಮ; ಹಿರಣ್ಯಗರ್ಭನನ್ನು ಅಪರಬ್ರಹ್ಮ (ಕಾರ್ಯಬ್ರಹ್ಮ) ಎಂದು ವ್ಯವಹರಿಸಲಾಗಿದೆ. **"ಕಾರ್ಯಂ ಬಾದಾರಿರಸ್ಯ ಗತ್ಯುಪಪತ್ತೇಃ"**—ದಹರವಿದ್ಯಾ, ಪರ್ಯಂಕವಿದ್ಯಾ, ಶಾಂಡಿಲ್ಯವಿದ್ಯಾ, ಇತ್ಯಾದಿ ಉಪಾಸನೆಗಳಲ್ಲಿ ಸಗುಣಬ್ರಹ್ಮವೆಂದೇ ತಿಳಿಯಬೇಕು. ಇದರ ಉಪಾಸನೆಯು ಅಭ್ಯುದಯ ಫಲವನ್ನು ಕೊಡುವುದು. ನಿಷ್ಕಾಮನಾಗಿದ್ದರೆ ಕಲ್ಪಾಂತ್ಯದಲ್ಲಿ ತತ್ತ್ವಜ್ಞಾನದಿಂದ ಮುಕ್ತಿಯಾಗುವುದು. ಇದು ಕ್ರಮಮುಕ್ತಿಯು. ನಿರ್ಗುಣ ಬ್ರಹ್ಮವನ್ನು ಜೀವಂತನಾಗಿ ಇರುವಾಗಲೇ ತಿಳಿದರೆ, ತತ್ತ್ವಜ್ಞಾನವಾದರೆ ಇಲ್ಲಿಯೇ ಮುಕ್ತಿ, ಜೀವನ್ಮುಕ್ತಿ. ಲೋಕಾಂತರಕ್ಕೆ ಹೋಗಬೇಕಾಗಿಲ್ಲ. ಸದ್ಯೋ ಮುಕ್ತಿಯಾಗುವುದು. ಈ ಶುದ್ಧ ಬ್ರಹ್ಮವನ್ನೇ ಹಿಂದೆ ಉದಾಹರಿಸಲಾದ ಶ್ಲೋಕ ಗಳಲ್ಲಿ ಶ್ರೀ ಶಂಕರರು ಪ್ರತಿಪಾದಿಸಿರುವರು.

ಯಾವುದು ಪರಿಪೂರ್ಣ (ವ್ಯಾಪಕ)ವೋ, ಆದಿ ಅಂತ್ಯವಿಲ್ಲದ್ದೋ, ನಿರ್ವಿಕಾರ ವಾಗಿದೆಯೋ, ಸಚ್ಚಿದಾನಂದ ಘನವೆನಿಸಿದೆಯೋ, ಪ್ರತ್ಯಕ್ ಚೈತನ್ಯವೆಂಬ ಏಕರೂಪ ವಾಗಿರುವುದೋ, ಯಾವುದನ್ನು ಬಿಡುವುದಕ್ಕೂ ಹೊಸದಾಗಿ ಹಿಡಿಯುವುದಕ್ಕೂ ಬಾರದೋ, ಬೇರೊಂದು ಆಶ್ರಯ, ಆಧಾರವಿಲ್ಲದೆ ನಿರ್ಗುಣವೋ, ನಿಷ್ಕ್ರಿಯವಾಗಿ, ಸೂಕ್ಷ್ಮವಾಗಿ ನಿರ್ಲಿಪ್ತವಾಗಿ ವಾಚಮಗೋಚರವೂ, ಮನಸಾ ಅಗೋಚರವಾಗಿದ್ದು, ಕೇವಲ ಸ್ವಾನುಭವಕ್ಕೆ ಮಾತ್ರ ಬರುವುದೋ ಅದೇ ಪರಬ್ರಹ್ಯ (ಅಥವಾ ಪರಮಾತ್ಮ) ಎಂದು ಹೇಳಲ್ಪಡುವುದು.

"ಅಸ್ಥೂಲಮನಣು ಅಹ್ರಸ್ವಮದೀರ್ಘಂ....।"

"ಅಶಬ್ಧಮಸ್ಪರ್ಶಮರೂಪಮವ್ಯಯಮ್—" ಮುಂತಾದ ಶ್ರುತಿಗಳಿಂದ ಬೋಧಿಸಿರುವ ತತ್ತ್ವವೇ ಪರಬ್ರಹ್ಮ.

ಇದೇ ಪರಬ್ರಹ್ಮವು ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಮಾಯೆಯ ಮೂಲಕ ಮಾಡುವುದೋ ಅದೇ ಈಶ್ವರನೆನಿಸುವುದು. "ಮಾಯಾಂ ತು ಪ್ರಕೃತಿಂ ವಿದ್ಯಾತ್ ಮಾಯಿನಂ ತು ಮಹೇಶ್ವರಮ್" ॥

Sri Vidyabharathi Book Centre, Sringeri

CC-O. In Public Domain. Digitized by eGangotri

"ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ"-ಎಂಬುದರ ತತ್ತ್ವಾರ್ಥ. (ಅಧ್ಯಾಯ ೧೩ ಶ್ಲೋ ೨) ಸರ್ವಕರ್ಮ ಸಂನ್ಯಾಸ ಮಾಡಿದ ಪರಮಹಂಸ ಯತಿಗಳಿಗೆ ಮಾಡಬೇಕಾದ ಉಪದೇಶ ಇದು. ಯದ್ಯಪಿ ಅರ್ಜುನನು ಸಂನ್ಯಾಸಿಯಲ್ಲದಿದ್ದರೂ, ಈಗ ಅವಶ್ಯ ಕರ್ತವ್ಯವಾದ ಕ್ಷಾತ್ರಧರ್ಮವನ್ನು ನಿಷ್ಕಾಮವಾಗಿ ಆಚರಿಸಿದ ಅನಂತರ, ಕ್ರಮೇಣ ಚಿತ್ತಶುದ್ಧಿಯಾಗಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ ಮೇಲೆ ಗುರುಮುಖೇನ ಉಪದೇಶ ಪಡೆಯುವಾಗ ಹೇಳುವ ತತ್ತ್ವಾರ್ಥವನ್ನು ಭಗವಂತನು ಈಗಲೇ ಅವನ ಲಕ್ಷ್ಯಕ್ಕೆ ಬರಲೆಂದು ಉಪದೇಶ ಮಾಡಿರುವುದು ಯುಕ್ತವಾಗಿದೆ.

ಮುಂದೆ ಬರುವ ಜೀವೇಶ್ವರರ ತತ್ತ್ವಾರ್ಥಜ್ಞಾನವನ್ನು ಮನಸ್ಸಿನಲ್ಲಿಟ್ಟುಕೊಂಡು ಕರ್ತವ್ಯ ಕರ್ಮವನ್ನು ಮಾಡಲು ಇದು ಸಹಾಯಕವಾಗುವುದು. ನಿಜವಾದ ತತ್ತ್ವಜ್ಞಾನವಾದ ನಂತರ ಕರ್ತವ್ಯ ಕರ್ಮ ಯಾವುದೂ ಇರುವುದಿಲ್ಲ. ಲೋಕ ಸಂಗ್ರಹಾರ್ಥವಾಗಿ ಕದಾಚಿತ್ ಜನಕಾದಿಗಳಂತೆ ಮಾಡಬಹುದು.

ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹ ಕಶ್ಚನ ।

ಎಂದು ಹೇಳಿರುವಂತೆ, ಜ್ಞಾನಿಗಳಿಗೆ ವಿಹಿತ ಕರ್ಮಾನುಷ್ಠಾನದಿಂದ ಯಾವ ಪ್ರಯೋಜನವೂ ಇರುವುದಿಲ್ಲ; ಬಿಟ್ಟದ್ದರಿಂದ ಯಾವ ಅರಿಷ್ಟವೂ ಇರುವುದಿಲ್ಲ.

ಈಗ ತತ್ತ್ವಜ್ಞಾನಿಯಾಗಿಲ್ಲದ ಅರ್ಜುನನಿಗೆ ಮಾಡಿದ ಉಪದೇಶ ಇದು ತೆಗೆದುಕೊಳ್ಳಬೇಕು. ಆರುಣಿಯು ತನ್ನ ಪುತ್ರನಾದ ಶ್ವೇತಕೇತುವಿಗೆ "ತತ್ತ್ವಮಸಿ" ಎಂದು ಉಪದೇಶ ಮಾಡಿದಂತೆ, "ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ" ಎಂದು ಮಾಡಿದ ಉಪದೇಶವು.

"ಆತ್ಮಾನಾತ್ಮ ವಿವೇಚನಂ ಸ್ವಸುಭವಃ" ಎಂದಂತೆ, ಇದಕ್ಕೆ ಮೊದಲು ಆತ್ಮಾನಾತ್ಮ ವಿವೇಚನೆಯನ್ನು ಅಂದರೆ ಮುಖ್ಯವಾಗಿ ಜೀವ ಪದಾರ್ಥದ ಶೋಧನೆಯನ್ನು ಮಾಡಿಕೊಂಡಿರಬೇಕು. ಪದಾರ್ಥ ಜ್ಞಾನವಿಲ್ಲದೆ ವಾಕ್ಯಾರ್ಥ ಜ್ಞಾನವಾಗುವುದಿಲ್ಲ. ಪ್ರತ್ಯಗಭಿನ್ನಬ್ರಹ್ಮವೆಂದು ತಿಳಿಯಲು ಪದಾರ್ಥಜ್ಞಾನ ಆವಶ್ಯಕ. ಕರ್ಮಾನುಷ್ಠಾನ, ಧ್ಯಾನ (ಉಪಾಸನೆ) ಮಾಡುವವನೂ ಸಹ, ದೇಹಕ್ಕೆ ಬೇರೆಯಾಗಿ ಆತ್ಮನಿದ್ದಾನೆ ಎಂಬುದನ್ನು ತರ್ಕದಿಂದ ಶೋಧನೆ ಮಾಡಿಕೊಂಡಿರಬೇಕು. ಹೀಗಿರುವಾಗ ನಿಜವಾದ ಆತ್ಮತತ್ತ್ವವನ್ನು ತಿಳಿಯಲು ಹೊರಟ ಮುಮುಕ್ಷುಗಳು ಆತ್ಮಾನಾತ್ಮ ವಿವೇಕವನ್ನು ಅವಶ್ಯ ಮಾಡಿಕೊಂಡಿರಬೇಕು.

ಆತ್ಮಾನಾತ್ಮ ವಿವೇಚನಂ ಸ್ವನುಭವೋ ಬ್ರಹ್ಮಾತ್ಮನಾ ಸಂಸ್ಥಿತಿಃ ॥

ಎಂದು ವಿವೇಕ ಚೂಡಾಮಣಿಯಲ್ಲಿ ಹೇಳಿರುವಂತೆ, ಸ್ವಾನುಭವಕ್ಕೆ, "ಅಹಂಬ್ರಹ್ಮಾಸ್ಮಿ" ಎಂದು ಬರಬೇಕಾದ ಅನುಭವಕ್ಕೆ ಮೊದಲು ಪದಾರ್ಥ ವಿವೇಚನೆಯು ಅತ್ಯಾವಶ್ಯಕ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕ್ಷೇತ್ರ-ಕ್ಷೇತ್ರಜ್ಞ ವಿವೇಚನೆಯೆಂದರೂ, ಆತ್ಮಾನಾತ್ಮ ವಿವೇಚನೆಯೆಂದರೂ ಒಂದೇ ಅರ್ಥ. ಚೈತನ ಸ್ವರೂಪನಾದ ಆತ್ಮನು ಕ್ಷೇತ್ರಜ್ಞ, ಕ್ಷೇತ್ರಕ್ಕೆ ವಿಲಕ್ಷಣನಾಗಿರುವನು ಎಂದು ತಿಳಿಯಬೇಕು. ಅದಕ್ಕಾಗಿ ೧೩ನೇ ಅಧ್ಯಾಯದಲ್ಲಿ ಕ್ಷೇತ್ರ-ಕ್ಷೇತ್ರಜ್ಞ ಎಂಬ ಪ್ರಕೃತಿಗಳ ವಿವೇಚನೆಯೇ ಆರಂಭವಾಗಿದೆ.

ಇದಂ ಶರೀರಂ ಕೌಂತೇಯ ಕ್ಷೇತ್ರ ಮಿತ್ಯಭಿಧೀಯತೇ ।
ಏತದ್ಯೋ ವೇತ್ತಿ ತಂಪ್ರಾಹುಃ ಕ್ಷೇತ್ರಜ್ಞ ಇತಿ ತದ್ವಿದಃ ॥

ಎಲೈ ಕುಂತಿಪುತ್ರನೆ, ಕ್ಷೇತ್ರವೆಂಬುದು ೭ನೇ ಅಧ್ಯಾಯದಲ್ಲಿ ಹೇಳಿದಂತೆ ಅಪರಾಪ್ರಕೃತಿ, ಸ್ಪಷ್ಟವಾಗಿ, ಪ್ರತ್ಯಕ್ಷವಾಗಿ ಕಾಣಿಸುವ ಈ ನಿನ್ನ ಶರೀರವೇ ಕ್ಷೇತ್ರವೆಂದು ತಿಳಿ. ಪ್ರಕೃತಿಯ ವಿಕಾರವಾದ ದೇಹೇಂದ್ರಿಯಾದ ಸಂಘಾತ (ಸಮುದಾಯ) ವನ್ನೇ ಶರೀರವೆಂದು ಹೇಳುವುದು. ಕಾಣಿಸುವ ಸ್ಥೂಲ ಶರೀರ ಮತ್ತು ಒಳಗೆ ಸೂಕ್ಷ್ಮ ಶರೀರವು ಲಿಂಗ ಶರೀರವೂ ಕ್ಷೇತ್ರವೇ. ಲಿಂಗ ಶರೀರವೆಂದರೆ ಪಂಚ ಜ್ಞಾನೇಂದ್ರಿಯ, ಪಂಚ ಕರ್ಮೇಂದ್ರಿಯ, ಪಂಚ ಪ್ರಾಣಗಳು, ಬುದ್ಧಿ, ಮನಸ್ಸು ಸೇರಿ ೧೭ ಪದಾರ್ಥಗಳು ಸೇರಿ ಸೂಕ್ಷ್ಮಶರೀರ, ಲಿಂಗ ಶರೀರವೆಂದೂ ಹೇಳಲ್ಪಡುವುದು. ಕ್ಷೇತ್ರದಲ್ಲಿ ಭತ್ತದ ಬೀಜವನ್ನು ಹಾಕಿ ಫಲವನ್ನು ಅದರಲ್ಲೇ ಕಾಣುವಂತೆ, ಈ ಶರೀರವೂ ಕ್ಷೇತ್ರ. ಇದರಲ್ಲೇ ಮಾನವನಾಗಿದ್ದಾಗ ಪುಣ್ಯಕರ್ಮಗಳ ಬೀಜವನ್ನು ಹಾಕಿ ಅದರ ಫಲವನ್ನು ಸುಖಭೋಗರೂಪವಾಗಿ ಕಾಣುವುದರಿಂದ ಇದು ಕ್ಷೇತ್ರವೆನಿಸುತ್ತದೆ. ಕ್ಷಯಿಸುವುದರಿಂದಲೂ ಕ್ಷೇತ್ರವೆನಿಸುತ್ತದೆ. ಶರೀರ ಎಂದರೆ, ಜೀವರ ಭೋಗಸ್ಥಾನ (ಮತ್ತೆ ಉಪಕರಣ). ಅಜ್ಞಾನಿಯು ಈ ಶರೀರವನ್ನೇ ಆತ್ಮನೆಂದು ಭ್ರಮಿಸುತ್ತಾನೆ. ಕ್ಷೀಯತ ಇತಿ ಕ್ಷೇತ್ರಂ ಅಂದರೆ, ಕ್ಷಯಿಸುವುದರಿಂದಲೂ ಶರೀರವು ಕ್ಷೇತ್ರವೆನಿಸಿದೆ. ಇಂಥ ಸ್ಥೂಲ ಶರೀರ, ಸೂಕ್ಷ್ಮ ಶರೀರಗಳೆರಡರಲ್ಲೂ ಆತ್ಮನೆಂಬ ಅಭಿಮಾನವನ್ನು ನಿವಾರಿಸಲು, ಮೊದಲು ಈ ಶರೀರಕ್ಕೆ ಬೇರೆಯಾಗಿ ಆತ್ಮನಿರುವನೆಂದು ಯುಕ್ತಿಯಿಂದ ಅವಸ್ಥಾತ್ರಯ ವಿಚಾರದಿಂದಲೂ ಶರೀರ ಬೇರೆ ಆತ್ಮ ಬೇರೆಯೆಂದು ವಿವೇಚಿಸಬೇಕು. ೨ನೇ ಅಧ್ಯಾಯದಲ್ಲಿ ಆತ್ಮನಿಗೆ ಹುಟ್ಟು ಇಲ್ಲ, ಸಾವಿಲ್ಲ, ಯಾವ ವಿಧವಾದ ವಿಕಾರಗಳಾಗಲೀ ಪರಿಣಾಮಗಳಾಗಲೀ ಇಲ್ಲವೆಂದು ಗೀತೆಯು ಸ್ಪಷ್ಟವಾಗಿ ಹೇಳಿದೆ.

ನ ಜಾಯತೇ ಮ್ರಿಯತೇ ವಾ ಕದಾಚಿತ್
ನಾಯಂ ಭೂತ್ವಾ ಭವಿತಾ ವಾ ನ ಭೂಯಃ ।
ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ
ನಹನ್ಯತೇ ಹನ್ಯಮಾನೇ ಶರೀರೇ ॥

ಭಾವವಸ್ತುಗಳಲ್ಲಿ ಒಂದು ಮರವನ್ನು ನೋಡೋಣ. ಬೀಜದಿಂದ ಹಲಸಿನ ಗಿಡವು ಹುಟ್ಟುವುದು ; ಅಸ್ತಿತ್ವವನ್ನು ಹೊಂದಿ ಬೆಳೆಯುವುದು; ಕೆಲವು ಸಮಯ ನೀರಿಲ್ಲದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃಶವಾಗುವುದು; ಮಳೆ ಬಿದ್ದ ಕೂಡಲೇ ಚೆನ್ನಾಗಿ ಬೆಳೆದು ದೊಡ್ಡ ಮರವಾಗಿ ಹಣ್ಣು ಗಳನ್ನು ಬಿಡುವುದು; ಹತ್ತಾರು ವರ್ಷಗಳ ನಂತರ ಕ್ಷೀಣವಾಗುತ್ತ ಸತ್ತು ಹೋಗುವುದು. ಹುಟ್ಟುವ ಮುಂಚೆ ಇರಲಿಲ್ಲ; ಅನಂತರ ಹುಟ್ಟಿ ಆರು ಬಗೆಯ ಪರಿಣಾಮಗಳನ್ನು ಹೊಂದುವುದು.

ಅದರಂತೆ ನಮ್ಮ ಶರೀರವೂ. ಆತ್ಮನು ಸದಾ ಚೈತನ್ಯ ಪ್ರಕಾಶದವನು, ಯಾವಾಗಲೂ ಇರುವುದರಿಂದ ಜನನ–ಮರಣಾದಿ ವಿಕಾರಗಳು ವಾಸ್ತವವಾಗಿ ಇಲ್ಲದವನು. ಮರವನ್ನು ಕತ್ತರಿಸಬಹುದು, ಸುಡಬಹುದು, ನೀರಿನಲ್ಲಿ ಮುಳುಗಿಸಿ ಕರಗಿಸಬಹುದು ಹಾಗೂ ಒಣಗಿಸಲೂಬಹುದು. ಆದರೆ, ಆತ್ಮನನ್ನು ಹೀಗೆ ಮಾಡಲು ಸಾಧ್ಯವಿಲ್ಲ. ಶರೀರವನ್ನು ಕತ್ತರಿಸಬಹುದು, ಸುಡಬಹುದು, ನೀರಿನಲ್ಲಿ ಕರಗಿಸಬಹುದು, ಬಿಸಿಲಿನಲ್ಲಿ ಒಣಗಿಸಲೂಬಹುದು; ಆದರೆ ಆತ್ಮನಿಗೆ ಇವು ಯಾವುದೂ ಇಲ್ಲವೆಂದು ಗೀತೆ ತಿಳಿಸುತ್ತದೆ.

ಅಚ್ಛೇದ್ಯೋಽಯಂ ಅದಾಹ್ಯೋಽಯಂ ಅಕ್ಲೇದ್ಯೋಽಶೋಷ್ಯ ಏವಚ ।
ನಿತ್ಯಃ ಸರ್ವಗತಃ ಸ್ಥಾಣುಃ ಅಚಲೋಽಯಂ ಸನಾತನಃ ॥

ಆತ್ಮನು ನಿತ್ಯ, ಸರ್ವವ್ಯಾಪಕ, ಸ್ಥಾಣು, ನಿಷ್ಕ್ರಿಯ ಎಂದು, ಶರೀರಕ್ಕೆ ವಿಲಕ್ಷಣನಾಗಿರುವನೆಂದು ತಿಳಿಸಿದೆ.

ಆತ್ಮನು ಅಣುವಲ್ಲ, ದೇಹದಷ್ಟೇ ಆಕಾರವುಳ್ಳವನೂ ಅಲ್ಲ. ಹಾಗಿದ್ದರೆ ನಶಿಸುವುದು–ಅಥಯದಲ್ಪಂ ತನ್ಮರ್ತ್ಯಮ್. ಯೋವೈಭೂಮಾ ತದಮೃತಮ್ ಯಾವುದು ದೊಡ್ಡದೋ ಅದು ನಶಿಸುವುದಿಲ್ಲ ಆಕಾಶದಂತೆ ಸಣ್ಣ, ದಪ್ಪ, ಇತ್ಯಾದಿ ರೂಪಗಳು ಶರೀರಕ್ಕೇ ಹೊರತು ಆತ್ಮನಿಗಲ್ಲ. ಆತ್ಮನು ಆಕಾಶದಂತೆ ನಿರವಯವ, ಅವಯವ ವಿಭಾಗವಿಲ್ಲದವನು. ಸರ್ವಗತ–ಸರ್ವವ್ಯಾಪಕನು, ಅವನಿಲ್ಲದ ಪ್ರದೇಶವೇ ಇಲ್ಲ. ಅವನಿಲ್ಲದ ಕಾಲವಿಲ್ಲ. ಯಾವ ಅಳತೆಗೂ ಸಿಕ್ಕದವನು. ಜಡವಾದ ದೇಹವೂ ಆತ್ಮನಲ್ಲ. ಇಂದ್ರಿಯಗಳೂ, ಭೋಗಕ್ಕೆ ಬೇಕಾದ ಉಪಕರಣಗಳು ಹಾಗೂ ಬುದ್ಧಿ, ಮನಸ್ಸು, ಪ್ರಾಣ, ಮುಂತಾದ ಎಲ್ಲವೂ ಜಡವಸ್ತುಗಳು, ಪ್ರಕೃತಿಯ ಪರಿಣಾಮಗಳು, ಜ್ಞಾನರೂಪನಾದ, ವೇದಾಂತ, ಗೀತೆ, ಇವುಗಳಲ್ಲಿ ತಿಳಿಯಲಾದಂತೆ, ಆತ್ಮನೂ ಈ ಶರೀರವೂ ಎಂದಿಗೂ ಒಂದಾಗುವುದಿಲ್ಲ.

ಅವಸ್ಥಾತ್ರಯದ ವಿಚಾರ ಮಾಡುವುದರಿಂದಲೂ ಇದು ಸಿದ್ಧವಾಗುವುದು. ಜಾಗೃತಾವಸ್ಥೆಯು ಸ್ವಪ್ನದಲ್ಲಿರುವುದಿಲ್ಲ; ಸ್ವಪ್ನದಲ್ಲಿರುವುದು ಜಾಗ್ರದವಸ್ಥೆಯಲ್ಲಿರುವುದಿಲ್ಲ; ಈ ಎರಡು ಅವಸ್ಥೆಗಳೂ ಸುಷುಪ್ತಿಯಲ್ಲಿರುವುದಿಲ್ಲ. **ಯತ್ರಸುಪ್ತೋ ನ ಕಂಚನ ಕಾಮಂ ಕಾಮಯತೇ, ನಕಂಚನ ಸ್ವಪ್ನಂ ಪಶ್ಯತಿ, ತತ್ ಸುಷುಪ್ತಮ್।**

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾವ ಕಾಮನೆಯನ್ನೂ ಮಾಡದೆ, ಯಾವ ಸ್ವಪ್ನವನ್ನೂ ಕಾಣದಿರುವ ಅವಸ್ಥೆಯೇ ಸುಷುಪ್ತಿ. ಆದರೆ ಈ ಮೂರು ಅವಸ್ಥೆಗಳಲ್ಲೂ ಅಹಂ ಎಂಬ ಆತ್ಮನು ಇದ್ದೇ ಇರುವನು. ಯದ್ಯಪಿ ಸುಷುಪ್ತಿಯಲ್ಲಿ ಅಹಂ ಎಂದ ಇತರ ಅವಸ್ಥೆಗಳಲ್ಲಿ ತೋರುವಂತೆ ತೋರುವುದಿಲ್ಲ; ಆದರೂ ಅಹಂಕಾರ ವೃತ್ತಿಯಿಲ್ಲದೆ ನಿತ್ಯಪ್ರಕಾಶನಾಗಿ ಕಾಣುವನು. ಜಾಗರ ಸ್ವಪ್ನಗಳಲ್ಲಿ ಆತ್ಮನು ಯಾವಾಗಲೂ ಇರುವವನು. ಸುಷುಪ್ತಿಯಿಂದ ಎದ್ದ ಮೇಲೆ "ಈವರೆಗೂ ನಾನು ಸುಖವಾಗಿ ಮಲಗಿದ್ದೆ, ಏನೊಂದನ್ನೂ ನೋಡಲಿಲ್ಲ" ಎಂದು ಸ್ವಾನುಭವವನ್ನು ಹೇಳುತ್ತಾನೆ. ಇದಕ್ಕೆ ಆಗ ಉಂಟಾದ ನಿತ್ಯಚೈತನ್ಯಾನುಭವವೇ ಕಾರಣವೆಂದು ಹೇಳಬೇಕೇ ಹೊರತು ಬೇರೇ ವೃತ್ತಿಜ್ಞಾನವನ್ನು ಹೇಳುವಂತಿಲ್ಲ. ಅಂತಃಕರಣದ ವ್ಯಾಪಾರವೇ ಇಲ್ಲದಿರುವಾಗ ವಿಶೇಷಾನುಭವವು ಹೇಗಾದೀತು ? ಆದ್ದರಿಂದ ನಿತ್ಯಚೈತನ್ಯರೂಪನಾದ ಆತ್ಮನು ಯಾವ ಬದಲಾವಣೆಯನ್ನೂ ಹೊಂದದೆ ಏಕ ರೀತಿಯಾಗಿ ಅವಸ್ಥಾತ್ರಯ ಸಾಕ್ಷಿಯಾಗಿ ಇರುತ್ತಾನೆ.

ಹೀಗೆಯೇ ಆತ್ಮನು ನಿರ್ಗುಣ; ಸತ್ವರಜಸ್ತಮೋ ಗುಣಗಳಾಗಲೀ, ರಾಗ, ದ್ವೇಷ, ಸುಖ, ದುಃಖಾದಿಗುಣಗಳಾಗಲೀ ವಾಸ್ತವವಾಗಿಲ್ಲದವನು. ಏಕೆಂದರೆ, ಸರ್ವಸಾಕ್ಷೀ, ದ್ರಷ್ಟಾ, ಯಾವಾಗಲೂ ನೋಡುವವನು. ಜಡ ಅಹಂಕಾರಾದಿಗಳೆಲ್ಲವೂ ದೃಶ್ಯಗಳು; ಅಂದರೆ, ಸಾಕ್ಷಿ ಚೈತನ್ಯಕ್ಕೆ ಗೋಚರವಾಗುವುವು. ದ್ರಷ್ಟ್ಯನಾದ ಆತ್ಮನಲ್ಲಿ ಅವು ಇರಲಾರವು. ಇದ್ದಂತೆ ತೋರುವುದು ಕೇವಲ ಭ್ರಾಂತಿಯಿಂದ.

ನೈಯಾಯಿಕರು ಮತ್ತು ವೈಶೇಷಿಕರು ಲೋಕಾನುಸಾರ ಬುದ್ಧಿ, ಸುಖ, ದುಃಖ, ಇಚ್ಛಾ, ದ್ವೇಷ, ಧರ್ಮಾಧರ್ಮ, ಸಂಸ್ಕಾರ, ಎಂಬ ಎಂಟು ಗುಣಗಳು ಆತ್ಮನಿಗೆ ಸಂಬಂಧಿಸಿದವು ಎಂಬುದಾಗಿ ಭ್ರಾಂತಿಯಿಂದ ಹೇಳುವರು. ಅಹಂಕಾರ ವಿಶಿಷ್ಟ ಚೇತನದಲ್ಲಿ ಭೇದ ಬುದ್ಧಿಯಿಲ್ಲದಿರುವಾಗ ಆತ್ಮನಲ್ಲಿದ್ದಂತೆ ತೋರುತ್ತದೆ ಅಷ್ಟೇ. ಆದ್ದರಿಂದ ಆತ್ಮನು ನಿರ್ಗುಣನು. ಇದರ ವಿವೇಚನೆಯನ್ನು ೧೩ನೇ ಅಧ್ಯಾಯದಲ್ಲಿ "ಇಚ್ಛಾದಿಗಳನ್ನು ಕ್ಷೇತ್ರನೆಂದು ಪರಿಗಣಿಸಿ, ಆತ್ಮನಿಗಿಂತ ಬೇರೆ ಎಂದು ತಿಳಿಸಿರುವುದು ಸೂಕ್ತವಾಗಿದೆ.

ಕಾಮಃ ಸಂಕಲ್ಪೋ ವಿಚಿಕಿತ್ಸಾ ಶ್ರದ್ಧಾ ಅಶ್ರದ್ಧಾ ಹ್ರೀಃ ಧೀಃ ಭೀಃ ಸರ್ವಂ ಮನ ಏವ–ಎಂದರೆ ಕಾಮಾದಿಗಳು ಮನಸ್ಸಿನ ಪರಿಣಾಮಗಳು ಎಂದು ಬೃ. ಶ್ರುತಿಯು ಬೋಧಿಸಿದೆ.

ಈ ರೀತಿಯಾಗಿ ಸಾಧಕನು ಕ್ಷೇತ್ರವನ್ನು ಪ್ರತ್ಯೇಕಿಸಿ ಆತ್ಮನನ್ನೇ ಅಂದರೆ ಚೈತನ್ಯವನ್ನೇ ಮೊದಲು ತಿಳಿದಲ್ಲಿ ಜೀವತ್ವ ಶೋಧನೆಯಾಗುವುದು. ಅನಂತರ ಬ್ರಹ್ಮೋಪದೇಶವು ಸಂಗತವಾಗುವುದು.

ಕೆಲವರು **ಇದಂ ಶರೀರಂ ಕೌಂತೇಯ**–ಎಂಬುದಕ್ಕೆ ಪಂಚಭೂತಗಳಿಂದ ಆರಂಭಿಸಿ ಅವ್ಯಕ್ತ ಮಾಯಾಪರ್ಯಂತ ಇರುವ ಪರಿಣಾಮ ಸಮೇತ ಎಲ್ಲಾ ಕ್ಷೇತ್ರ

Sri Vidyabharathi Book Centre, Sringeri

CC-O. In Public Domain. Digitized by eGangotri

ನೆಂದು ಅರ್ಥಮಾಡುತ್ತಾರೆ. ಶರೀರ ಎಂದರೆ ಶೀರ್ಯತೇ, ಈರ್ಯತೇ ಇತಿ ಎಂದು ಅವಯವಾರ್ಥಮಾಡಿ ಮೇಲಿನಂತೆ ಅರ್ಥ ಮಾಡುತ್ತಾರೆ. ಆಗ ಇದಂ ಎಂಬ ಪ್ರತ್ಯಕ್ಷ ವಾಚಿಯಾವ ಶಬ್ದವು ಹೊಂದುವುದಿಲ್ಲ. ಈ ಶರೀರ ಪ್ರತ್ಯಕ್ಷವಾದಂತೆ ಅವ್ಯಕ್ತ ಸೂಕ್ಷ್ಮ ಭೂತಗಳು ಪ್ರತ್ಯಕ್ಷವಾಗುವುದಿಲ್ಲ. ರೂಢ್ಯರ್ಥವನ್ನು ಬಿಟ್ಟಂತೆ ಆಗುವುದು. ಅವ್ಯಕ್ತಾಂತ ವಾದ ಈ ಕ್ಷೇತ್ರವನ್ನು ಯಾರು ತಿಳಿಯುತ್ತಾನೋ, ಅಂದರೆ ಪ್ರತ್ಯಕ್ಷವಾಗಿ ಯಾರು ತಿಳಿಯುತ್ತಾನೋ ಅವನೇ ಕ್ಷೇತ್ರಜ್ಞ. ಅವನು ಈಶ್ವರನೇ ಹೊರತು ಬೇರೆ ಅಲ್ಲ-ಎಂಬು ದಾಗಿ ಅರ್ಥಮಾಡುತ್ತಾರೆ. ಇದು ಸರಿಯಲ್ಲ. ಒಂದು ವೇಳೆ ಈ ಅರ್ಥವನ್ನು ಅಂಗೀಕರಿ ಸಿದರೆ; ಆಗ ಇವರ ಪ್ರಕಾರ ೭ನೇ ಅಧ್ಯಾಯದಲ್ಲಿ ಹೇಳಿದ ಜೀವರೂಪನಾದ ಪರಾಪ್ರಕೃತಿ ಯನ್ನು ಕೈಬಿಟ್ಟಂತೆ ಆಗುವುದು. "ಕ್ಷೇತ್ರಜ್ಞ ಆತ್ಮಾಪುರುಷಃ" ಎಂಬ ಕೋಶ ದಂತೆ, ಜೀವ ಎಂಬ ರೂಢ್ಯರ್ಥ ಬಿಟ್ಟಂತೆ ಆಗುತ್ತದೆ. ಯೋಗರೂಢಾರ್ಥವನ್ನು ಬಿಡಲು ಕಾರಣವಿಲ್ಲ. "ಕ್ಷೇತ್ರ ಕ್ಷೇತ್ರಜ್ಞ ಪತಿರ್ಗುಣೇಶಃ" ಎಂಬ ಶ್ರುತಿಯಲ್ಲಿ ಜೀವ ಎಂಬ ಅರ್ಥವಿರುತ್ತದೆ. "ಕ್ಷೇತ್ರಂ ಕ್ಷೇತ್ರಜ್ಞ ಏವಚ" ಎಂದು ವಿಷ್ಣುಸಹಸ್ರ ನಾಮವಿದ್ದರೂ, ಅದು ಗೌಣನಾಮವೇ ಹೊರತು ಮುಖ್ಯಾರ್ಥದಲ್ಲಿ ಅಲ್ಲ. ಆದ್ದರಿಂದ ಕ್ಷೇತ್ರಪದವು ವಿಷ್ಣುವಿಗೆ ಗೌಣನಾಮ. "**ಯಾನಿ ನಾಮಾನಿ ಗೌಣಾನಿ ವಿಖ್ಯಾತಾನಿ ಮಹಾತ್ಮನಃ**"-ಎಂದು ಸಹಸ್ರನಾಮದಲ್ಲಿ ಮೊದಲೇ ಗೌಣವೆಂದು ಹೇಳಿದೆ. ಈ ರೀತಿಯ ವ್ಯಾಖ್ಯಾನವು ಗೀತೆಗೆ ಸರಿಹೊಂದುವುದಿಲ್ಲ. ಇಲ್ಲಿ ಕ್ಷೇತ್ರವನ್ನು ಬೇರೆ ಮಾಡಿಯೇ ಕ್ಷೇತ್ರಜ್ಞ ಎಂದಿದೆ. ಆದ್ದರಿಂದ ಕ್ಲಿಷ್ಟವಾದ ವ್ಯಾಖ್ಯಾನವು ಗ್ರಾಹ್ಯವಲ್ಲ. ಆದ್ದರಿಂದ ಕಾರ್ಯಕಾರಣ ಸಂಘಾತವೆಂಬ ಶರೀರವನ್ನೇ "ಇದಂ ಶರೀರಂ" ಎಂದು ಶ್ರೀಭಗವತ್ಪಾದರ ಭಾಷ್ಯದಲ್ಲಿರುವಂತೆ ನಾವು ಗ್ರಹಿಸಬೇಕು.

ಜೀವೇಶ್ವರರ ಸ್ವರೂಪೈಕ್ಯವನ್ನು ಬೋಧಿಸುವ ವೇದಾಂತ ಮಹಾವಾಕ್ಯಗಳಿಗೆ ಬೇರೆ ಬೇರೆ ಗೌಣಾರ್ಥವನ್ನು ಕಲ್ಪಿಸಿ ಕೆಲವರು ಸಿದ್ಧಾಂತ ಮಾಡಿರುತ್ತಾರೆ. ಗೀತೆಯಲ್ಲಿನ "ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ"-ಎಂಬ ವಾಕ್ಯಕ್ಕೂ, ಕ್ಷೇತ್ರವನ್ನು ಪ್ರತ್ಯಕ್ಷವಾಗಿ ನೋಡುವವನು ನಾನೇ ಎಂದು ತಿಳಿ-ಎಂದು ವ್ಯಾಖ್ಯಾನಮಾಡುತ್ತಾರೆ. ಇದು ಸರ್ವಥಾ ಸಮಂಜಸವಾದುದಲ್ಲ. ಮಹಾವಾಕ್ಯಗಳ ಸಂದರ್ಭದಲ್ಲಿ ಬಾಧಾಯಾಂ ಸಾಮಾನಾಧಿಕರಣ್ಯವನ್ನೆ ಶ್ರೀಶಂಕರರು ಹೇಳಿದ್ದಾರೆ. ಭ್ರಾಂತಿಕಾಲದಲ್ಲಿ "ಸ್ಥಾಣು" ಎಂದು ಭ್ರಮಿಸಿದ್ದು, ಅನಂತರ ದೀಪದಿಂದ ನೋಡಿದಾಗ-ಈತನು ಪುರುಷ, ಸ್ಥಾಣುವಲ್ಲ ಎಂಬಂತೆ, ಈಶ್ವರನಿಗಿಂತ ಬೇರೆ ಎಂದು ತಿಳಿದ ಜೀವನು ತಾನು ಸಂಸಾರಿಯೆಂದು ತಿಳಿ ದಿದ್ದನು. ನೀನು ಸಂಸಾರಿಯೆಂದು ತಿಳಿದಿರುವೆ, ಆದರೆ ಹಾಗಿಲ್ಲ. ನೀನು ಸಂಸಾರಿ ಯಲ್ಲದ ಸಚ್ಚಿದಾನಂದ ರೂಪನಾದ ಪರಬ್ರಹ್ಮನೇ ಎಂದು ತಿಳಿ" ಎಂದು ಬೋಧಿಸು ವುದು ಸೂಕ್ತ. ಜೀವೇಶ್ವರ ಭೇದವು ಮೊದಲೇ ತಿಳಿದಿತ್ತು. ಅದು ಉಪಾಧಿ ಭೇದ ದಿಂದ (ಶರೀರ-ಇಂದ್ರಿಯ-ಬುದ್ಧಿ ಭೇದದಿಂದ) ಭಿನ್ನವೆಂದು ತಿಳಿಸಲಾಗಿತ್ತು. ಉಪಾಧಿ ಯನ್ನು ಬಿಟ್ಟು ಈಗ ಶುದ್ಧ ಸ್ವರೂಪವನ್ನು ಬೋಧಿಸಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿವರಣಾಚಾರ್ಯರ ಪ್ರಕ್ರಿಯೆಯಂತೆ ಐಕ್ಯವನ್ನೇ ಹೇಳುವ ಸಾಮಾನಾಧಿಕರಣ್ಯ ವೆಂದು ಹೇಳಿದರೂ ಬಾಧಕವಿಲ್ಲ. ಸೋಪಾಧಿಕ ಜೀವನಲ್ಲಿ ಅಂತಃಕರಣಾದಿ ಉಪಾಧಿ ಗಳನ್ನು ಬಿಟ್ಟು ಶುದ್ಧ ಚಿದಾತ್ಮನೂ, ಮಾಯೋಪಾಧಿಯನ್ನು ಬಿಟ್ಟು ಈಶ್ವರ ಚೇತನವೂ ಒಂದೇ ಎಂದು ತಿಳಿ ಎಂದರ್ಥ. ಈಗ ಮೊದಲಿದ್ದ ಜೀವೇಶ್ವರ ಭೇದ ಜ್ಞಾನವು ಹೋಗಿ ಅಥವಾ ಭ್ರಮೆ ನಿವೃತ್ತವಾಗಿ, "ಅಹಂ ಬ್ರಹ್ಮಾಸ್ಮಿ" ಎಂಬ ಸಾಕ್ಷಾತ್ಕಾರವಾಗುವುದು. ಇದೇ ಮೋಕ್ಷಕ್ಕೆ ಬೇಕಾದ ತತ್ತ್ವಜ್ಞಾನ ಅಥವಾ ಸಾತ್ತ್ವಿಕ ಸಮ್ಯಕ್ ಜ್ಞಾನ. ಭೇದ ಜ್ಞಾನವು ಬಂಧ ಜನಕ. ಅದು ಮಿಥ್ಯಾದರ್ಶನ ಎಂಬಂದು ನಿಶ್ಚಿತ. ಬ್ರಹ್ಮಾದಿಸ್ತಂಭಾಂತ ಸಮಸ್ತ ಶರೀರಗಳೆಂಬ ಕ್ಷೇತ್ರಗಳಲ್ಲಿ ಇರುವ ಜೀವಾತ್ಮನನ್ನು ಪರಮಾತ್ಮನೆಂದು ತತ್ತ್ವತಃ ತಿಳಿ ಎಂದು ಉಪದೇಶವು.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ—ಎಂಬ ನಾಲ್ಕು ವರ್ಣಗಳನ್ನು ಭಗವಂತನೇ ಸೃಷ್ಟಿಸಿದ್ದಾನೆ. ಪುರುಷಸೂಕ್ತ, ಬೃಹದಾರಣ್ಯಕೋಪನಿಷತ್ತು, ಮತ್ತು ಭಗವದ್ಗೀತೆಯಲ್ಲಿ ಸ್ಪಷ್ಟವಾಗಿ ಹೇಳಿರುವುದನ್ನು ನಾವು ನೋಡಬಹುದು.

ಬ್ರಾಹ್ಮಣೋಽಸ್ಯ ಮುಖಮಾಸೀತ್ । ಬಾಹೂರಾಜನ್ಯಃ ಕೃತಃ ।
ಊರೂತದಸ್ಯ ಯದ್ವೈಶ್ಯಃ । ಪದ್ಭ್ಯಾಂ ಶೂದ್ರೋ ಅಜಾಯತ ॥

ಪುರುಷಸೂಕ್ತ

ಚಾತುರ್ವರ್ಣ್ಯಂ ಮಯಾಸೃಷ್ಟಂ ಗುಣಕರ್ಮ ವಿಭಾಗಶಃ ॥

ಗೀತೆ

ಮೊದಲು ಹಿರಣ್ಯಗರ್ಭ, ವಿರಾಟ್‌ಪುರುಷನೆಂಬ ರೂಪವನ್ನು ಈಶ್ವರನು ತನ್ನ ಸಂಕಲ್ಪ ಮಾತ್ರದಿಂದ ಹೊಂದುತ್ತಾನೆ. "ತಸ್ಮಾದ್ವಿರಾಡಜಾಯತ"—ಎಂಬ ಶ್ರುತಿವಾಕ್ಯ ದಂತೆ, ವಿರಾಟ್‌ಪುರುಷನ ಮೂಲಕ ಈ ಜಾತಿಗಳು ಸೃಷ್ಟವಾದವು. ಏತಕ್ಕಾಗಿ ಎಂದರೆ ತಮ್ಮ ತಮ್ಮ ಶಾಸ್ತ್ರೋಕ್ತ ಕರ್ಮಗಳನ್ನು ಆಚರಿಸುವುದಕ್ಕಾಗಿ. ಅದರಲ್ಲೂ ಸತ್ವ ರಜಸ್ ಮತ್ತು ತಮಸ್ಸೆಂಬ ಗುಣಗಳು ಹೆಚ್ಚು ಕಡಿಮೆಯಾಗುವುದರಿಂದ ಈ ಜಾತಿ ಭೇದಗಳು ಆಗಿವೆ.

ಜನ್ಮದಿಂದಲೇ ಬ್ರಾಹ್ಮಣಾದಿ ಜಾತಿಗಳಾಗಿ, ಅನಂತರ ಅವರ ಕರ್ಮದಿಂದ ಬ್ರಾಹ್ಮಣ್ಯ, ಕ್ಷತ್ರಿಯ, ವೈಶ್ಯ—ಎಂಬ ದ್ವಿಜತ್ವವು ಪ್ರಾಪ್ತವಾಗುತ್ತದೆ. ದ್ವಿಜ ಎಂದರೆ ಎರಡು ಜನ್ಮವುಳ್ಳವನು. ದ್ವಿತೀಯ ಜನ್ಮವು ಉಪನಯನವಾದ ನಂತರ ಈ ಮೂರು ಜನರಿಗೂ ಸಿದ್ಧವಾಗುತ್ತದೆ.

ಏಷ ಪ್ರೋಕ್ತೋ ದ್ವಿಜಾತೀನಾಂ ಚೌಪನಾಯನಿಕೋ ವಿಧಿಃ ।
ಉತ್ಪತ್ತಿವ್ಯಂಜಕಂ ಪುಣ್ಯಕರ್ಮಯೋಗಂ ನಿಬೋಧತ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬ ಮನುವಿನ ವಾಕ್ಯವೂ ಇದನ್ನು ಸ್ಪಷ್ಟಪಡಿಸುತ್ತದೆ. ಹುಟ್ಟಿನಲ್ಲಿಯೇ ಜಾತಿಯು ನಿಶ್ಚಿತ. ಅನಂತರ ಉಪನಯನ ಮೂಲಕವಾದ ಕರ್ಮದಿಂದ ದ್ವಿಜತ್ವವೆಂದು ಹೇಳಬೇಕು. ಹಾಗಿಲ್ಲವಾದರೆ, ವಿಶ್ವಾಮಿತ್ರರು ಕ್ಷತ್ರಿಯರಾಗಿದ್ದು, ಅನಂತರ ತಪಸ್ಸಿನಿಂದ ಬ್ರಾಹ್ಮಣರೆಂಬುದೂ, ಹಾಗೇ ಪರಶುರಾಮನು ಬ್ರಾಹ್ಮಣನಾಗಿ, ಅನಂತರ ಕ್ಷಾತ್ರ ಕರ್ಮ ಮಾಡಿ, ಪುನಃ ಬ್ರಾಹ್ಮಣನೇ ಆಗಿ ಉಳಿದ ಕಥೆಯು ನಿರಾಧಾರ ಹಾಗೂ ಅಸಮರ್ಥನೀಯವಾಗುವುದು.

ಸತ್ವಾದಿ ಗುಣಗಳ ತಾರತಮ್ಯಂದ ಮೊದಲು ನಾಲ್ಕು ಜಾತಿಗಳ ಸೃಷ್ಟಿಯಾಗುತ್ತದೆ. ಅನಂತರ ಕಾಲಕ್ರಮದಲ್ಲಿ ಜಾತಿ ಸಾಂಕರ್ಯವುಂಟಾಗುತ್ತದೆ. ಸತ್ವ ಗುಣವು ಅಧಿಕವಾಗಿದ್ದರೆ ಬ್ರಾಹ್ಮಣನಾಗಿಯೂ, ರಜೋಗುಣ ಹೆಚ್ಚಾಗಿದ್ದರೆ, ಕ್ಷತ್ರಿಯನಾಗಿಯೂ, ತಮೋಗುಣ ಹೆಚ್ಚಾಗಿದ್ದರೆ ವೈಶ್ಯನಾಗಿಯೂ, ಅತಿ ಅಧಿಕ ತಮೋಗುಣವಿದ್ದರೆ ಶೂದ್ರನಾಗಿ ಹುಟ್ಟುವನು. ಜಾತ್ಯಾವಿದುರನು ಶೂದ್ರನಾಗಿದ್ದರೂ, ತತ್ತ್ವಜ್ಞಾನಿಯಾಗಿ ಹೆಚ್ಚು ಸತ್ವಗುಣವುಳ್ಳವನಾಗಿದ್ದನು. ಕಾರಣವೇನೆಂದರೆ, ಹಿಂದಿನ ಜನ್ಮದಲ್ಲಿ ಯಮದೇವತೆಯು ಅಣಿಮಾಂಡವ್ಯ ಋಷಿಯ ಶಾಪದಿಂದ ಈ ಜನ್ಮವೆತ್ತಬೇಕಾಯಿತು. ಇದೊಂದು ಪ್ರಾರಬ್ಧ ಕರ್ಮಶೇಷದಿಂದ ಉಂಟಾದ ಹುಟ್ಟು.

ಸತ್ವಗುಣವೇ ಮುಖ್ಯವಾಗಿರುವುದು ಬ್ರಾಹ್ಮಣ ಜಾತಿ ; ಸತ್ವರಜೋಗುಣಗಳಲ್ಲಿ, ರಜೋಗುಣ ಅಧಿಕವಾಗಿರುವುದು ಕ್ಷತ್ರಿಯ ಜಾತಿ; ಸತ್ವ-ರಜಸ್ಸು-ತಮೋಗುಣಗಳಲ್ಲಿ ರಜೋಗುಣವು ಅಧಿಕವಾಗಿದ್ದರೆ ವೈಶ್ಯ ಜಾತಿ ; ರಜಸ್ಸು-ತಮೋಗುಣಗಳಲ್ಲಿ ತಮಸ್ಸು ಅಧಿಕವಾಗಿದ್ದರೆ ಶೂದ್ರ ಜಾತಿ—ಈ ರೀತಿಯಾಗಿ ಮೊದಲೇ ಸೃಷ್ಟಿಯಾಗುವುದು. ಮೊದಲನೆಯದಕ್ಕೆ ಶಮ, ದಮ, ಅಹಿಂಸಾದಿ ಗುಣಗಳೂ, ಎರಡನೆಯದಕ್ಕೆ ಶೌರ್ಯ, ಧೈರ್ಯ, ತೇಜಸ್ಸುಗಳೂ, ಮೂರನೆಯದಕ್ಕೆ ಕೃಷಿ, ವಾಣಿಜ್ಯ, ಗೋರಕ್ಷಣೆ, ಮುಂತಾದುವೂ, ನಾಲ್ಕನೆಯದಕ್ಕೆ ಶುಶ್ರೂಷೆ ಪರರ ಸೇವೆ, ಮುಂತಾದುವು ಸಹಜವಾಗಿಯೇ ಇರುತ್ತವೆ. ಪೂರ್ವಜನ್ಮದ ಕರ್ಮಾನುಸಾರವಾಗಿಯೇ ಹುಟ್ಟುವುದು—

ರಮಣೀಯ ಚರಣಾಃ ರಮಣೀಯಾಂ ಯೋನಿಮಾಪದ್ಯೇರನ್ ।
ಬ್ರಾಹ್ಮಣಯೋನಿಂ ವಾ ಕ್ಷತ್ರಿಯಯೋನಿಂ ವಾ ವೈಶ್ಯಯೋನಿಂ ವಾ ।
ಕಪೂಯ ಚರಣಾಃ ಕಪೂಯಯೋನಿಂ ವಾ ಶ್ವಯೋನಿಂ ವಾ ।
ಸೂಕರಯೋನಿಂವಾ ಚಂಡಾಲ ಯೋನಿಂವಾ ॥

ಇತ್ಯಾದಿ ಶ್ರುತಿಗಳು ಇದಕ್ಕೆ ಪ್ರಮಾಣ.

ಮಾಂಹಿಪಾರ್ಥ ವ್ಯಪಾಶ್ರಿತ್ಯ ಯೇಽಪಿಸ್ಯುಃ ಪಾಪಯೋನಯಃ ।
ಸ್ತ್ರೀಯಃ ವೈಶ್ಯಾಸ್ತಥಾ ಶೂದ್ರಾಃ ತೇಽಪಿಯಾಂತಿ ಪರಾಂ ಗತಿಮ್ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಗೀತೆಯಲ್ಲಿ ಬರುತ್ತದೆ. ಹೀಗೆಯೇ ಶ್ರುತಿಯನ್ನನುಸರಿಸಿ ಮನ್ವಾದಿ ಸ್ಮೃತಿಗಳು ಬಂದಿವೆ.

ಕರ್ಮಾಚರಣೆಯಿಂದ ವರ್ಣಭೇದವಾಯಿತೆಂದು ಈಚಿನವರು ಹೇಳುವುದು ಶಾಸ್ತ್ರಸಮ್ಮತವಲ್ಲ. ಮೊದಲು ಜಾತಿಯ ವ್ಯವಸ್ಥೆಯೇ ಇಲ್ಲದಿದ್ದಲ್ಲಿ, ಶಾಸ್ತ್ರೋಕ್ತ ಕರ್ಮಗಳನ್ನು ಆರಂಭ ಮಾಡುವುದಾದರೂ ಹೇಗೆ ? ಆದ್ದರಿಂದ ಇವರು ಹೇಳುವುದು ವೇದ, ಸ್ಮೃತಿ, ಭಾರತ—ಮುಂತಾದುವುಗಳಿಗೆ ವಿರುದ್ಧ ಮಾತ್ರವಲ್ಲದೆ, ಕರ್ಮಾಚರಣೆಯಲ್ಲಿ ಅವ್ಯವಸ್ಥೆಯುಂಟಾಗುವುದು. ಸನಾತನ ಧರ್ಮವನ್ನು ಅನುಸರಿಸುವವರು ಶಾಸ್ತ್ರದಲ್ಲಿ ಹೇಳಿರುವಂತೆ ಆಚರಿಸಬೇಕು. ವರ್ಣಸಂಕರವು ಸರ್ವಥಾ ಶ್ರೇಯಸ್ಕರವಲ್ಲ.

ಸ್ವೇ ಸ್ವೇ ಕರ್ಮಣ್ಯಭಿರತಃ ಸಂಸಿದ್ಧಿಂ ಲಭತೇನರಃ ।

ತನ್ನ ತನ್ನ ವರ್ಣ ಮತ್ತು ಆಶ್ರಮಗಳಿಗೆ ಹೇಳಿರುವುದನ್ನು ನಿಷ್ಠೆಯಿಂದ ಆಚರಿಸುವವನು ಜ್ಞಾನ ಮತ್ತು ಮುಕ್ತಿಯನ್ನು ಹೊಂದುವನೆಂದು ಗೀತೆಯು ಸ್ಪಷ್ಟವಾಗಿ ಹೇಳಿದೆ.

ಈ ಚಾತುರ್ವರ್ಣ್ಯದ ವ್ಯವಸ್ಥೆಯು ಭಾರತದಲ್ಲಿ ಮಾತ್ರ, ಇತರ ದೇಶ ಏಕೆ ಇಲ್ಲ?– ಎಂದರೆ, ವೇದಾಧ್ಯಯನ, ರಾಮಾಯಣ ಭಾರತಾದಗಳು ಈ ದೇಶದಲ್ಲಿ ಆವಿರ್ಭವಿಸಿರುವುದರಿಂದ.

ಆರ್ಯಾವರ್ತಃ ಪುಣ್ಯಭೂಮಿಃ, ಮಧ್ಯಂ ವಿಂಧ್ಯ ಹಿಮಾಲಯೋಃ॥

ಭಾರತವೇ ಪುಣ್ಯಭೂಮಿಯೆಂದು ಮನುವು ಹೇಳಿದ್ದಾನೆ.

ಸರಸ್ವತೀ ದೃಷದ್ವತ್ಯೋಃ ದೇವನದ್ಯೋರ್ಯದನ್ತರಂ ॥
ತಂದೇವನಿರ್ಮಿತಂ ದೇಶಂ ಬ್ರಹ್ಮಾವರ್ತಂ ಪ್ರಚಕ್ಷತೇ ॥

ಎಂದು ಮನುವು ಹೇಳುತ್ತಾನೆ.

ಆಸಮುದ್ರಾತ್ತು ವೈಪೂರ್ವಾದಾಸಮುದ್ರಾತ್ತು ಪಶ್ಚಿಮಾತ್ ।
ತಯೋಃರೇವಾಂತರಂ ಗಿರ್ಯೋರಾರ್ಯಾವರ್ತಂ ವಿಧುರ್ಬುಧಾಃ ॥

ಅಲ್ಲದೆ ಕುರುಕ್ಷೇತ್ರ, ಮತ್ಸ್ಯ, ಪಾಂಚಾಲ, ಶೂರಸೇನ-ಈ ಪ್ರದೇಶಗಳು ಬ್ರಹ್ಮರ್ಷಿ ದೇಶನೆಂದು ಇದೂ ಸಹ ಬ್ರಹ್ಮಾವರ್ತ ದೇಶವೇ–ಎಂದು ಮನುವು ಹೇಳುವನು.

ಸ್ವಾಭಾವಿಕವಾಗಿ ಜಿಂಕೆಗಳು ಹುಟ್ಟಿ ಓಡಾಡುವ ಪ್ರದೇಶವು ಯಜ್ಞಗಳಿಗೆ ವೈದಿಕ ಕರ್ಮಗಳಿಗೆ ಪುಣ್ಯಕ್ಷೇತ್ರವೆಂದೂ ಹೇಳಿರುತ್ತಾನೆ. ಇದಕ್ಕೆ ವಿರುದ್ಧವಾಗಿರುವ ದೇಶವು ಮ್ಲೇಚ್ಛದೇಶನೆಂದು ಕರೆಯುತ್ತಾರೆ. ಸರಸ್ವತೀ ನದಿಯು ಅದೃಶ್ಯವಾಗಿರುವ ಪ್ರದೇಶಕ್ಕೆ ಪೂರ್ವದಲ್ಲೂ, ಪ್ರಯಾಗಕ್ಕೆ ಪಶ್ಚಿಮದಲ್ಲೂ, ಹಿಮವತ್–ವಿಂಧ್ಯಗಳ ನಡುವೆ ಇರುವ ದೇಶಕ್ಕೆ ಮಧ್ಯದೇಶವೆಂದು ಹೆಸರು. ಇಲ್ಲೇ ಆರ್ಯರು ಇದ್ದುದರಿಂದ ಇದಕ್ಕೆ ಆರ್ಯಾವರ್ತವೆಂದು ಹೆಸರು. ನಾಲ್ಕು ವರ್ಣದವರೂ ಆರ್ಯರು. ಇವರು ಹೊರಗಿನಿಂದ ಬಂದವರಲ್ಲ. ಆದುದರಿಂದ ವರ್ಣ ಧರ್ಮಗಳು, ಆಶ್ರಮಧರ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳು ವ್ಯವಸ್ಥಿತವಾಗಿ ಕರ್ಮಾನುಷ್ಠಾನಕ್ಕೆ ಯೋಗ್ಯವಾಗಿ ಹುಟ್ಟಿಕೊಂಡವು. ಈ ಜಾತಿಗಳನ್ನು ಧರ್ಮಗಳನ್ನು ಸೃಷ್ಟಿಸಿದವನು ಭಗನಂತನೇ-ಎಂಬುದು ಗೀತೆಯು ಸ್ಪಷ್ಟವಾಗಿ ತಿಳಿಸುತ್ತದೆ.

ಪರಮ ಮುಕ್ತಿಯ ಸ್ವರೂಪ

"ಜ್ಞೇಯಂ ಯತ್ ತತ್ ಪ್ರವಕ್ಷ್ಯಾಮಿ ಯಜ್ಜ್ಞಾತ್ವಾಽಮೃತಮಶ್ನುತೇ॥"
"ಅನಾದಿಮತ್ ಪರಂಬ್ರಹ್ಮ ನಸತ್ತನ್ನಾಸದುಚ್ಯತೇ"

(ಅ. ೧೩ ; ಶ್ಲೋ. ೧೧-೧೨)

ಎಂಬ ಈ ಗೀತಾಶ್ಲೋಕಗಳಲ್ಲಿ ಮುಮುಕ್ಷುಗಳು ತಿಳಿಯಬೇಕಾದ ನಿರ್ಗುಣ, ನಿರ್ವಿಶೇಷ, ನಿರಾಕಾರ, ಕೇವಲ ಸಚ್ಚಿದಾನಂದರೂಪವಾದ ಪರಬ್ರಹ್ಮವನ್ನು ಸಾಕ್ಷಾತ್ತಾಗಿ ತನ್ನ ಆತ್ಮ ಸ್ವರೂಪವೇ ಎಂದು ಅನುಭವರೂಪವಾದ ಜ್ಞಾನವನ್ನು ಹೊಂದಿದ ಮರುಕ್ಷಣವೇ ಅಮೃತತ್ವವನ್ನು (ಮೋಕ್ಷವನ್ನು) ಹೊಂದುತ್ತಾನೆಂದು ಹೇಳಿದೆ. "ನ ಸತ್ತನ್ನಾಸದುಚ್ಯತೇ"-ಎಂಬಲ್ಲಿ ವಾಚಾಮಗೋಚರವಾದ ಮತ್ತು ಮನಸ್ಸಿಗೂ ಅಗೋಚರವಾದ ಪರಬ್ರಹ್ಮತತ್ವವನ್ನೇ ಹೇಳಲಾಗಿದೆ. 13ನೇ ಅಧ್ಯಾಯದಲ್ಲಿ "ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷುಭಾರತ" ಎಂದು ಉಪದೇಶಿಸಿರುವಂತೆ, ಸಮಸ್ತ ಬ್ರಹ್ಮಾದಿ ಕ್ರಿಮಿ ಕೀಟಪರ್ಯಂತ ಇರುವ ಶರೀರಗಳಲ್ಲಿ ನೆಲಸಿದ ಆತ್ಮನನ್ನು ಶುದ್ಧ ಪರಬ್ರಹ್ಮ ಪರಮಾತ್ಮನೇ ಎಂದು ಒಂದಾಗಿ ತಿಳಿದರೆ, ಈ ಮುಕ್ತಿಯು ಲಭಿಸುವುದು.

ಮೋಕ್ಷ ಎಂದರೆ, ತತ್ತ್ವಜ್ಞಾನವಿಲ್ಲದಿರುವಾಗ ಪರಬ್ರಹ್ಮಸ್ವರೂಪವಾದ ತನ್ನ ನಿಜತತ್ತ್ವದ ಅಜ್ಞಾನದಿಂದ, ದೇಹೇಂದ್ರಿಯಾದಿಗಳಲ್ಲಿರುವ ಆತ್ಮಭ್ರಾಂತಿ, ಪುತ್ರಕಳತ್ರಾದಿಗಳಲ್ಲಿರುವ ಮಮತಾಭ್ರಮೆ, ಇವುಗಳಿಂದ ಆಗುವ ಸಕಲ ಸಂಸಾರ ದುಃಖಗಳೂ ತತ್ವಜ್ಞಾನದಿಂದ ನಿವೃತ್ತವಾಗಿ, ಕೇವಲ ಶುದ್ಧ ಸಚ್ಚಿದಾನಂದ ಸ್ವರೂಪವಾದ ಪರಬ್ರಹ್ಮ ಸ್ವರೂಪಲಾಭವೇ ಮುಕ್ತಿ-"ಬ್ರಹ್ಮವಿದಾಪ್ನೋತಿಪರಂ", ಬ್ರಹ್ಮವಿತ್ ಬ್ರಹ್ಮೈವಭವತಿ" ಎಂದು ಉಪನಿಷತ್ತು ಸ್ಪಷ್ಟವಾಗಿ ತಿಳಿಸುತ್ತವೆ. "ಬ್ರಹ್ಮಭೂಯಾಯ ಕಲ್ಪತೇ", "ಮದ್‌ಭಾವಂ ಸೋಽಧಿಗಚ್ಛತಿ".

"ಭಕ್ತ್ಯಾಮಾಮಭಿಜಾನಂತಿ ಯಾವಾನ್ ಯಶ್ಚಾಸ್ಮಿ ತತ್ತ್ವತಃ।
ತತೋ ಮಾಂ ತತ್ತ್ವತೋ ಜ್ಞಾತ್ವಾ ವಿಶತೇ ತದನಂತರಮ್॥"

ಎಂಬ ಗೀತಾವಾಕ್ಯಗಳೂ ಇದನ್ನೇ ತಿಳಿಸುತ್ತವೆ. "ಭಕ್ತ್ಯಾಮಾಮಭಿಜಾನಂತಿ" ಎಂಬ ಶ್ಲೋಕಕ್ಕೆ ಶಾಂಕರಭಾಷ್ಯದಂತೆ ಅರ್ಥಮಾಡಬೇಕು. ಅರ್ಥ-"ಜ್ಞಾನರೂಪವಾದ ಭಕ್ತಿಯಿಂದ, ಸಮಸ್ತ ಭೇದಗಳಿಂದ ದೂರವಿರುವ ಅಂದರೆ ಯಾವ ಭೇದವೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಇಲ್ಲದ ಏಕಮೇವ ಅದ್ವಿತೀಯವಾದ, ಅಜರಾಮರವಾದ, ಕೇವಲ ಸಚ್ಚಿದಾನಂದರೂಪ ಪರಬ್ರಹ್ಮವೇ ಆದ ಭಗವಂತನ ನಿಜಸ್ವರೂಪವನ್ನು ತತ್ತ್ವತಃ ತಿಳಿದೊಡನೆ ಆ ತತ್ವದಲ್ಲಿ ಸೇರಿ ಏಕವಾಗುವನು"–ಎಂದರ್ಥ. ಇಲ್ಲಿ ತತ್ವಜ್ಞಾನ ಬೇರೆ, ಪ್ರವೇಶ ಬೇರೆ ಎಂದು ಅರ್ಥಮಾಡಕೂಡದು. ಜೀವಾತ್ಮನು ತತ್ತ್ವತಃ ವ್ಯಾಪಕನಾಗಿರುವುದರಿಂದಲೂ, ಶುದ್ಧ ಪ್ರತ್ಯಗಾತ್ಮನೂ ಬ್ರಹ್ಮವೂ ಒಂದೇ ಆಗಿರುವಾಗ, ತಿಳಿದು ಅನಂತರ ಪ್ರವೇಶಿಸುವ ನೆಂಬ ಅರ್ಥವು ಸರಿಯಲ್ಲ.

"ಜ್ಞಾನೀತ್ವಾತ್ಮೈವ ಮೇ ಮತಮ್"–ಎಂಬ ಭಗವಂತನ ವಚನದಂತೆ, ಜ್ಞಾನಿಗೂ ಪರಮಾತ್ಮನಿಗೂ ಭೇಧವಿರುವುದಿಲ್ಲ. ಅಜ್ಞಾನದ ದೆಸೆಯಲ್ಲಿ ತನಗೂ ಪರಬ್ರಹ್ಮನಿಗೂ ಭೇದ ಬುದ್ಧಿಯಿದ್ಧರೂ, ತತ್ವೋಪದೇಶವಾದ ನಂತರ ಬರುವ ಪರ ಬ್ರಹ್ಮ ಸ್ವರೂಪಾನುಭವದಿಂದ ಭೇದವು ಉಳಿಯುವುದಿಲ್ಲ. ಜೀವೇಶ್ವರರ ಭೇದಜ್ಞಾನ ದಿಂದ ಮೋಕ್ಷವು ಲಭಿಸುವುದಿಲ್ಲ. ಪದೇಪದೇ ಜನನ ಮರಣಪ್ರವಾಹ ರೂಪವಾದ ಸಂಸಾರದಿಂದ, ಭೇದಜ್ಞಾನವಿರುವವನಿಗೆ, ಬಿಡುಗಡೆಯಾಗುವುದಿಲ್ಲ. "ವಾಸುದೇವಃ ಸರ್ವಮಿತಿ ಸ ಮಹಾತ್ಮಾಸುದುರ್ಲಭಃ"–ಇಡೀ ಜಗತ್ತು ಪರಮಾತ್ಮ ಸ್ವರೂಪವೇ ಅದನ್ನು ಬೇರೆ ಯಾವುದೂ ಇಲ್ಲನೆಂದು ತಿಳಿಯುವುದೇ ಜ್ಞಾನ. ಹೀಗೆ ತಿಳಿದವನೇ ಮಹಾತ್ಮ. ವೇದವ್ಯಾಸರು, ಶುಕರು, ವಾಮದೇವರು, ಶಕ್ತಿ, ಪರಾಶರರೇ ಮೊದ ಲಾದವರು ಈ ರೀತಿಯ ಜ್ಞಾನದಿಂದ ಎಲ್ಲೆಲ್ಲಿಯೂ ತನ್ನ ಆತ್ಮವನ್ನೇ ಪರಮಾತ್ಮ ಸ್ವರೂಪದಲ್ಲಿ ಕಂಡವರು. ಪರಮ ಮುಕ್ತಿಯು ಭೇದಜ್ಞಾನದಿಂದ ಲಭಿಸುವುದಿಲ್ಲ." ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ–ಪರಮಾತ್ಮನಲ್ಲಿ ವಾಸ್ತವವಾಗಿ ಜೀವೇಶ್ವರ ಭೇದವಾಗಲೀ, ಇತರ ಭೇದವಾಗಲೀ ಇರುವುದಿಲ್ಲ. ಇದ್ದಂತೆ ಕಂಡರೆ ಮೇಲೆ ಮೇಲೆ ಜನ್ಮವನ್ನೆತ್ತಿ ಪದೇಪದೇ ಸಂಸಾರದಲ್ಲಿ ಸಾವನ್ನು ಕಾಣುವನೆಂದು ವೇದವು ತಿಳಿಸುತ್ತದೆ.

ಭೇದ ಜ್ಞಾನದಿಂದ ಭಯವು ಎಂದೆಂದಿಗೂ ತಪ್ಪುವುದಿಲ್ಲ. "ದ್ವಿತೀಯಾದ್ವೈ ಭಯಂ ಭವತಿ"—ಎರಡನೆಯದು ಇರುವುದಾದರೆ ಭಯವು ಉಂಟಾಗುತ್ತದೆ. ಎಂದು ಶ್ರುತಿಯ ವಚನ. ಅದ್ವಿತೀಯವಾದ ತನ್ನ ಆತ್ಮ ಸ್ವರೂಪವನ್ನು ಕಂಡಾಗ ನಿರ್ಭಯ ವಾಗಿರಬಹುದು. ಜನಕನು ಯಾಜ್ಞವಲ್ಕ್ಯನ ಉಪದೇಶದಿಂದ ಅಭಯಸ್ಥಾನವಾದ ಪರಬ್ರಹ್ಮವನ್ನು ಆಕ್ಷಣವೇ ಸಾಕ್ಷಾತ್ಕರಿಸಿಕೊಂಡನೆಂದು ಹೇಳಿದೆ. ಉಪನಿಷತ್ತುಗಳಿಗೆ ಹೊಂದಿ ಬರುವ ಅರ್ಥವೇ ಗೀತೆಯಲ್ಲಿರುವಾಗ, ಅದ್ವಿತೀಯ ಆತ್ಮಸ್ವರೂಪವಾದ ಪರ ಬ್ರಹ್ಮ ಜ್ಞಾನದಿಂದಲೇ ಮುಕ್ತಿಯೆಂದೂ, ಇದು ಬಂದ ಮೇಲೆ ಪುನರ್ಜನ್ಮವನ್ನು ಹೊಂದುವುದಿಲ್ಲವೆಂದೂ—"ನ ಸ ಪುನರಾವರ್ತತೇ"—ಎಂಬುದೇ ಸಿದ್ಧಾಂತ. ಇದೇ ಗೀತಾಶಾಸ್ತ್ರಾರ್ಥವೆಂದು ತಿಳಿಯಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

"ಜ್ಞಾನೀತ್ವಾತ್ಮೈವ ಮೇಮತಮ್"—ಎಂಬ ಗೀತಾವಾಕ್ಯದಿಂದ ಜ್ಞಾನಿಗೂ ಪರಮಾತ್ಮನಿಗೂ ಭೇದವಿಲ್ಲ ಎಂದು ತಿಳಿದುಬರುವುದು. ಇದು "ಬ್ರಹ್ಮವಿತ್ ಬ್ರಹ್ಮೈವ ಭವತಿ' ಎಂಬ ಉಪನಿಷತ್ತಿನ ವಾಕ್ಯಕ್ಕೂ ಹೊಂದಿಕೊಂಡಿದೆ. "ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ," "ಬ್ರಹ್ಮವೇದ ಬ್ರಹ್ಮೈವ ಭವತಿ" ಎಂಬ ಉಪನಿಷತ್ತಿನ ವಾಕ್ಯಗಳಿಗೆ ಹೊಂದಿಕೊಂಡಿದೆ. "ತಸ್ಮಾತ್ ತತ್ ಸರ್ವಮಭವತ್" ಎಂದು ಹೇಳುವ ಸರ್ವಸ್ವರೂಪವನ್ನು ಹೊಂದುವನೆಂದು "ಸರ್ವಭಾವೇನ ಭಾರತ" ಎಂಬ ಗೀತಾವಾಕ ದಿಂದ ಸ್ಪಷ್ಟವಾಗಿದೆ.

ಜೀವಾತ್ಮನಿಗೆ ಮೊದಲೇ ಇದ್ದ ಸಚ್ಚಿದಾನಂದ ಸ್ವರೂಪವನ್ನು ಕಾಣುವುದೇ ಮುಕ್ತಿ, ಪರಮ ಮುಕ್ತಿ. ಸಂಸಾರಿಯಾಗಿದ್ದಾಗ ಅಜ್ಞಾನವೆಂಬ ಮಾಯೆಯಿಂದ ತನ್ನ ನಿಜಸ್ವರೂಪವಾದ ಪರಬ್ರಹ್ಮ ಮುಚ್ಚಿಹೋಗಿದ್ದಿತು. ಅದರಿಂದ ಭೇದಭಾವವೂ ಸಂಸಾರದ ದುಃಖವೂ ಇದ್ದಿತು. ತತ್ತ್ವಜ್ಞಾನದಿಂದ ಅಜ್ಞಾನದ ನಿವೃತ್ತಿಯಾದ ಕೂಡಲೇ ಇದ್ದ ನಿಜಸ್ವರೂಪವೇ ಕಾಣಿಸುವುದಷ್ಟೆ. ಹೊಸದಾಗಿ ಬರುವ ರೂಪವಲ್ಲ ಇದು. "ನಾಹಂ ಪ್ರಕಾಶಃ ಸರ್ವಸ್ಯ ಯೋಗಮಾಯಾ ಸಮಾವೃತಃ"—ಎಂಬು ಗೀತೆಯು ಅಘಟಿತಘಟನೆಯನ್ನುಂಟುಮಾಡುವ ಮಾಯೆಯಿಂದ ಸಂಸಾರಿಗೆ ಕಾಣಿಸುವುದಿಲ್ಲ, ಜ್ಞಾನಯೋಗಿಗೆ ಮಾತ್ರ ಕಾಣಿಸುವುದೆಂದು ಇದರ ಅಭಿಪ್ರಾಯ.

"ವಿಮುಚ್ಯನಿರ್ಮಮಃ ಶಾನ್ತೋ ಬ್ರಹ್ಮಭೂಯಾಯ ಕಲ್ಪತೇ ।
ಬ್ರಹ್ಮಭೂತಃ ಪ್ರಸನ್ನಾತ್ಮಾ ನ ಶೋಚತಿ ನ ಕಾಂಕ್ಷತಿ ॥"
(೧೮–೧೮ ಶ್ಲೋ : ೫೩–೫೪)

ಹಿಂದೆ ತಿಳಿಸಿದಂತೆಯೇ ವಾಚಾತೀತವಾದ ಅನಾದಿಸಿದ್ಧವಾದ ಶುದ್ಧ ಪರಬ್ರಹ್ಮವನ್ನು ತಿಳಿದರೆ ಬರುವ ಮುಕ್ತಿಯೇ ಪರಮ ಮುಕ್ತಿ, ಅಂದರೆ ಪರಬ್ರಹ್ಮ ಸ್ವರೂಪದ ಲಾಭ. ಜ್ಞಾನ ಬಂದ ನಂತರ, ಇಲ್ಲಿ ಜೀವಂತವಾಗಿರುವಾಗಲೇ ಆಗುವ ಮುಕ್ತಿಯಿದು. ತನ್ನ ಆತ್ಮನನ್ನು ಬ್ರಹ್ಮಸ್ವರೂಪದಲ್ಲಿ ಎಲ್ಲಾ ಜೀವಜಂತುಗಳಲ್ಲಿ ಒಂದಾಗಿ ಕಾಣುತ್ತಾನೆ. "ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ ಸರ್ವಕ್ಷೇತ್ರೇಷು ಭಾರತ"—ಎಂದು ಉಪದೇಶ ಮಾಡಿರುವಂತೆಯೇ ಕಾಣುವನು.

"ಯದಾ ಭೂತಪೃಥಗ್ ಭಾವಮೇಕಸ್ಥಮನಪಶ್ಯತಿ
ತತ ಏವ ಚ ವಿಸ್ತಾರಂ ಬ್ರಹ್ಮ ಸಂಪದ್ಯತೇತದಾ ॥"—

ಯಾವಾಗ ಸಾಧಕನು ಪ್ರಾಣಿಗಳ ಭೇದವನ್ನು ತೊಡೆದು ಒಂದೇ ಒಂದಿರುವ ಪರಮಾತ್ಮನಲ್ಲಿ ಒಂದಾಗಿ ಕಾಣುವನೋ ಆಗಲೇ ವಿಸ್ತಾರವಾಗಿ ವ್ಯಾಪಕವಾಗಿ ಎಲ್ಲೆಲ್ಲಿಯೂ ಇರುವ ಬ್ರಹ್ಮಸ್ವರೂಪವನ್ನೇ ಹೊಂದುವನೆಂದು ಅರ್ಥ

Sri Vidyabharathi Book Centre, Sringeri

CC-O. In Public Domain. Digitized by eGangotri

ಉಪಾಸನೆಗಳಿಂದ ಬರುವ ಸಾಮೀಪ್ಯ, ಸಾರೂಪ್ಯ, ಸಾಲೋಕ್ಯ, ಸಾರ್ಷ್ಟಿ— ಮುಂತಾದುವು ನಿಜವಾದ ಮುಕ್ತಿಗಳಲ್ಲ. ಇದರಲ್ಲಿ ಜೀವೇಶ್ವರರಿಗೆ ಭೇದ ಜ್ಞಾನವಿದ್ದೇ ಇರುವುದು. ಆದರೆ, ಮುಕ್ತಿಯಂತೆ ಹೆಚ್ಚು ಆನಂದವನ್ನು ಅನುಭವಿಸುವುದಕ್ಕೆ ಸಾಧ್ಯವಾದ ಪದವಿಗಳು. ಗೀತೆಯಲ್ಲಿ ಇವುಗಳ ಹೆಸರನ್ನೇ ಹೇಳಿಲ್ಲ. ಪರಬ್ರಹ್ಮಭಾವ (ನಿರ್ಗುಣವಾದ) ಪರಬ್ರಹ್ಮಸ್ವರೂಪ ಲಾಭವೇ ಮುಕ್ತಿಯೆಂದು ಗೀತೆಯಲ್ಲಿ ಹೇಳಿದ ಪರಮ ಮುಕ್ತಿಯು. "ಬ್ರಹ್ಮಭೂಯಾಯ ಕಲ್ಪತೇ", "ಬ್ರಹ್ಮಭೂತಃ", "ಮದ್ಭಾವಂ ಸೋಽಧಿಗಚ್ಛತಿ"—ಇತ್ಯಾದಿ ಸ್ಥಳಗಳಲ್ಲಿ ಶುದ್ಧ ಬ್ರಹ್ಮಸ್ವರೂಪ ಪ್ರಾಪ್ತಿಯನ್ನೇ ಮುಕ್ತನಿಗೆ ಹೇಳಿರುವುದನ್ನು ಗಮನಿಸಬೇಕು. ಮಯಿಭಾವಃ = ಮದ್ಭಾವಃ– ಎಂದು ಕೆಲವು ಆಚಾರ್ಯರು ವ್ಯಾಖ್ಯಾನಿಸಿರುವುದು—"ಬ್ರಹ್ಮಭೂಯಾಯ", "ಬ್ರಹ್ಮಭೂತಃ"—ಎಂಬುದಕ್ಕೆ ವಿರುದ್ಧವಾಗಿದೆ. ಮಮಭಾವಃ = ಮದ್ಭಾವಃ—ಎಂದು ಪರಬ್ರಹ್ಮನಾದ ನನ್ನ ಸ್ವರೂಪವನ್ನು ಹೊಂದುವನೆಂದು ವ್ಯಾಖ್ಯಾನ ಮಾಡುವುದೇ ಯುಕ್ತ.

"ಸಂಪದ್ಯಾವಿರ್ಭಾವಃ ಸ್ವೇನ ಶಬ್ದಾತ್" ಎಂಬ ಬ್ರಹ್ಮಸೂತ್ರದಲ್ಲಿ ಬ್ರಹ್ಮವೆಂಬ ಪರಂಜ್ಯೋತಿಯನ್ನು ಹೊಂದಿದವನು ಸ್ವಸ್ವರೂಪವನ್ನೇ ಕಂಡು ಪ್ರಕಾಶಿಸುವನೆಂದು ಸ್ಪಷ್ಟವಾಗಿ ಹೇಳಿದೆ. ಅಲ್ಲದೆ, "ಅವಿಭಾಗೋವಚನಾತ್"—ಎಂಬ ಸೂತ್ರದಲ್ಲಿ ಜೀವಾತ್ಮನಿಗೂ ಪರಬ್ರಹ್ಮನಿಗೂ ಮುಕ್ತಿಯಲ್ಲಿ ಭೇದವೇ ಇರದೆಂದೂ ತಿಳಿಸಿದೆ. ಭೇದವಾದಿಗಳ ಅಪವ್ಯಾಖ್ಯಾನವೂ ಎಂದಿಗೂ ಸಮಂಜಸವಾಗುವುದಿಲ್ಲ. ಅದರಂತೆ ಗೀತೆಯಲ್ಲೂ ಹೇಳಿದೆ ಎಂದು ತಿಳಿಯಬೇಕು.

ಮೇಲೆ ಹೇಳಿದ ಬ್ರಹ್ಮಸ್ವರೂಪ ಲಾಭವು ಹೊಸದಾಗಿ ಲಭಿಸುವ ರೂಪವಲ್ಲ ; ಮತ್ತೇನೆಂದರೆ, ಅನಾದಿಯಾಗಿದ್ದ ನಿಜಸ್ವರೂಪವು ತತ್ತ್ವಜ್ಞಾನದಿಂದ ಕಾಣಿಸಿಕೊಳ್ಳುವುದಷ್ಟೆ. "ಬ್ರಹ್ಮೈವ ಸನ್ ಬ್ರಹ್ಮಾಪ್ಯೇತಿ"—ಎಂಬ ಉಪನಿಷದ್ವಾಕ್ಯದಂತೆ, ಸಂಸಾರ ದೆಸೆಯಲ್ಲೂ ತಾನು ಬ್ರಹ್ಮವೇ ಆಗಿದ್ದು, ಅಜ್ಞಾನದಿಂದ ತನ್ನ ಸ್ವರೂಪವನ್ನು ಕಾಣದೆ, ವಿದ್ಯೆಯಿಂದ ಸಾಕ್ಷಾತ್ಕರಿಸಿಕೊಳ್ಳುವುದೇ ಪರಮ ಮುಕ್ತಿಯು. ಹೊಸದಾಗಿ ಬರುವ ರೂಪವಾದರೆ, ಅದು ನಿತ್ಯವಾಗಿರುವುದಿಲ್ಲ. ಮೋಕ್ಷವಾದಿಗಳಿಗೆ ಶಾಶ್ವತವಾದ ಎಂದೆಂದಿಗೂ ಅಳಿಯದ ರೂಪವೇ ಅಪೇಕ್ಷಿತ. ಯಾವುದು ಹೊಸದಾಗಿ ಹುಟ್ಟುವುದೋ ಅದು ಶಾಶ್ವತವಲ್ಲ. ನಮ್ಮ ಶರೀರವು ಪದೇ ಪದೇ ಬದಲಾಯಿಸುವುದಷ್ಟೆ. ಬಾಲ್ಯದಲ್ಲಿ ಕೃಶವಾಗಿ ಸಣ್ಣದಾಗಿದ್ದ ನಮ್ಮ ಶರೀರವು, ಪ್ರಾಯದಲ್ಲಿ ಎತ್ತರವಾಗಿ ದಪ್ಪವಾಗಿ ಬೆಳೆದುದನ್ನು ಕಂಡರೆ ಅದು ಹೊಸ ರೂಪ. ಅದು ವೃದ್ಧಾಪ್ಯದಲ್ಲಿ ನಿಲ್ಲುವುದಿಲ್ಲ, ಪುನಃ ಕೃಶವಾಗಿ ಸಾಯುವುದಷ್ಟೆ. "ಜಾತಸ್ಯ ಹಿ ಧ್ರುವೋಮೃತ್ಯುಃ"— ಎಂಬಂತೆ ಹೋಗಲೇಬೇಕು. ಕರ್ಮ ಅಥವಾ ಉಪಾಸನೆಯಿಂದ ಬರುವ ಹೊಸ ದಿವ್ಯ ರೂಪವು ಅನಿತ್ಯವೆಂಬುದು ನಿಶ್ಚಿತ. "ಕ್ಷೀಣೇಪುಣ್ಯೇ, ಮರ್ತ್ಯಲೋಕಂ ವಿಶಂತಿ".

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾಗ, ಯಜ್ಞ, ಹೋಮಾದಿ ಪುಣ್ಯಕಾರ್ಯಗಳಿಂದ ಸ್ವರ್ಗಲೋಕದಲ್ಲಿ ದಿವ್ಯ ದೇಹ ವನ್ನು ಪಡೆದವರೂ ಪುಣ್ಯ ಕ್ಷಯಿಸಿದೊಡನೆ ಪುನಃ ಮನುಷ್ಯ ಲೋಕದಲ್ಲಿ ಹುಟ್ಟುವ ರೆಂದು ಭಗವಂತನೇ ಹೇಳಿರುವನು. ಮಾನುಷ್ಯ ಲೋಕದಂತೆ ಸ್ವರ್ಗಲೋಕ, ಸತ್ಯ ಲೋಕ, ವೈಕುಂಠ, ಕೈಲಾಸಾದಿ ಲೋಕಗಳು ಲಭಿಸಿದರೂ ಅವು ಅನಿತ್ಯ. ಪುನಃ ಜನ್ಮವನ್ನೇ ಕೊಡುತ್ತವೆ. "ಆ ಬ್ರಹ್ಮ ಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ" ಎಂದು ಹೇಳಿರುವಂತೆ, ಪುನರಾವರ್ತಿ–ಪುನರ್ಜನ್ಮವನ್ನು ಕೊಡುವವು. ವೈಕುಂಠಕ್ಕೆ ಹೋದ ಜಯ–ವಿಜಯರು ಅವಧೂತರ ಶಾಪದಿಂದ, ಹಿರಣ್ಯಾಕ್ಷ–ಹಿರಣ್ಯಕಶಿಪು ರಾವಣ–ಕುಂಭಕರ್ಣ ಮತ್ತು ಶಿಶುಪಾಲ–ದಂತವಕ್ತ್ರರೆಂದು ಮೂರು ಜನ್ಮವನ್ನೆತ್ತಿದ ರೆಂದು ಪುರಾಣಗಳಲ್ಲಿ ಪ್ರಸಿದ್ಧವಾಗಿದೆ.

ಜ್ಞಾನದಿಂದ ಮುಕ್ತರಾದವರು ಪುನಃ ಹುಟ್ಟುವುದಿಲ್ಲ; ಏಕೆಂದರೆ ಪುನರ್ಜನ್ಮಕ್ಕೆ ಬೇಕಾದ ಕರ್ಮಗಳು ಭಸ್ಮವಾಗಿರುತ್ತವೆ—"ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇಽರ್ಜುನ"–ಎಂದು ಗೀತೆಯಲ್ಲಿ ಹೇಳಿರುವಂತೆ, ಜ್ಞಾನವೆಂಬ ಬೆಂಕಿಯು ಎಲ್ಲ ಕರ್ಮಗಳನ್ನೂ, ಕಾಷ್ಠವನ್ನು ಸುಟ್ಟು ಬೂದಿ ಮಾಡುವಂತೆ, ಬೂದಿಮಾಡುತ್ತದೆ. ಪುನಃ ಕರ್ಮಬೀಜಗಳು ಮೊಳೆಯದಂತೆ ಮಾಡುವುದೆಂದು ಗೊತ್ತಾಗುತ್ತದೆ. ಇದೇ ನಿತ್ಯಮುಕ್ತಿ. ಈ ಪರಬ್ರಹ್ಮತತ್ತ್ವವೇ ಮುಕ್ತರಿಗೆ ಪರಮೋತ್ಕೃಷ್ಟವಾದ ಗತಿ,— "ಮುಕ್ತಾನಾಂ ಪರಮಾಗತಿಃ", "ಪುರುಷಾನ್ನ ಪರಂ ಕಿಂಚಿತ್ ಸಾಕಾಷ್ಠಾ ಸಾ ಪರಾಗತಿಃ". ಈ ಪರಮಪುರುಷನೆಂಬ ಪರಮಾತ್ಮನೇ ಮುಕ್ತರಿಗೆ ಲಭಿಸುವ ಉತ್ಕೃಷ್ಟ ಗತಿಯು. ಪರಮಪುರುಷ, ಪುರುಷೋತ್ತಮ ಎಂಬುದಾಗಿ ಇದನ್ನೇ ಹೇಳಿರುವುದು.

ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತೇ ।
ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ॥
ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥

ಎಂದು 14ನೇ ಅಧ್ಯಾಯದಲ್ಲಿ ಹೇಳಿದೆ. ನಶಿಸುವ ಪ್ರಾಣಿಗಳು ಕ್ಷರ; ಪ್ರಪಂಚ ಪ್ರಳಯವಾದರೂ ಪುನಃ ಸೃಷ್ಟಿಗೆ ಬೀಜವಾಗಿ ಉಳಿದ ಮಾಯಾಶಕ್ತಿಯೇ ಅಕ್ಷರ; ಇವೆರಡೂ ಲೋಕವ್ಯವಹಾರಕ್ಕೆ ಸಂಬಂಧಪಟ್ಟವು. ಈ ಎರಡನ್ನೂ ಮೀರಿದ್ದು ಉತ್ತಮ ಪುರುಷ, ಪರಮಾತ್ಮನೆಂದರ್ಥ. ಈತನೇ ಈಗಲೂ ಈ ಮೂರು ಲೋಕ ಗಳನ್ನೂ ಬ್ರಹ್ಮಾಂಡವನ್ನೂ ಒಳಹೊಕ್ಕು ಪೋಷಿಸುವ ಈಶ್ವರನು. ಈ ಪರಮಾತ್ಮನು ಅನಾದಿಯಾದ್ದರಿಂದ ನಮ್ಮ ಶರೀರದೊಳಗೆ ನೆಲಸಿದ್ದರೂ ನಮ್ಮ ಸುಖದುಃಖಗಳ ಲೇಪವಿಲ್ಲದೆ, ಸರ್ವದಾ ನಿತ್ಯಮುಕ್ತನಾಗಿರುವನು. ಅನಾದಿತ್ವಾನ್ನಿರ್ಗುಣತ್ವಾತ್ ಪರಮಾತ್ಮಾಯಮವ್ಯಯಃ । ಶರೀರಸ್ಥೋಽಪಿ ಕೌಂತೇಯ ನ ಕರೋತಿ ನಲಿಪ್ಯತೇ । ಗೀತೆ. ಇಂತಹ ಪರಮಾತ್ಮನ ಸಾಕ್ಷಾತ್ಕಾರದಿಂದ ಇದೇ ಜನ್ಮದಲ್ಲಿ ಮುಕ್ತನಾಗ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಹುದು. ಪುನರ್ಜನ್ಮಕ್ಕೆ ಬೇಕಾದ ಕರ್ಮಬೀಜಗಳಿಲ್ಲದ್ದರಿಂದ, ಪುನರ್ಜನ್ಮವನ್ನು ಹೊಂದದೆ, ಸರ್ವದುಃಖಗಳಿಂದಲೂ ವಿಮುಕ್ತನಾಗಿ ಪರಿಪೂರ್ಣ ಸಚ್ಚಿದಾನಂದ ಸ್ವರೂಪವನ್ನು ಹೊಂದುವನು.

ತತ್‌ಪದಂ ತತ್‌ಪರಿಮಾರ್ಗಿತವ್ಯಂ ಯಸ್ಮಿನ್‌ಗತಾ ನನಿವರ್ತಂತಿ ಭೂಯಃ ।
ತಮೇವ ಚಾದ್ಯಂ ಪುರುಷಂ ಪ್ರಪದ್ಯೇ ಯತಃ ಪ್ರವೃತ್ತಿಃ ಪ್ರಸೃತಾ ಪುರಾಣೀ ॥
ನಿರ್ಮಾನ ಮೋಹಾ ಜಿತಸಂಗದೋಷಾ ಅಧ್ಯಾತ್ಮನಿತ್ಯಾ ವಿನಿವೃತ್ತಕಾಮಾಃ ।
ದ್ವಂದ್ವೈರ್ವಿಮುಕ್ತಾಃ ಸುಖದುಃಖಸಂಜ್ಞೈಃ ಗಚ್ಛನ್ತ್ಯಮೂಢಾಃ
ಪದಮವ್ಯಯಂತತ್ ॥
ಯದ್‌ಗತ್ವಾನ ನಿವರ್ತಂತೇ ತದ್ಧಾಮ ಪರಮಂ ಮಮ ॥

—ಈ ಮೇಲಿನ ಶ್ಲೋಕಗಳಲ್ಲಿ ಮುಮುಕ್ಷುಗಳು ಸರ್ವಸಂಗಸಂನ್ಯಾಸ ಪೂರ್ವಕವಾಗಿ ಆ ಪರಮಪದವನ್ನು ಹುಡುಕಿ ತಿಳಿಯಬೇಕೆಂದು ಹೇಳಿದೆ. ಆ ಪರಮಪದ ಎಂಬುದಕ್ಕೆ ವಿಷ್ಣುವಿನ ಪದಸ್ಥಾನ ಎಂದರ್ಥ. ಇಲ್ಲಿ ವಿಷ್ಣುವಿನ ಪದ ಎಂದರೆ ಮುಕ್ತರು ಪಡೆಯುವ ವಿಷ್ಣುವಿನ ಸ್ವರೂಪ; ಅದು ವಿಷ್ಣುವಿರುವ ವೈಕುಂಠವೆಂಬ ಸ್ಥಾನವಲ್ಲ. ಇದು ನಿರಾಕಾರವಾದ ಕೇವಲ ಪರಿಪೂರ್ಣ ಸಚ್ಚಿದಾನಂದರೂಪ—"ತದ್ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ".

ಯಾರಿಂದ ಜಗತ್ತಿನ ಸೃಷ್ಟಿಯಾಗುವುದೋ ಅವನನ್ನೇ ಪರಮ ಪುರುಷ, ಪರಬ್ರಹ್ಮ, ಪರಮಾತ್ಮ, ವ್ಯಾಪಕನಾದ ವಿಷ್ಣು ಎಂದು ಹೇಳುವುವು. ಮೂಲಭೂತವಾದ ಪರಮಾತ್ಮನ ಸ್ವರೂಪವು ಜಗತ್ತಿನಲ್ಲಿ ವ್ಯಾಪಿಸಿರುವುದು. ಎಲ್ಲಾ ಜೀವಜಂತುಗಳಲ್ಲಿ ಅವ್ಯಕ್ತವಾಗಿದ್ದು ಸಕಲ ಕಾರ್ಯಕ್ಕೂ ಪ್ರೇರಕನಾಗಿರುವನು. ದೇಹದ ಒಳಗೂ ಹೊರಗೂ, ಇಡೀ ಬ್ರಹ್ಮಾಂಡದಲ್ಲೂ, ಆಕಾಶವು ವ್ಯಾಪಕವಾಗಿರುವಂತೆ, ಪರಮಾತ್ಮನು ವ್ಯಾಪಕ, ಜೀವಾತ್ಮರು ಘಟಾಕಾಶ, (ಘಟದ ಛಿದ್ರ) ಕರಕಾಕಾಶ (ಕಮಂಡಲುವಿನ ಛಿದ್ರ) ಸೂಜಿಯ ಮೊನೆಯಂತೆ ಸಣ್ಣದಾಗಿ ಅಹಂ ಎಂದು ಕಾಣಿಸಿಕೊಳ್ಳುವ ಚೇತನರು. ಪರಮಾತ್ಮನಲ್ಲಿ ಸೇರಿಕೊಂಡ ಮೇಲೆ ಪುನಃ ಸಂಸಾರ ಮಂಡಲಕ್ಕೆ ಬಂದು ಶರೀರಗಳಲ್ಲಿ ಹೊಕ್ಕು ಜನ್ಮವೆತ್ತುವುದಿಲ್ಲ. ಘಟವು ಒಡೆದುಹೋದರೆ, ಅದರ ಛಿದ್ರವು ಮಹಾಕಾಶದೊಳಗೆ ಐಕ್ಯವಾಗುವುದು: ಹಾಗೂ ಮಹಾ ಪ್ರಾಸಾದದೊಳಗಿನ ಆಕಾಶವು ಹೊರಗಿನ ಅಂಶವು ಒಂದೇ ಆಗಿದ್ದರೂ, ಪ್ರಾಸಾದ ಭೇದದಿಂದ ಬೇರ್ಪಟ್ಟಂತೆ ಇರುತ್ತದೆ, ಅದರೆ ಪ್ರಾಸಾದವನ್ನು ಒಡೆದು ನೆಲಸಮ ಮಾಡಿದಾಗ ಪ್ರಾಸಾದಾಕಾಶವು ಮಹಾಕಾಶದಲ್ಲಿ ಒಂದಾಗುವುದು. ಆದ್ದರಿಂದ ಜೀವಾತ್ಮನು ಮುಕ್ತನಾದರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಬ್ರಹ್ಮದೊಡನೆ ಏಕವಾಗುವನು. ಆವನ ಸ್ಥೂಲಶರೀರ ಸೂಕ್ಷ್ಮ ಶರೀರವೆರಡೂ ನಾಶವಾದರೆ, ವಿದೇಹ ಕೈವಲ್ಯದಲ್ಲಿ ಸರ್ವಥಾ ಪರಬ್ರಹ್ಮದೊಡನೆ ಏಕವಾಗುವನು. ಆದ್ದರಿಂದ ಪುನರ್ಜನ್ಮವೆತ್ತಲು ವಾಪಸ್ಸು ಬರುವುದಿಲ್ಲವೆಂದು ಅಭಿಪ್ರಾಯ.

ಜೀವನ್ಮುಕ್ತನ ಲಕ್ಷಣ

ಗೀತೆ ೨ನೇ ಅಧ್ಯಾಯದಲ್ಲಿ ಹೇಳಲಾಗಿರುವ ಸ್ಥಿತಪ್ರಜ್ಞನ ಲಕ್ಷಣವೇ ಜೀವನ್ಮುಕ್ತನ ಲಕ್ಷಣ.

ಪ್ರಜಹಾತಿ ಯದಾಕಾಮಾನ್ ಸರ್ವಾನ್ ಪಾರ್ಥಮನೋಗತಾನ್ ।
ಆತ್ಮನ್ಯೇವ ಚ ಸಂತುಷ್ಟಃ ಸ್ಥಿತಪ್ರಜ್ಞಸ್ತದೋಚ್ಯತೇ ॥
ದುಃಖೇಷ್ವನುದ್ವಿಗ್ನಮನಾಃ ಸುಖೇಷು ವಿಗತಸ್ಪೃಹಃ ।
ವೀತರಾಗಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ ॥
ಯಃ ಸರ್ವತ್ರ ಅನಭಿಸ್ನೇಹಃ ತತ್ತತ್ ಪ್ರಾಪ್ಯ ಶುಭಾಶುಭಂ ।
ನಾಭಿನಂದತಿ ನದ್ವೇಷ್ಟಿ ತಸ್ಯ ಪ್ರಜ್ಞಾ ಪ್ರತಿಷ್ಠಿತಾ ॥
ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ ।
ರಸವರ್ಜಂ ರಸೋಽಪ್ಯಸ್ಯ ಪರಂದೃಷ್ಟ್ವಾ ನಿವರ್ತತೇ ॥

(ಅ. ೨; ಶ್ಲೋ-೫೫-೫೯)

ಎಲ್ಲಾ ಆಸೆಗಳನ್ನು ತೊರೆದು ಪರಮಾತ್ಮನ ಆನಂದದಲ್ಲೇ ಮುಳುಗಿ ಸಂತುಷ್ಟನಾದವನು ಸ್ಥಿತಪ್ರಜ್ಞನು. ಪ್ರಾರಬ್ಧ ಕರ್ಮಾನುಸಾರ ಕದಾಚಿತ್ ಕಷ್ಟಗಳು ಬಂದರೂ ಸ್ವಲ್ಪವೂ ಉದ್ವೇಗಪಡದೆ, ಸುಖಸಂಪತ್ತುಗಳು ಬಂದೊದಗಿದರೂ ಅದರಲ್ಲಿ ನಿಸ್ಪೃಹನಾಗಿರುವನು. ಪ್ರಾರಬ್ಧಕರ್ಮಾನುಸಾರ ಲಭಿಸಿದ ಶುಭ, ಅಥವಾ ಅಶುಭ—ಇವುಗಳನ್ನು ಕಂಡು ಅಭಿನಂದಿಸುವುದೂ ಇಲ್ಲ, ದ್ವೇಷಿಸುವುದೂ ಇಲ್ಲ. ಅಲ್ಲದೆ ರೋಗಿಯು ನಿರಾಹಾರಿಯಾಗಿದ್ದಾಗ, ಒಳ್ಳೆಯ ಭೋಜನ ಪದಾರ್ಥಗಳೂ, ಗೀತ, ನೃತ್ಯ, ವಾದ್ಯ, ಮೃಷ್ಟಾನ್ನ ಭೋಜನ ಮುಂತಾದ ಯಾವುದೂ ರುಚಿಸುವುದಿಲ್ಲ. ಆದರಿಂದ ದೂರವಾಗಿರುತ್ತನೆ. ಆದರೂ ಮೊದಲು ಭೋಗಪಟ್ಟ ಪದಾರ್ಥಗಳ ರುಚಿಯು ಹೋಗಿರುವುದಿಲ್ಲ. ರೋಗವು ಹೋದ ಮೇಲೆ ಮತ್ತೆ ಆ ಪದಾರ್ಥಗಳು ಬೇಕೆಂದು ತೋರುತ್ತವೆ. ಸ್ಥಿತಪ್ರಜ್ಞನು ಮಾತ್ರ ಆತುರನಾದ ರೋಗಿಯಂತೆ ಇರುವುದಿಲ್ಲ; ಮತ್ತೇನೆಂದರೆ, ಪರಬ್ರಹ್ಮವನ್ನು ಸಾಕ್ಷಾತ್ಕಾರ ಮಾಡಿಕೊಂಡಾಗ, ಭೋಗವಸ್ತುಗಳ ಮೇಲಿನ ಅಭಿರುಚಿಯೂ ನಾಶವಾಗುತ್ತದೆ. ಈ ಬಗೆಯ ಲಕ್ಷಣವಿರುವವನೇ ಸ್ಥಿತಪ್ರಜ್ಞನು. ಇವನೇ ಜೀವನ್ಮುಕ್ತನು—ಬದುಕಿರುವಾಗಲೇ ಮುಕ್ತನಾದವನು. ಉದಾಹರಣೆಗೆ ಶುಕಮುನಿಯು ಈ ಸ್ಥಿತಿಯಲ್ಲೇ ಇದ್ದವನೆಂಬುದು ಮಹಾ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಾರತದಿಂದ ತಿಳಿದುಬರುತ್ತದೆ. ವೇದವ್ಯಾಸರ ಅಪ್ಪಣೆಯಂತೆ ಶುಕಮುನಿಯು ಜನಕ ಮಹಾರಾಜನ ಅರಮನೆಗೆ ಜ್ಞಾನ ಪರೀಕ್ಷೆಗಾಗಿ ಹೋಗಿದ್ದನು. ತನ್ನ ಆಶ್ರಮದಿಂದ ನಡೆದುಕೊಂಡೇ ಹೋದನು. ಅರಮನೆ ಬಾಗಿಲಿನಲ್ಲಿ ಮಧ್ಯಾಹ್ನಪರ್ಯಂತ ಬಿಸಿಲಿನಲ್ಲಿ ನಿಂತುಕೊಂಡಿದ್ದನು. ನಡೆದ ಆಯಾಸವಾಗಲೀ ಬಿಸಿಲಿನ ತಾಪದಿಂದ ದುಃಖವಾಗಲಿ ಅವನಲ್ಲಿ ಕಾಣಲಿಲ್ಲ. ಜನಕ ಮಹಾರಾಜನು ಅನಂತರ ಅರಮನೆಯೊಳಗೆ ಕರೆಸಿ, ಅಂತಃಪುರದ ಸ್ತ್ರೀಯರಿಂದ ಉಪಚಾರ ಮಾಡಿಸಿದನು. ಅನಂತರ ಆಸ್ಥಾನಕ್ಕೆ ಕರೆಸಿ ಸಂಭಾಷಣೆ ನಡೆಸಿದನು. ಶುಕನ ಮುಖದಲ್ಲಿ ಬಹುದೂರದಿಂದ ನಡೆದು ಬಂದ ಆಯಾಸವಾಗಲೀ, ಬಿಸಿಲಿನ ತಾಪದ ದುಃಖವಾಗಲೀ ಕಾಣಲಿಲ್ಲ. ಶೈತ್ಯೋಪಚಾರಗಳನ್ನು ನಡೆಸಿದಾಗ ಮುಖದಲ್ಲಿ ಹೊಸ ಹರ್ಷ ಉಲ್ಲಾಸನೇನೂ ಕಾಣಲಿಲ್ಲ. ಹೀಗೆ, ಒಂದೇ ರೀತಿಯಾಗಿ ಗಂಭೀರವಾಗಿದ್ದ ಈ ಮುನಿಯನ್ನು ನೋಡಿ ಜನಕನು, ಇವನು ತತ್ತ್ವಜ್ಞಾನಿ, ಸ್ಥಿತಪ್ರಜ್ಞ, ಜೀವನ್ಮುಕ್ತನೆಂದು ಗ್ರಹಿಸಿದನು—ಎಂದು ಈ ಆಖ್ಯಾಯಿಕೆಯಿಂದ ತಿಳಿಯುವುದು. ಹೀಗೆ, ಗೌಡಪಾದರು, ಪರಾಶರರು, ವೇದವ್ಯಾಸರು, ಗೋವಿಂದ ಭಗವತ್ಪಾದರೇ ಮೊದಲಾದ ಸ್ಥಿತಪ್ರಜ್ಞರ ವಿಷಯ ಭಾರತ, ಭಾಗವತ, ಪುರಾಣಾದಿಗಳಿಂದ ತಿಳಿದುಬರುತ್ತದೆ. ಇಂತಹ ಸ್ಥಿತಪ್ರಜ್ಞರ ಲಕ್ಷಣವನ್ನು ತಿಳಿದುಕೊಂಡು ಸಾಧಕನು ಮುಕ್ತಿಗಾಗಿ ನಿವೃತ್ತಿಮಾರ್ಗದಲ್ಲಿದ್ದು ಸಾಧಿಸಿಕೊಂಡರೆ ತಾನೂ ಇವರಂತೆ ಸಿದ್ಧಪುರುಷನಾಗುತ್ತಾನೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಇಂತಹ ಪರಮಮುಕ್ತಿಗಾಗಿ ಎಲ್ಲರೂ ಗೀತೆಯಲ್ಲಿ ಉಪದಿಷ್ಟವಾಗಿರುವ ಸಾಧನ ಮಾರ್ಗದಲ್ಲಿ ನಿರತರಾದರೆ ಪರಮ ಶ್ರೇಯಸ್ಸು ಭಗವಂತನ ಅನುಗ್ರಹದಿಂದ ಉಂಟಾಗುತ್ತದೆ. ಇದೇ ಶಂಕರ ಭಗವತ್ಪಾದರವರು ಮಾಡಿರುವ ಗೀತಾತಾತ್ಪರ್ಯನಿರ್ಣಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ಗೀತಾ ಶಾಸ್ತ್ರದಲ್ಲಿ ಹೇಳಿರುವ ಯೋಗಗಳು

ಈ ಗೀತಾ ಶಾಸ್ತ್ರದಲ್ಲಿ ಮುಖ್ಯವಾಗಿ ಭಗವಂತನು ಉಪದೇಶಿಸಿರುವುದು ಎರಡು ಯೋಗಗಳು—ಕರ್ಮಯೋಗ ಮತ್ತು ಜ್ಞಾನಯೋಗ.

ಲೋಕೇಽಸ್ಮಿನ್ ದ್ವಿವಿಧಾ ನಿಷ್ಠಾ ಪುರಾಪ್ರೋಕ್ತಾಮಯಾನಘ ।
ಜ್ಞಾನಯೋಗೇನ ಸಾಂಖ್ಯಾನಾಂ ಕರ್ಮಯೋಗೇನ ಯೋಗಿನಾಮ್ ॥

–ಎಂದು. ಇವಕ್ಕೆ ಅಂಗವಾಗಿ ಭಕ್ತಿಯನ್ನು ಉಪದೇಶಿಸಿರುತ್ತಾನೆ. ಹಾಗೂ ಧ್ಯಾನ ಯೋಗಕ್ಕೆ ಅಂಗವಾಗಿ ಧ್ಯಾನವನ್ನು ಹೇಳಿರುತ್ತಾನೆ.

ಭಕ್ತ್ಯಾಮಾಮಭಿಜಾನಾತಿ ಯಾವಾನ್ ಯಶ್ಚಾಸ್ಮಿತತ್ತ್ವತಃ ।
ಭಕ್ತ್ಯಾ ಲಭ್ಯಸ್ತ್ವನನ್ಯಯಾ ।
ಮತ್ಕರ್ಮಕೃನ್ಮತ್ಪರಮೋಮದ್ಭಕ್ತಃ ಸಂಗವರ್ಜಿತಃ ।—

ಕೆಲವು ಆಚಾರ್ಯರು ಭಕ್ತಿಯೋಗವನ್ನೇ ಪ್ರಧಾನವಾಗಿ ಗೀತೆಯಲ್ಲಿ ಉಪದಿಷ್ಟವಾಗಿದೆಯೆಂದು ಹೇಳುತ್ತಾರೆ. ಆದರೆ, ಶ್ರೀ ಶಂಕರ ಭಗವತ್ಪಾದರು ಕರ್ಮ, ಧ್ಯಾನ, ಜ್ಞಾನ—ಇವುಗಳಿಗೆ ಭಕ್ತಿಯು ಅಂಗವೆಂದು ಹೇಳಿರುತ್ತಾರೆ.

ಯೋಗವೆಂದರೆ ಸಾಧನವೆಂದರ್ಥ. ಕರ್ಮವೆಂಬುದು ಚಿತ್ತಶುದ್ಧಿಗೂ, ತನ್ಮೂಲಕ ಜ್ಞಾನ ಪ್ರಾಪ್ತಿಗೂ ಸಾಧನವೆಂದು ಉಪದೇಶಿಸಿರುವರು. ನಿಷ್ಕಾಮ ಕರ್ಮಯೋಗವು ಜ್ಞಾನಕ್ಕೆ ಸಾಧಕ. ಜ್ಞಾನವು ನೇರವಾಗಿ ಮೋಕ್ಷಕ್ಕೆ ಸಾಧಕ.

ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂವಿಂದತಿ ಮಾನವಃ ।

ಅಜ್ಞಾನಿಯಾದವನು ಅಂದರೆ ಆತ್ಮ ತತ್ತ್ವವನ್ನು ಅರಿಯದವನು ಕರ್ಮಯೋಗಕ್ಕೆ ಅಧಿಕಾರಿ, ಹಾಗೂ ಧ್ಯಾನಯೋಗಕ್ಕೂ ಅಧಿಕಾರಿ, ಆದರೆ ಕರ್ಮಸಂನ್ಯಾಸವು ಧ್ಯಾನ ನಿಷ್ಠೆಗೆ ಆವಶ್ಯ. ಕರ್ಮಯೋಗವನ್ನು ಧ್ಯಾನನಿಷ್ಠೆ ಬರುವ ತನಕ ಅನುಸರಿಸ ಬೇಕೆಂದು ಗೀತೆ ತಿಳಿಸುತ್ತದೆ—

ಆರುರುಕ್ಷೋರ್ಮುನೇರ್ಯೋಗಂ ಕರ್ಮಕಾರಣಮುಚ್ಯತೇ ।
ಯೋಗಾರೂಢಸ್ಯ ತಸ್ಯೈವ ಶಮಃ ಕಾರಣ ಮುಚ್ಯತೇ ॥—

ಇಲ್ಲಿ ಶಮ—ಎಂದರೆ—ಕರ್ಮಸಂನ್ಯಾಸ ಎಂದರ್ಥ. ಅಂದರೆ, ಸಕಲ ಲೌಕಿಕ ವೈದಿಕ ಕರ್ಮಗಳ ತ್ಯಾಗ. ಸಂನ್ಯಾಸ ಪೂರ್ವಕವಾದ ತತ್ತ್ವಜ್ಞಾನವೇ (ಸರ್ವತ್ರ ಬ್ರಹ್ಮಾತ್ಮೈಕ್ಯ ಜ್ಞಾನವೇ) ಮೋಕ್ಷಕ್ಕೆ ಕಾರಣ, ಅದೇ ಸಾತ್ವಿಕ ಜ್ಞಾನ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭೇದ ಜ್ಞಾನವು ರಾಜಸ. ಅದು ಮೋಕ್ಷಕ್ಕೆ ಕಾರಣವಲ್ಲ ; ಅದು ಮಿಥ್ಯಾ ದರ್ಶನವೇ ಸರಿ. ಜ್ಞಾನವಿಲ್ಲದ ಕೇವಲ ಸಂನ್ಯಾಸದಿಂದ ಮೋಕ್ಷವು ಬರಲಾರದು.

ನ ಚ ಸಂನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ ।

ಜ್ಞಾನವು ಅನುಭವಕ್ಕೆ ಬಂದ ಅನಂತರ ಕರ್ಮಯೋಗವು ತತ್ತ್ವಜ್ಞಾನಿಗೆ ಇರುವುದಿಲ್ಲ. ಅವನು ಅನುಷ್ಠಾನ ಮಾಡಬೇಕಾದದ್ದಿಲ್ಲ. ಬಿಟ್ಟದ್ದರಿಂದ ಯಾವ ದೋಷವೂ ಇಲ್ಲ ; ಅದರ ಅನುಷ್ಠಾನದಿಂದ ಸ್ವಂತಕ್ಕೆ ಯಾವ ಪ್ರಯೋಜನವೂ ಇಲ್ಲ ಎಂದು—

ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹಕಶ್ಚನ । —

ಗೀತೆ ಹೇಳುತ್ತದೆ. ಆತ್ಮಜ್ಞಾನಿಯಾದವನು— "ನಾನು ಕರ್ತೃವೂ ಅಲ್ಲ, ಭೋಕ್ತೃವೂ ಅಲ್ಲ, ಸಂಸಾರಿಯೂ ಅಲ್ಲ, ವರ್ಣಾಶ್ರಮಾದಿ ಭೇದಗಳಿಲ್ಲದವನು, ಶುದ್ಧವಾದ ಪರಬ್ರಹ್ಮವೇ ನಾನು"—ಎಂದು ಅನುಭವ ಹೊಂದಿರುತ್ತಾನೆ. ಜ್ಞಾನ ಕರ್ಮಸಮುಚ್ಚಯವು ಸಮಪ್ರಧಾನವಾಗಿ ಎಂದಿಗೂ ಒಬ್ಬನಿಗೆ ಸೇರುವುದಿಲ್ಲ. ಹಕ್ಕಿಯು ಹಾರುವುದಕ್ಕೆ ಎರಡು ರೆಕ್ಕೆಗಳು ಹೇಗೋ ಹಾಗೆ ಸಮನಾಗಿದ್ದು ಮೋಕ್ಷಕ್ಕೆ ಕಾರಣವಲ್ಲ ಎಂದು ಸಿದ್ಧಾಂತ.

ಕದಾಚಿತ್ ತತ್ತ್ವಜ್ಞಾನಿಯು ಜನಕಾದಿಗಳಂತೆ ಕರ್ಮಯೋಗದಲ್ಲಿ ಇದ್ದಂತೆ ಪ್ರಸಿದ್ಧವಾಗಿದ್ದರೆ, ಅದು ಲೋಕಸಂಗ್ರಹಾರ್ಥವಾಗಿ.

ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ ।
ಲೋಕ ಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ ॥

ಇತ್ಯಾದಿ ಉದಾಹರಣೆಗಳಿಂದ ಈ ಅರ್ಥವು ಸ್ಪಷ್ಟವಾಗುತ್ತದೆ.

ಲೋಕಸಂಗ್ರಹವೆಂದರೆ ಅಜ್ಞಾನಿಗಳು ತತ್ತ್ವಜ್ಞಾನಿಗಳಂತೆ ತಮ್ಮ ಸ್ವಕರ್ಮವನ್ನು ಬಿಟ್ಟು ಮಾರ್ಗವನ್ನು ತಪ್ಪಿನಡೆದಾಗ ಅದನ್ನು ನಿರೋಧಿಸುವುದೇ ಲೋಕ ಸಂಗ್ರಹ. ಅದಕ್ಕಾಗಿಯೇ ಕೆಲವು ಜ್ಞಾನಿಗಳಾಗಿದ್ದವರು ಕರ್ಮವನ್ನು ಬಿಡದೇ ಯಾವ ಜ್ಜೀವನಿದ್ದು ವಿದೇಹ ಕೈವಲ್ಯವನ್ನು ಪಡೆದಿರುತ್ತಾರೆ. ಜನಕಾದಿಗಳಂತೆ– ಜ್ಞಾನೋತ್ತರದಲ್ಲಿ ತತ್ತ್ವಜ್ಞಾನಿಯು "ಅಜ್ಞಾನಿಯಂತೆ ನಾನು ಸತ್ಯವಾಗಿ ಕರ್ಮವನ್ನು ಮಾಡುತ್ತಿರುವೆ' ಎಂದು ತಿಳಿಯುವುದಿಲ್ಲ.

ನೈವ ಕಿಂಚಿತ್ ಕರೋಮೀತಿ ಯುಕ್ತೋಮನ್ಯೇತ ತತ್ತ್ವವಿತ್
ಗುಣಾಗುಣೇಷು ವರ್ತನ್ತ ಇತಿಮತ್ವಾನ ಸಜ್ಜತೇ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಗೀತೆಯು ತಿಳಿಸುತ್ತದೆ. ವಾಕ್—ಪಾಣಿಯೇ ಮುಂತಾದ ಆಯಾಯ ಇಂದ್ರಿಯಗಳು ವಿಹಿತವಾದ ತಮ್ಮ ತಮ್ಮ ಕಾರ್ಯಗಳನ್ನು ಪೂರ್ವವಾಸನಾನುಸಾರ ವಾಗಿ ಮಾಡುವವಷ್ಟೇ. ಹಾಗೆ ಮಾಡಿದರೂ ಆಸಕ್ತಿಯಿಲ್ಲದೆ, ನಿಜವಾದ ಕರ್ತೃತ್ವ ಬುದ್ಧಿಯೂ ಇಲ್ಲದೆ, ಕೇವಲ ನಟನೆ ಮಾತ್ರವಾಗಿ ಆಚರಿಸಿದಂತೆ ಎಂದರಿಯಬೇಕು. ಇದರಂತೆಯೇ ಜ್ಞಾನವು ಬಂದ ಮೇಲೆ ನಡೆದ ಕೆಲವು ಆಚರಣೆಗಳು ಲೋಕಕಲ್ಯಾಣ ಕ್ಕಾಗಿಯೇ ಇದ್ದವೆಂಬುದು ಸುನಿಶ್ಚಿತ. ಉದಾಹರಣೆಗೆ ವಸಿಷ್ಠರು ಪ್ರತ್ಯಕ್ ದೃಷ್ಟಿ ಯಿದ್ದವರು, ಜ್ಞಾನಿಗಳು, ಆದರೂ ದಶರಥಾಧಿಗಳಿಗೆ ರಾಜಪುರೋಹಿತರಾಗಿದ್ದ ರೆಂಬುದು ಇತಿಹಾಸ ಪ್ರಸಿದ್ಧ ; ಹಾಗೂ ವೇದವ್ಯಾಸರು ಭಾರತ, ಮಹಾಭಾರತ, ಮತ್ತು ಧರ್ಮಶಾಸ್ತ್ರಗಳು, ಬ್ರಹ್ಮಸೂತ್ರ ಇವುಗಳನ್ನು ಪಂಡಿತರರಿಗೂ, ಪಾಮರರಿಗೂ ಜ್ಞಾನದ ಮೂಲಕ ಶ್ರೇಯಸ್ಸುಂಟಾಗಲೆಂದು ಬರೆದರು. ಶುಕಮುನಿಗಳು ಭಾಗವತ ವನ್ನು ಪರೀಕ್ಷಿದ್ರಾಜನಿಗೆ ಬೋಧಿಸಿರುವುದು. ವೇದವ್ಯಾಸರು ಮೊದಲು ಸುಮಂತು, ಜೈಮಿನಿ, ವೈಶಂಪಾಯನ ಹಾಗೂ ಪೈಲ—ಎಂಬ ನಾಲ್ಕು ವೇದಗಳ ಶಾಖೆಗಳನ್ನು ಕಲಿತ ಶಿಷ್ಯರಿಗೆ ಬೋಧಿಸಿದರು. ಅವರಲ್ಲಿ ವೈಶಂಪಾಯನರಿಗೆ ಮಹಾಭಾರತವನ್ನು ಉಪದೇಶಿಸಿದರು. ಶುಕರಿಗೆ ತತ್ತ್ವೋಪದೇಶವನ್ನೇ ಮಾಡಿದರು. ಇವೆಲ್ಲವೂ ಲೋಕಸಂಗ್ರಹಕ್ಕಾಗಿ ಮಾಡಿದ ವ್ಯವಹಾರ. ಶ್ರೀ ಶಂಕರ ಭಗವತ್ಪಾದರು ತತ್ತ್ವ ಜ್ಞಾನಿಗಳೇ ಆಗಿದ್ದರೂ ನಾಸ್ತಿಕ ಮತಗಳನ್ನು ನಿರಾಕರಿಸಿ ಆಸ್ತಿಕ ಮತವನ್ನು ಪುನ ರುದ್ಧರಿಸಿದರು. ಕುಮಾರಿಲಭಟ್ಟರು ಕರ್ಮಕಾಂಡವನ್ನು ಉದ್ಧರಿಸಿದರು. ಆತ್ಮನ ಅಸ್ತಿತ್ವ, ಈಶ್ವರನ ಅಸ್ತಿತ್ವ—ಈ ಎಲ್ಲವನ್ನೂ ಶ್ರುತಿ, ಸ್ಮೃತಿ, ನ್ಯಾಯಗಳಿಂದ ಸ್ಥಾಪಿಸಿ ಬೋಧಿಸಿದರು. ಷಣ್ಮತಗಳನ್ನು ವೈದಿತ ಮತರೀತಿಯಲ್ಲಿ ಸ್ಥಿರಗೊಳಿಸಿ, ಭಕ್ತಿಯೋಗ ವನ್ನೋ, ಧ್ಯಾನಯೋಗವನ್ನೋ ಅವರವರಿಗೆ ಬೇಕಾದದ್ದನ್ನು ಪರಿಷ್ಕರಿಸಿದರು. ಎಲ್ಲ ಮತಗಳಲ್ಲೂ ಇರುವ ದೇವರೊಬ್ಬನೇ ಎಂದು ವೈದಿಕ ಮತವನ್ನು ಸ್ಥಿರಪಡಿಸಿದರು. ಈ ಬಗೆಯ ಲೋಕಕಲ್ಯಾಣಕರವಾದ ಕಾರ್ಯಗಳು ಜೀವನ್ಮುಕ್ತರಾದ ಜ್ಞಾನಿಗಳಲ್ಲೂ ಕಂಡುಬರುತ್ತದೆ. ಇವರೆಲ್ಲರೂ ಸ್ವಪ್ರಯೋಜನಕ್ಕಾಗಿ ಯಾವ ಕಾರ್ಯವನ್ನೂ ಮಾಡಿಲ್ಲ.

ಈ ಗೀತಾಶಾಸ್ತ್ರದಲ್ಲಿ ಉಪನಿಷತ್ತಿನಂತೆ ಬ್ರಹ್ಮವಿದ್ಯೆಯನ್ನು, ಸಗುಣೋಪಾಸನೆ ಯನ್ನು ಮತ್ತು ಅಷ್ಟಾಂಗ ಯೋಗಗಳನ್ನು ಅಲ್ಲಲ್ಲಿ ಉಪದೇಶಿಸಿರುವುದರಿಂದ ಉಪ ನಿಷತ್ತೆಂದೂ, ಬ್ರಹ್ಮವಿದ್ಯೆಯೆಂದೂ, ಯೋಗಶಾಸ್ತ್ರವೆಂದೂ ಕರೆದಿರುವುದು ಅತ್ಯಂತ ಉಚಿತವಾಗಿದೆ. ಇದರಲ್ಲೇ ಉಪಾಸನೆಗೆ ಬೇಕಾಗತಕ್ಕ ಸಗುಣ ಈಶ್ವರ ಸ್ವರೂಪ ವನ್ನೂ 7ನೇ ಅಧ್ಯಾಯದಲ್ಲಿ ಭಿನ್ನ ಭಿನ್ನ ರೂಪಗಳಲ್ಲಿ ಅಂದರೆ, ಶ್ರೀರಾಮ, ಪರಶು ರಾಮ, ಸೂರ್ಯ, ಚಂದ್ರ, ಮುಂತಾದ ಸ್ವರೂಪಗಳನ್ನು ವಿರಾಟ್‌ಸ್ವರೂಪವಾದ ವಿಶ್ವ ರೂಪ ಚಿಂತನೆಯನ್ನು ಹೇಳಿರುವುದು ಮಧ್ಯಮವರ್ಗದ ಸಾಧಕನಿಗೆ ಚಿತ್ತೈಕಾಗ್ರ್ಯ

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನು ಕೊಟ್ಟು ಜ್ಞಾನಕ್ಕೆ ಸಹಕರಿಸುವುದು. 13ನೇ ಅಧ್ಯಾಯದಲ್ಲಿ ಮುಖ್ಯಾಧಿಕಾರಿಯಾದ ಪರಮವಿರಕ್ತನಾದ ಸಂನ್ಯಾಸಿಗೆ ಬ್ರಹ್ಮಾತ್ಮೈಕ್ಯಜ್ಞಾನವನ್ನೂ, ಅದರ ಸಾಧನೆಗಳನ್ನೂ ಬೋಧಿಸಲಾಗಿದೆ. ಹೀಗೆ ಸೋಪಾನ ಕ್ರಮದಿಂದ—

1. ಕರ್ಮಯೋಗ,
2. ಧ್ಯಾನಯೋಗ, ಮತ್ತು
3. ಜ್ಞಾನಯೋಗ

ಇವುಗಳನ್ನು ಕ್ರಮವಾಗಿ ಸಾಧಿಸುವವರಿಗೆ ಪರಮಪುರುಷಾರ್ಥ ಸಿದ್ಧಿಸುವುದೆಂಬುದು ಗೀತೆಯ ಸಿದ್ಧಾಂತವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri